सत्यमेव जयते

# ಗ್ರಾಮ ಪಂಚಾಯತಿಗಳ ಚುನಾವಣೆ ಪ್ರಿಸೈಡಿಂಗ್ ಅಧಿಕಾರಿಗಳ ಕೈಪಿಡಿ




**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**ಬೆಂಗಳೂರು**

**2020**

# ಗ್ರಾಮ ಪಂಚಾಯತಿಗಳ ಚುನಾವಣೆ ಪ್ರಿಸೈಡಿಂಗ್ ಅಧಿಕಾರಿಗಳ ಕೈಪಿಡಿ

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**
**ಬೆಂಗಳೂರು**

**2020**

# ಮುನ್ನುಡಿ

ಮುಕ್ತ ಹಾಗೂ ನ್ಯಾಯಯುತವಾದ ಚುನಾವಣೆ ಪ್ರಜಾಪ್ರಭುತ್ವದ ಅಡಿಗಲ್ಲಾಗಿದೆ. ನಮ್ಮ ಸಂವಿಧಾನದಲ್ಲಿ ಚುನಾವಣಾ ಆಯೋಗಗಳನ್ನು ಸ್ವತಂತ್ರ ಸಂವಿಧಾನಿಕ ಪ್ರಾಧಿಕಾರಗಳಾಗಿ ರಚಿಸಿದೆ. ಅವುಗಳಿಗೆ ಚುನಾವಣಾ ಸಂಬಂಧಿತ ಮತದಾರರ ಯಾದಿಯನ್ನು ತಯಾರಿಸುವುದು ಮತ್ತು ಚುನಾವಣೆಗಳನ್ನು ನಡೆಸುವ ಬಗ್ಗೆ ಮೇಲ್ವಿಚಾರಣೆ, ನಿರ್ದೇಶನ, ನಿಯಂತ್ರಣಗಳ ಹೊಣೆಗಾರಿಕೆಯನ್ನು ನೀಡಲಾಗಿದೆ. ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಚುನಾವಣೆಗೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗವು ಮತ್ತು ರಾಜ್ಯದ ಸ್ಥಳೀಯ ಸಂಸ್ಥೆಗಳಾದ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ ರಾಜ್ಯ ಚುನಾವಣಾ ಆಯೋಗವು ಮೇಲ್ಕಂಡ ಅಧಿಕಾರವನ್ನು ಹೊಂದಿದೆ.

ಚುನಾವಣಾ ಸಂಬಂಧಿತ ಕರ್ತವ್ಯಗಳನ್ನು ಚುನಾವಣಾ ಆಯೋಗವು ಅನೇಕ ನಿರ್ವಾಹಕಗಳ ಮುಖಾಂತರ ನಿರ್ವಹಿಸಬೇಕಾಗಿದ್ದು ಅಂತಹವುಗಳಲ್ಲಿ ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಗಳ ಪಾತ್ರ ಪ್ರಮುಖವಾಗಿದ್ದು ಅವರು ಮತಗಟ್ಟೆಯ ಸಂಪೂರ್ಣ ನಿಯಂತ್ರಣ ಹೊಂದಿರುತ್ತಾರೆ ಚುನಾವಣಾ ಕರ್ತವ್ಯಯು ಒಂದು ಪವಿತ್ರ ಕಾರ್ಯವೆಂದು ಮತಗಟ್ಟೆ ಅಧಿಕಾರಿಗಳು ತಿಳಿಯಬೇಕಾಗಿದೆ. ಚುನಾವಣೆಗೆ ಯಾವುದೇ ಚ್ಯುತಿ ಬಾರದಂತೆ ನಿಯಮಾನುಸಾರ ಮತಗಟ್ಟೆಯಲ್ಲಿ ಕಾರ್ಯಗಳನ್ನು ಅನುಸರಿಸಿ ಎಲ್ಲಾ ಮತಗಟ್ಟೆ ಅಧಿಕಾರಿಗಳಿಗೂ, ಮತಗಟ್ಟೆ ಏಜೆಂಟ್‌ಗಳಿಗೂ ಮತದಾರರಿಗೂ ಮತ್ತು ಸಾರ್ವಜನಿಕರಿಗೆ ಮುಕ್ತ ಮತ್ತು ನ್ಯಾಯಯುತ ಮತದಾನ ಆಗಿರುವ ಬಗ್ಗೆ ಸಮಾಧಾನವಿರುವಂತೆ ಕರ್ತವ್ಯಗಳನ್ನು ನಿರ್ವಹಿಸಬೇಕಿರುವುದು ಅವಶ್ಯಕವಿರುತ್ತದೆ. ಕಾನೂನಿನಲ್ಲಿ **ಪ್ರಿಸೈಡಿಂಗ್ ಅಧಿಕಾರಿಗಳು** ಮುಕ್ತ ಹಾಗೂ ನ್ಯಾಯಯುತ ಚುನಾವಣೆಗಳನ್ನು ನಡೆಸಲು ಸಾಕಷ್ಟು ಅಧಿಕಾರವನ್ನು ಹೊಂದಿರುತ್ತಾರೆ. ಈ ಕಾರ್ಯವನ್ನು ನಿರ್ವಹಿಸುವಲ್ಲಿ ಅವರು ಚುನಾವಣಾ ಸಂಬಂಧಿತ ಕಾನೂನು ಮತ್ತು ನಡವಳಿಗಳನ್ನು ಸಂಪೂರ್ಣವಾಗಿ ಮನನ ಮಾಡಿಕೊಳ್ಳುವುದು ಅಗತ್ಯವಿರುತ್ತದೆ.

ಕರ್ನಾಟಕ ರಾಜ್ಯ ಚುನಾವಣಾ ಆಯೋಗದಿಂದ ಸೂಚನಾ ಪುಸ್ತಕವಾಗಿ ಈ ಪ್ರಕಟಣೆಯನ್ನು ಹೊರತಂದಿದ್ದು ಮತಗಟ್ಟೆಯಲ್ಲಿನ **ಪ್ರಿಸೈಡಿಂಗ್ ಅಧಿಕಾರಿಗಳು ಮತ್ತು ಅವರ ಸಹಾಯಕ ಅಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯಗಳು,** ಅನುಸರಿಸಬೇಕಾದ ನಿಯಮ, ನಿಬಂಧನೆಗಳು ಮತ್ತು ಕಾನೂನುಗಳ ವಿವರಗಳನ್ನು ನೀಡಲಾಗಿರುತ್ತದೆ.

**ಪ್ರಿಸೈಡಿಂಗ್ ಅಧಿಕಾರಿಗಳು ಈ ಪ್ರಕಟಣೆಯ ಸಂಪೂರ್ಣ ಪ್ರಯೋಜನ ಪಡೆಯುವರೆಂದು ಆಶಿಸಲಾಗಿದೆ.**

**ಡಾ: ಬಿ. ಬಸವರಾಜು**
**ಆಯುಕ್ತರು,**
**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**ಬೆಂಗಳೂರು**
**2020**

## ವಿಷಯ ಸೂಚಿ


| ಕ್ರಮ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| **1.** | ಪ್ರಿಸೈಡಿಂಗ್ ಅಧಿಕಾರಿಗಳ ಕರ್ತವ್ಯಗಳು | 1 |
| **2.** | ತರಬೇತಿ | 1 |
| **3.** | ಚುನಾವಣಾ ಸಾಮಗ್ರಿಗಳನ್ನು ಸ್ವೀಕರಿಸುವುದು | 1-3 |
| **4.** | ಮತದಾನದ ಹಿಂದಿನ ದಿನದ ಕ್ರಮಗಳು | 3-4 |
| **5.** | ಚುನಾವನಾ ದಿನದ ಕ್ರಮಗಳು | 4-9 |
| **6.** | ಮತದಾನ ನಡೆಯುವ ಕಿಂಚಿತ್ ಮೊದಲಿನ ಪ್ರಾರಂಬಿಕ ವ್ಯವಸ್ಥೆಗಳು | 9-12 |
| **7.** | ಮತಗಟ್ಟೆಯನ್ನು ಪ್ರವೇಶಿಸಲು ಅರ್ಹತೆಯುಳ್ಳ ವ್ಯಕ್ತಿಗಳು | 12-13 |
| **8.** | ಮತಗಟ್ಟೆಯೊಳಗೆ ಮತ್ತು ಸುತ್ತುಮುತ್ತ ಚುನಾವನಾ ಕಾನೂನನ್ನು ಜಾರಿಗೆ ತರುವುದು. | 13-16 |
| **9.** | ಮತದಾನ | 16-31 |
| **10.** | ಮತಗಟ್ಟೆ ಪ್ರಪತ್ರ/ನಮೂನೆಗಳ ಪುಸ್ತಕವನ್ನು ಬಳಸುವ ವಿಧಾನ | 32-34 |
| **ಅನುಬಂಧ** –I | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಉದ್ಧರಣ | 34-40 |
| **ಅನುಬಂಧ** –II | ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು 1993ರ ಉದ್ಧರಣ | 40-59 |
| **ಅನುಬಂಧ** –III | ಮತಗಟ್ಟೆ ಅಧಿಕಾರಿಯ ಕರ್ತವ್ಯಗಳು | 60-62 |
| **ಅನುಬಂಧ** –IV | ಮತಪೆಟ್ಟಿಗೆಗಳ ನಿರ್ವಹಣೆ | 63-64 |
| **ಅನುಬಂಧ** –V | ಮತಪೆಟ್ಟಿಗೆಗಳನ್ನು ಮಾದರಿ ಮತಗಟ್ಟೆಯ ರೂಪರೇಷೆ | 65 |
| **ಅನುಬಂಧ** –VI | ಮತಗಟ್ಟೆಯಲ್ಲಿ ಬಳಸುವ ಪ್ರಮುಖ ಪ್ರಪತ್ರ/ನಮೂನೆಗಳು | 66-81 |

## ಪ್ರಿಸೈಡಿಂಗ್ ಅಧಿಕಾರಿಗಳಿಗೆ ಸೂಚನೆಗಳು

**(1) ಪ್ರಿಸೈಡಿಂಗ್ ಅಧಿಕಾರಿಗಳ ಕರ್ತವ್ಯಗಳು**

ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ನಿಯಮಗಳು 1993ರ ನಿಯಮ 10ರ ಪ್ರಕಾರ ಮತಗಟ್ಟೆಯಲ್ಲಿ ವ್ಯವಸ್ಥೆ ಮತ್ತು ನಿಷ್ಪಕ್ಷಪಾತ ಮತದಾನವಾಗುವಂತೆ ನೋಡಿಕೊಳ್ಳುವುದು ಪ್ರಿಸೈಡಿಂಗ್ ಅಧಿಕಾರಿರವರ ಕರ್ತವ್ಯವಾಗಿರುತ್ತದೆ. ನಿಮಗೆ ಮತಗಟ್ಟೆಯಲ್ಲಿ ಚುನಾವಣೆ ನಡೆಸುವುದಕ್ಕೆ ಸಂಬಂಧಪಟ್ಟ ಕಾಯಿದೆ ಮತ್ತು ನಾವು ಕೊಟ್ಟ ಸೂಚನೆಗಳನ್ನು ಮನನ ಮಾಡಿಕೊಳ್ಳುವುದು ಅವಶ್ಯವಿದೆ.

ಮತಗಟ್ಟೆಯಲ್ಲಿ ಮತದಾನ ನಡೆಸುವುದಕ್ಕೆ ಸಂಬಂಧಪಟ್ಟ **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993** ಮತ್ತು ಅದರ ನಿಯಮಾವಳಿಗಳ ಉದ್ಧರಣಗಳನ್ನು ಅನುಬಂಧ 1 ಮತ್ತು 2 ರಲ್ಲಿ ಕ್ರಮವಾಗಿ ಲಗತ್ತಿಸಲಾಗಿದೆ.

**(2) ತರಬೇತಿ:–**

(i) ಪ್ರಿಸೈಡಿಂಗ್ ಅಧಿಕಾರಿರವರ ಮತ್ತು ಮೊದಲನೇ ಪೋಲಿಂಗ್ ಅಧಿಕಾರಿಯವರ ತರಬೇತಿಯ ಸಲುವಾಗಿ ಒಂದು ಅಥವಾ ಅದಕ್ಕೂ ಹೆಚ್ಚಿಗೆ ತರಬೇತಿ ತರಗತಿಗಳನ್ನು ನಡೆಸಲಾಗುವುದು; ಮತ್ತು ಅದನ್ನು ನಡೆಸುವ ಸ್ಥಳ, ದಿನಾಂಕ ಹಾಗೂ ವೇಳೆಯನ್ನು ಮುಂಚಿತವಾಗಿ ತಿಳಿಸಲಾಗುವುದು.

(ii) ನೀವು ತಪ್ಪದೆ ತರಬೇತಿ ತರಗತಿಗಳಲ್ಲಿ ಉಪಸ್ಥಿತರಿರಬೇಕು. ತಪ್ಪಿದಲ್ಲಿ ನಿಮ್ಮ ಅನುಪಸ್ಥಿತಿಯು ಕರ್ತವ್ಯ ಚ್ಯುತಿಯೆನಿಸುವುದು ಮತ್ತು ಆ ಬಗ್ಗೆ **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ಪ್ರಕರಣ 308ಡಿ ರಂತೆ** ಕ್ರಮ ತೆಗೆದುಕೊಳ್ಳಲಾಗುವುದು.

(iii) ತರಬೇತಿ ತರಗತಿಯಲ್ಲಿ ಮತದಾನದ ಪ್ರಕ್ರಿಯೆ ಮತ್ತು ಅದರ ವಿವಿಧ ಹಂತಗಳ ಬಗ್ಗೆ ವಿವರವಾಗಿ ತಿಳಿಸಲಾಗುವುದು, ಮತ್ತು ಅವಶ್ಯವಿದ್ದಲ್ಲಿ ಪ್ರಾತ್ಯಕ್ಷಿಕೆ ಮಾಡಿ ತೋರಿಸಲಾಗುವುದು. ಯಾವುದೇ ವಿಷಯ ತರಬೇತಿ ತರಗತಿಗಳಲ್ಲಿಯೇ ಸ್ಪಷ್ಟವಾಗದಿದ್ದಲ್ಲಿ ಆ ಬಗ್ಗೆ ವಿವರಣೆಗಳನ್ನು ಕೇಳಿ ತಿಳಿದುಕೊಳ್ಳತಕ್ಕದ್ದು. ಮುಂದೆ ಅದಕ್ಕೆ ಅವಕಾಶ ದೊರೆಯುವುದಿಲ್ಲ.

(iv) ನೀವು ವಿವಿಧ ಚುನಾವಣಾ ಸಾಮಗ್ರಿಗಳು, ನಮೂನೆಗಳು, ಲಕೋಟೆಗಳು ಇತ್ಯಾದಿ ಮತ್ತು ಅವುಗಳ ಉಪಯೋಗ, ಮತಗಟ್ಟೆಯನ್ನು ಉಪಯೋಗಿಸುವ ವಿಧಾನ, ಮತ ಚೀಟಿಗಳನ್ನು ಮತ ಪೆಟ್ಟಿಗೆಯಲ್ಲಿ ಹಾಕುವ ಪೂರ್ವದಲ್ಲಿ ಅದನ್ನು ಮಡಿಸುವ ರೀತಿ ಹಾಗೂ ಮತಪತ್ರಗಳ ಲೆಕ್ಕ ಮತ್ತು ಕಾಗದದ ಮುದ್ರೆಗಳ ಲೆಕ್ಕಗಳೂ ಸೇರಿದಂತೆ ವಿವಿಧ ನಮೂನೆಗಳನ್ನು ತುಂಬುವ ಬಗ್ಗೆ ತಿಳಿದುಕೊಳ್ಳತಕ್ಕದ್ದು.

**(3) ಚುನಾವಣಾ ಸಾಮಗ್ರಿಗಳನ್ನು ಸ್ವೀಕರಿಸುವುದು:–**

(i) ನೀವು ಮತದಾನದ ಹಿಂದಿನ ದಿನದಂದು, ಮುಂಚಿತವಾಗಿ ತಿಳಿಸಿದ ಸ್ಥಳದಲ್ಲಿ ಮತ್ತು ಸಮಯಕ್ಕೆ ಹಾಜರಿರುವುದು.

(ii) ನೀವು ತಿಳಿಸಿದ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು ಮತ್ತು ಸೇರಬೇಕಾದ ಸ್ಥಳವನ್ನು ತಲುಪಿದ ಕೂಡಲೇ ನಿಮ್ಮ ತಂಡದ ಇತರೆ ಸದಸ್ಯರ ಪರಿಚಯ ಮಾಡಿಕೊಳ್ಳಬೇಕು

(iii) ಚುನಾವಣಾ ನಮೂನೆಗಳು, ಮತಪೆಟ್ಟಿಗೆಗಳು ಮತ್ತು ಮತಪತ್ರಗಳೊಳಗೊಂಡ ಚುನಾವಣಾ ತಂಡಕ್ಕೆ ಸರಬರಾಜು ಮಾಡಲಾಗುವ ವಿವಿಧ ಸಾಮಗ್ರಿ, ನಮೂನೆ, ಇತ್ಯಾದಿಗಳ ಹೆಸರನ್ನು ತೋರಿಸುವ ಒಂದು ಪರಿಶೀಲನ ಪಟ್ಟಿಯನ್ನು ನಿಮಗೆ ಕೊಡಲಾಗುವುದು. ಚುನಾವಣಾ ತಂಡದ ಇತರೆ ಸದಸ್ಯರ ನೆರವಿನಿಂದ ಚುನಾವಣಾ ಸಾಮಗ್ರಿ, ನಮೂನೆ ಇತ್ಯಾದಿಗಳನ್ನು ಪಟ್ಟಿಯ ಪ್ರಕಾರ ಸರಬರಾಜು ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಯಾವುದಾದರೊಂದು ವಸ್ತುವು ಕೊಟ್ಟಿರದಿದ್ದಲ್ಲಿ ಇಲ್ಲವೆ ಕಡಿಮೆ ಸರಬರಾಜು ಮಾಡಿದ್ದರೆ ನೀವು ತಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಅದನ್ನು ತಂದು ಸರಿಪಡಿಸಿಕೊಳ್ಳಬೇಕು.

(iv) ಚುನಾವಣಾ ಸಾಮಗ್ರಿಗಳನ್ನು ಪಡೆಯಲು ಸೇರಿರುವ ಸ್ಥಳವನ್ನು ಬಿಡುವ ಮೊದಲು ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳತಕ್ಕದ್ದು:–

(ಎ) **ನಿಮಗೆ ಸರಬರಾಜು ಮಾಡಲಾದ ಮತದಾರರ ಪಟ್ಟಿಯು ನಿಮಗೆ ವಹಿಸಲಾದ ಮತಗಟ್ಟೆಯ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದೆಂದು, ಅದು ಪುರವಣಿ ಜೊತೆಗೆ ಎಲ್ಲಾ ದೃಷ್ಟಿಯಿಂದಲೂ ಪರಿಪೂರ್ಣವಾಗಿದೆ.**

(ಬಿ) ಸರಬರಾಜು ಮಾಡಲಾದ ಮತದಾರರ ಪಟ್ಟಿಗಳ ಎಲ್ಲಾ ಪ್ರತಿಗಳೂ ಎಲ್ಲಾ ದೃಷ್ಟಿಯಿಂದಲೂ ಒಂದೇ ಸಮವಾಗಿದೆ.

(ಸಿ) ಸರಬರಾಜು ಮಾಡಲಾದ ಮತಪೆಟ್ಟಿಗೆಗಳು ಸುಸ್ಥಿತಿಯಲ್ಲಿರ ಬೇಕು.

(ಡಿ) ಸರಬರಾಜು ಮಾಡಲಾದ ಅಳಿಸಲಾಗದಂತಹ ಮಸಿಯ ಸೀಸೆಯಲ್ಲಿ ಬೇಕಾದ ಪ್ರಮಾಣದಲ್ಲಿ ಮಸಿ ಇದೆ.

(ಇ) ನಿಮಗೆ ಸರಬರಾಜು ಮಾಡಲಾದ ಮತಪತ್ರಗಳು ನಿಮಗೆ ವಹಿಸಿದ ಮತಗಟ್ಟೆಯ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು, ಅವುಗಳಲ್ಲಿ ಯಾವುದೇ ತರಹದ ದೋಷಗಳಿಲ್ಲ, ನಿಮಗೆ ಸರಬರಾಜು ಮಾಡಲಾದ ವಿವರಗಳ ಜೊತೆಗೆ ಅನುಕ್ರಮ ಸಂಖ್ಯೆಗಳು ತಾಳೆಯಾಗುವವು ಮತ್ತು ಮತ ಪತ್ರಿಕೆಗಳ ಅನುಕ್ರಮ ಸಂಖ್ಯೆಗಳು ಹಾಗೂ ಅವುಗಳ ಪಕ್ಕ ಪ್ರತಿಗಳಲ್ಲಿ (Counterfoils) ಅಚ್ಚಾದ ಅನುಕ್ರಮ ಸಂಖ್ಯೆಗಳು ಒಂದೇ ಇವೆ.

(ಎಫ್) ನಿಮ್ಮ ಮತಗಟ್ಟೆಗೆ ಸಂಬಂಧಿಸಿದ ಮತ್ತು ಸರಿಯಾದ ವಿಭೇದ ತೋರುವ ಚಿಹ್ನೆಯ ಗುರುತನ್ನು (ಡಿಸ್ಟಿಂಗ್ವಿಶಿಂಗ್ ಮಾರ್ಕ್ ರಬ್ಬರ್ ಸ್ಟಾಂಪ್) ಸರಬರಾಜು ಮಾಡಲಾಗಿದೆ.

(ಜಿ) ನಿಮಗೆ ಸರಬರಾಜು ಮಾಡಲಾದ ಸ್ಟಾಂಪು ಪ್ಯಾಡುಗಳು ಸುಸ್ಥಿತಿಯಲ್ಲಿರುವ ಬಗ್ಗೆ ಪರಿಶೀಲಿಸಿಕೊಳ್ಳತಕ್ಕದ್ದು.

(v) ಸಾಮಗ್ರಿಗಳನ್ನು ತೆಗೆದುಕೊಂಡ ಕೂಡಲೆ ಚುನಾವಣಾ ತಂಡವನ್ನು ಅವರವರ ಚುನಾವಣಾ ಕೇಂದ್ರಗಳಿಗೆ ವಾಹನಗಳಲ್ಲಿ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಲಾಗುವುದು. ನಿಮ್ಮ ಚುನಾವಣಾ ತಂಡದ ಇತರೆ ಸದಸ್ಯರು ನಿಮ್ಮ ಜೊತೆಗೆ ನಿಮ್ಮ ಚುನಾವಣಾ ತಂಡಕ್ಕೆ ನಿರ್ದಿಷ್ಟಪಡಿಸಿದ ವಾಹನದಲ್ಲಿರುವಂತೆ ನೋಡಿಕೊಳ್ಳತಕ್ಕದ್ದು.

(4) **ಮತದಾನದ ಹಿಂದಿನ ದಿನದ ಕ್ರಮಗಳು:–**

(i) ಚುನಾವಣಾ ಕೇಂದ್ರವನ್ನು ತಲುಪಿದ ಕೂಡಲೇ ನೀವು ನಿಮಗೆ ನಿರ್ದಿಷ್ಟಪಡಿಸಿದ ಚುನಾವಣಾ ಕೇಂದ್ರಕ್ಕೆ ಕರೆದುಕೊಂಡು ಹೋಗಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು.

(ii) ರಾಜಕೀಯ ಪಕ್ಷಗಳು, ಚಿಹ್ನೆಗಳು, ಅಭ್ಯರ್ಥಿಗಳಿಗೆ ಹಂಚಿಕೆ ಮಾಡಿರುವ ಮುಕ್ತ ಚಿಹ್ನಗಳನ್ನು ಹೊಲುವ ಚಿತ್ರಗಳ ಪಟ್ಟಿಗಳು ಅಥವಾ ಚುನಾವಣಾ ಘೋಷಣೆ ಹೊಂದಿರುವ ಛಾಯಾಚಿತ್ರಗಳನ್ನು ಮತದಾನ ಕೇಂದ್ರಗಳಲ್ಲಿ ಪ್ರದರ್ಶಿಸಕೂಡದು. ಆದಕಾರಣ ಈಗಾಗಲೇ ಅವುಗಳು ಅಲ್ಲಿ ಇದ್ದರೆ ನೀವು ಅವುಗಳನ್ನು ಮತದಾನ ಮುಗಿಯುವವರೆಗೆ ತೆಗೆದುಹಾಕಲು ಕ್ರಮ ತೆಗೆದುಕೊಳ್ಳುವುದು;

(iii) ನೀವು ಮತ್ತೊಮ್ಮೆ ನಿಮಗೆ ಚುನಾವಣಾ ಸಾಮಗ್ರಿಗಳ ನಮೂನೆ ಇತ್ಯಾದಿಗಳು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆಯೇ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದು. ನಿಮಗೆ ಸರಬರಾಜು ಮಾಡಲಾದ ಮತಪತ್ರಿಕೆಗಳನ್ನು ನೀವು ಮತ್ತೊಮ್ಮೆ ಪರಿಶೀಲಿಸಿ ಮತಪತ್ರಗಳು ಮತ್ತು ಪಕ್ಕ ಪ್ರತಿಗಳು (Counterfoils) ಸರಿಯಾಗಿ ಮತ್ತು ಸಮವಾದ ಅನುಕ್ರಮ ಸಂಖ್ಯೆಗಳನ್ನು ಹೊಂದಿವೆಯೇ, ಮತ್ತು ಅವು ಯಾವ ದೃಷ್ಟಿಯಿಂದಲೂ ದೋಷ ಪೂರಿತವಾಗಿಲ್ಲವೆಂದು ಮನವರಿಕೆ ಮಾಡಿಕೊಳ್ಳಬೇಕು. ಯಾವ ಮತಪತ್ರಗಳ ಮೇಲಿನ ಅನುಕ್ರಮ ಸಂಖ್ಯೆಗಳು ಬಿಟ್ಟು ಹೋಗಿವೆಯೊ, ಅಥವಾ ತಪ್ಪಾಗಿ ಮುದ್ರಿತವಾಗಿದ್ದಲ್ಲಿ ಹಾಗೂ ಇತರೆ ದೋಷಪೂರ್ಣ ಮತ ಪತ್ರಿಕೆಗಳಿದ್ದಲ್ಲಿ ಅವುಗಳ ಮೇಲೆ "ರದ್ದು ಮಾಡಲಾಗಿದೆ: ದೋಷಪೂರ್ಣ ಮತಪತ್ರ" ಎಂದು ಬರೆದು ರದ್ದು ಮಾಡಬೇಕು, ಮತ್ತು ಅವುಗಳನ್ನು ಇದೇ ಕಾರಣಕ್ಕೆ ಸರಬರಾಜು ಮಾಡಲಾದ ಲಕೋಟೆಯಲ್ಲಿಡಬೇಕು. ಇಂತಹ ಮತಪತ್ರಿಕೆಗಳ ಪಕ್ಕದ ಪ್ರತಿಗಳ ಮೇಲೆಯೂ ಸಹ "ರದ್ದು ಮಾಡಲಾಗಿದೆ: ದೋಷಪೂರ್ಣ ಮತಪತ್ರ" ಎಂದು ಬರೆಯತಕ್ಕದ್ದು.

(iv) ಎಲ್ಲಾ ಚುನಾವಣಾ ಸಾಮಗ್ರಿಗಳು, ಮತಚೀಟಿಗಳನ್ನು ಸೇರಿಸಿಕೊಂಡು ನಮೂನೆ, ಮತದಾರರ ಪಟ್ಟಿ, ಇತ್ಯಾದಿಗಳನ್ನು ಸುರಕ್ಷಿತವಾದ ಸ್ಥಳದಲ್ಲಿ ಇಟ್ಟಿರಬೇಕು. ಆರಕ್ಷಕ (ಪೊಲೀಸ್ ಕಾನ್ಸ್‌ಟೇಬಲ್), ಗೃಹ ರಕ್ಷಕ (ಹೋಮ್‌ಗಾರ್ಡ್ಸ್) ರವರಲ್ಲದೇ ನೀವು ಅಥವಾ ನಿಮ್ಮ ಚುನಾವಣಾ ತಂಡದಲ್ಲಿ ಯಾರಾದರೊಬ್ಬ ಸದಸ್ಯರು ಯಾವಾಗಲೂ ಮತಗಟ್ಟೆಯಲ್ಲಿ ಇಟ್ಟಿರುವ ಚುನಾವಣಾ ಸಾಮಗ್ರಿಗಳನ್ನು ನೋಡಿಕೊಳ್ಳುತ್ತಿರಬೇಕು.

(v) ನೀವು ನಿಮ್ಮ ಚುನಾವಣಾ ತಂಡದಲ್ಲಿರುವ ಒಬ್ಬೊಬ್ಬ ಸದಸ್ಯರಿಗೂ ಅವನ/ಅವಳ ಕರ್ತವ್ಯವನ್ನು ಸವಿಸ್ತಾರವಾಗಿ ನಿರೂಪಣೆ ಮಾಡಿ ಪ್ರದರ್ಶನದೊಂದಿಗೆ ವಿವರಿಸಬೇಕು ಮತ್ತು ಅವರೆಲ್ಲರೂ ತಪ್ಪಿಲ್ಲದೆ ಅವರ ಕರ್ತವ್ಯವನ್ನು ನಿರ್ವಹಿಸಲು ಅರ್ಥಮಾಡಿಕೊಂಡಿದ್ದಾರೆಂದು ಖಾತ್ರಿ ಮಾಡಿಕೊಳ್ಳಬೇಕು. ಚುನಾವಣಾ ತಂಡದ ಅಧಿಕಾರಿಗಳು ನಿರ್ವಹಿಸಬೇಕಾದ ಕೆಲಸಗಳ ವಿವರಣೆಯನ್ನು **ಅನುಬಂಧ III** ರಲ್ಲಿ ಕೊಡಲಾಗಿದೆ.

**(5) ಚುನಾವಣಾ ದಿನದ ಕ್ರಮಗಳು :-**

(i) ಮತದಾನ ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಪ್ರಾರಂಭವಾಗಬೇಕು. ಆದುದರಿಂದ ನೀವು ಮತ್ತು ನಿಮ್ಮ ಚುನಾವಣಾ ತಂಡದ ಸದಸ್ಯರೆಲ್ಲರೂ ಮತಗಟ್ಟೆಯಲ್ಲಿ ವಿವಿಧ ವ್ಯವಸ್ಥೆಯನ್ನು ಮಾಡಲು ಮತದಾನ ಪ್ರಾರಂಭವಾಗುವ ಕನಿಷ್ಠ ಒಂದು ಗಂಟೆಯ ಮೊದಲು ಸಿದ್ಧವಾಗಿರುವುದು ಅಗತ್ಯ.

(ii) ನಿಮಗೆ ಒದಗಿಸಿದ ನಮೂನೆಗಳ ಜೊತೆಗೆ ಈ ಕೆಳಗೆ ಹೇಳಿರುವ ವಿವರಗಳನ್ನು ಸೂಚಿಸುವ ಪ್ರಕಟಣಾ ಪತ್ರಿಕೆಗಳು ಇವೆ ಎಂದು ಖಾತ್ರಿ ಪಡಿಸಿಕೊಳ್ಳತಕ್ಕದ್ದು.

(ಎ) ಚುನಾವಣಾ ಪ್ರದೇಶ ಅಥವಾ ಮತಗಟ್ಟೆಯಲ್ಲಿ ಮತ ಚಲಾಯಿಸುವವರ ವಿವರಗಳು

(ಬಿ) ಮತದಾನ ನಡೆಯುವ ವೇಳೆ

(ಸಿ) **ನಮೂನೆ-25** ರಲ್ಲಿ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿ

(ಡಿ) ಮತದಾರರು ಚಲಾಯಿಸಬಹುದಾದ ಮತಗಳ ಸಂಖ್ಯೆಯ ಸೂಚನೆ ಈ ಕೆಳಕಂಡ ನಮೂನೆಯಂತೆ

**<u>ನಮೂನೆ</u>**

-------------------- ತಾಲ್ಲೂಕು
-------------------- ಗ್ರಾಮ ಪಂಚಾಯತ್
-------------------- ಚುನಾವಣಾ ಕ್ಷೇತ್ರ

1. ಚುನಾಯಿಸಬೇಕಾದ ಒಟ್ಟು ಸದಸ್ಯರ ಸಂಖ್ಯೆ --------
2. ಪ್ರತಿಯೊಬ್ಬ ಮತದಾರನು ---------- ಮತ/ ಮತಗಳನ್ನು ಹೊಂದಿರುವನು.
3. ಮತದಾರನಿಗೆ ಒದಗಿಸಲಾದ ಮತಪತ್ರದಲ್ಲಿ-------- ಮತ/ ಮತಗಳನ್ನು ಮಾತ್ರ ಚಲಾಯಿಸಬೇಕು. (ಇಲ್ಲಿ ಎಷ್ಟು ಮತಗಳನ್ನು ಚಲಾಯಿಸಬೇಕೆಂಬುದು ನಮೂದಿಸಿರಿ) ಹೆಚ್ಚಿಗೆ ಮತ ನೀಡಿದರೆ ಮತಪತ್ರವು ಎಣಿಕೆಯ ಸಮಯದಲ್ಲಿ ತಿರಸ್ಕೃತವಾಗುವುದು.

(ರಿಟರ್ನಿಂಗ್ ಅಧಿಕಾರಿಯವರ ರುಜು)

ಅವುಗಳನ್ನು ಮತಗಟ್ಟೆಯ ಹೊರಗಡೆ ಎದ್ದು ಕಾಣುವಂತೆ ಪ್ರದರ್ಶಿಸಬೇಕು. ಸರಬರಾಜು ಮಾಡಿದ ಬೇರೆ ಯಾವುದಾದರು ಪ್ರಕಟಣಾ ಪತ್ರಗಳನ್ನು ಕೂಡ ಸೂಚನೆ ನೀಡಿದ ಹಾಗೆ ಮತಗಟ್ಟೆಗಳ ಒಳಗೆ ಹೊರಗೆ ಪ್ರದರ್ಶಿಸಬೇಕು.

(iii) ಕಾನೂನಿನ ಪ್ರಕಾರ ಮತಗಟ್ಟೆಯಿಂದ 100 ಮೀಟರ್ ವಿಸ್ತೀರ್ಣದೊಳಗೆ ಪ್ರಚಾರ ಮಾಡುವುದು ನಿಷೇಧಿಸಲಾಗಿದೆ. ಆದುದರಿಂದ ನೀವು ಮತಗಟ್ಟೆಯಿಂದ 100 ಮೀಟರ್ ದೂರವನ್ನು ಗುರುತಿಸಬೇಕು. ಮತದಾನ ನಡೆಯುತ್ತಿರುವ ಸಮಯದಲ್ಲಿ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಅಥವಾ ರಾಜಕೀಯ ನಾಯಕರ ಹೆಸರುಗಳನ್ನು ಹೊಂದಿರುವಂತಹ ಅಥವಾ ಅವರ ಭಾವಚಿತ್ರವನ್ನು ನಿರೂಪಿಸುವ ಚಿಹ್ನೆ ಅಥವಾ ಲಾಂಛನವನ್ನು ಧರಿಸಿರುವ ಯಾವುದೇ ವ್ಯಕ್ತಿಯನ್ನು ಮೇಲೆ ಹೇಳಿರುವ ಪ್ರದೇಶದೊಳಗೆ ಬಿಡಕೂಡದು, ಮತ್ತು ಯಾವುದೇ ವ್ಯಕ್ತಿಯನ್ನು ಆ ಪ್ರದೇಶದೊಳಗೆ ಪ್ರಚಾರ ಮಾಡಲು ಬಿಡಬಾರದು.

(iv) **ಮತಗಟ್ಟೆಯಲ್ಲಿನ ವ್ಯವಸ್ಥೆ:–**

ಮತದಾನ ಸಿಬ್ಬಂದಿ ವರ್ಗದವರು ಮತ್ತು ಮತದಾನ ಏಜೆಂಟರು ಕುಳಿತುಕೊಳ್ಳುವ ವ್ಯವಸ್ಥೆ, ಮತದಾನದ ಅಂಕಣದ ಸ್ಥಳ ನಿಶ್ಚಯ ಮತ್ತು ಬೇರೆ ವ್ಯವಸ್ಥೆಗಳು **ಅನುಬಂಧ–V** ರಲ್ಲಿನ ನಕ್ಷೆಯಲ್ಲಿನ ಹಾಗೆ ಇರಬೇಕು. ನಿಮಗೆ ಒದಗಿಸಿರುವ ಎರಡು ಮತದಾನದ ಅಂಕಣಗಳನ್ನು ಒದಗಿಸಿರುವ ಗುಂಡುಸೂಜಿಗಳ ಸಹಾಯದಿಂದ ಆದಷ್ಟು ದೂರ ಕೊಠಡಿಯ ಒಂದೊಂದು ಮೂಲೆಯಲ್ಲಿ ಇಟ್ಟಿರುವ ಮೇಜಿನ ಮೇಲೆ ಒಬ್ಬ ಮತದಾರನು ಮತ ಚೀಟಿಯ ಮೇಲೆ ಗುರುತು ಮಾಡುವಾಗ, ಪಕ್ಕದ ಅಂಕಣದಲ್ಲಿ ಮತದಾರನು ಮತ ಚೀಟಿಯ ಮೇಲೆ ಗುರುತು ಮಾಡುತ್ತಿರುವುದನ್ನು ನೋಡಲಾಗದ ರೀತಿಯಲ್ಲಿ ಇಟ್ಟಿರಬೇಕು; ಮತ್ತು ಮತದಾನದ ಅಂಕಣದ ಹಿಂದೆ ಮತ ಹಾಕಲು ಬಂದವರಿಗೆ ಯಾವ ಅನಾನುಕೂಲವು ಇಲ್ಲದೆ ಮತ ಪತ್ರದ ಮೇಲೆ ಗುರುತು ಹಾಕಲು ಸಾಕಷ್ಟು ಚಲನಾ ಸ್ಥಳವಿರಬೇಕು.

(v) **ಮತಪತ್ರಗಳನ್ನು ನೀಡುವುದಕ್ಕೆ ಮಾಡಬೇಕಾದ ಸಿದ್ಧತೆ–ವಿಭೇದ ಚಿಹ್ನೆಯ ಗುರುತನ್ನು ಹಾಕುವಿಕೆ:–**

ನಿಮಗೆ ನಿಮ್ಮ ಮತಗಟ್ಟೆಗೆ ಎಷ್ಟು ಮತದಾರರನ್ನು ಹಂಚಿರುವರೋ ಆ ಸಂಖ್ಯೆಯನ್ನು ಮುಂದಿನ 10ಕ್ಕೆ ಏರಿಸಿದ ಸಂಖ್ಯೆಗೆ ಸಮನಾದಷ್ಟು ಮತಪತ್ರಗಳನ್ನು ಅದಕ್ಕೆ ಲಗತ್ತಾಗಿರುವ ಪಕ್ಕ ಪ್ರತಿಯೊಂದಿಗೆ ಸರಬರಾಜು ಮಾಡಲಾಗುವುದು. ನಿಮಗೆ ಸರಬರಾಜು ಮಾಡಿದ ಮತಪತ್ರಗಳು ಸಾಮಾನ್ಯವಾಗಿ ಒಂದೊಂದರಲ್ಲಿ 50 ಇರುವ ಕಂತೆಗಳಲ್ಲಿರುತ್ತದೆ. ಆದರೆ, ಕೊನೆಯ ಕಂತೆಯಲ್ಲಿ 50ಕ್ಕೂ ಕಮ್ಮಿ ಮತಪತ್ರಗಳು ಇರಬಹುದು.

**ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ನಿಯಮಗಳು 1993ರ ನಿಯಮ 53ರ** ಪ್ರಕಾರ ಮತದಾರನಿಗೆ ಮತಪತ್ರ ಕೊಡುವ ಮೊದಲು ಪ್ರತಿ ಮತಚೀಟಿ ಮತ್ತು ಅದರ ಪಕ್ಕ ಪ್ರತಿಯ ಹಿಂದೆ ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಿದ ಹಾಗೆ ವಿಭೇಧ ಚಿಹ್ನೆಯ ಗುರುತನ್ನು ಹಾಕಬೇಕು.

ನಿಮಗೆ ಸರಬರಾಜು ಮಾಡಿದ ವಿಭೇದ ಚಿಹ್ನೆಯ ರಬ್ಬರ್ ಸ್ಟಾಂಪಿನಲ್ಲಿ ಒಂದು ವೃತ್ತದೊಳಗೆ ವೃತ್ತದ ಮೇಲಿನ ಭಾಗದಲ್ಲಿ ತಾಲ್ಲೂಕಿನ ಹೆಸರನ್ನು ಮೂರು ಅಕ್ಷರಗಳಲ್ಲಿ ಮತ್ತು ವೃತ್ತದ ಕೆಳಭಾಗದಲ್ಲಿ ಮತಗಟ್ಟೆಯ ಕ್ರಮಸಂಖ್ಯೆಯನ್ನು ನಮೂದಿಸಲಾಗಿರುತ್ತದೆ.

ವಿಭೇದ ಚಿಹ್ನೆಯ ಗುರುತನ್ನು ಮತಪತ್ರಕ್ಕೆ ಲಗತ್ತಿಸಿರುವ ಪಕ್ಕದ ಪ್ರತಿಯ ಹಿಂದೆ ಮತ್ತು ಮತಪತ್ರದ ಹಿಂದೆ ಬಲಭಾಗದ ಕೊನೆಯ ತುದಿಯಲ್ಲಿ ಹಾಕಬೇಕು.

ಎಲ್ಲಿ ಚುನಾವಣೆಗೆ ಸ್ವರ್ಧಿಸಿದ ಅಭ್ಯರ್ಥಿಗಳ ಸಂಖ್ಯೆ 9ಕ್ಕಿಂತ ಹೆಚ್ಚಿದ್ದರೆ ಮತ ಪತ್ರವನ್ನು ಎರಡು ಅಥವಾ ಹೆಚ್ಚು ಅಂಕಣದಲ್ಲಿ ಮುದ್ರಿಸಲಾಗಿರುತ್ತದೆ. ಅಂತಹ ಸಮಯದಲ್ಲಿ ವಿಭೇದ ಚಿಹ್ನೆಯ ಗುರುತನ್ನು  ಮತಪತ್ರಕ್ಕೆ ಲಗತ್ತಿಸಿರುವ ಪಕ್ಕ ಪ್ರತಿ ಮೇಲೆ ಅದರ ಬಲಭಾಗದ ಕೊನೆಯ ತುದಿಯಲ್ಲಿ ಹಾಕಬೇಕಾಗಿದ್ದರೂ, ಮತಪತ್ರದ ಮೇಲೆ ಆ ಚಿಹ್ನೆಯ ಗುರುತನ್ನು ಬೇರೆ ರೀತಿಯಲ್ಲಿ ಹಾಕಬೇಕು. ಎಲ್ಲಿ ಮತಚೀಟಿ ಎರಡು ಅಂಕಣದಲ್ಲಿ ಮುದ್ರಿತವಾಗಿರುತ್ತದೆಯೋ ಅಂತಹ ಮತಪತ್ರಗಳ ಹಿಂದೆ ಮತಚೀಟಿಯನ್ನು ನೆಟ್ಟಗೆ ಎರಡು ಭಾಗ ಮಾಡಲು ಹಾಕಿರುವ ಮಧ್ಯದ ಛಾಯಾರೇಖೆಯ ಬಲಭಾಗದ ಮೇಲಿನ ಅಂಚಿನಲ್ಲಿ ಹಾಕಬೇಕು. ಯಾವಾಗ ಮತ ಚೀಟಿಯು ಮೂರು ಅಂಕಣದಲ್ಲಿ ಮುದ್ರಿತವಾಗಿರುತ್ತದೆಯೋ ಅಂತಹ ಸಂದರ್ಭದಲ್ಲಿ ಮತಪತ್ರದ ಹಿಂಭಾಗದಲ್ಲಿ ವಿಭೇದ ಚಿಹ್ನೆಯ ಗುರುತನ್ನು ಎರಡು ಮತ್ತು ಮೂರು ಅಂಕಣದ ಮಧ್ಯದಲ್ಲಿ ಹಾಕಿರುವ ಮಧ್ಯದ ಛಾಯಾರೇಖೆಯ ಬಲಭಾಗದಲ್ಲಿ ಮೇಲಿನ ಅಂಚಿನಲ್ಲಿ ಹಾಕಬೇಕು. ಅಂತಹ ಮಧ್ಯರೇಖೆಗಳು ಮತಚೀಟಿಯ ಮುಂಭಾಗದಲ್ಲಿ ಮಾತ್ರ ಮುದ್ರಿಸಿದ್ದರೂ, ಅದರ ಛಾಯೆ ಮತಚೀಟಿಯ ಹಿಂಭಾಗದಲ್ಲಿ ಕಾಣುತ್ತಿರುತ್ತದೆ.

ಮತದಾನ ಪ್ರಾರಂಭವಾಗುವುದರ ಮೊದಲೇ ಎಲ್ಲಾ ಮತಪತ್ರಗಳ ಮತ್ತು ಅದಕ್ಕೆ ಲಗತ್ತಿಸಿರುವ ಪ್ರತಿಯ ಮೇಲೆ ಹೇಳಿದ ರೀತಿಯಲ್ಲಿ ವಿಭೇಧ ಚಿಹ್ನೆಯ ಗುರುತನ್ನು ಹಾಕಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು.

**ಸೂಚನೆ :** (ವಿಭೇದ ಚಿಹ್ನೆ = Distinguishing mark)

## ಮತಪತ್ರಗಳ ಮೇಲೆ ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಯವರ ಸಹಿ:

(ಅ) ಮೇಲೆ ಉಲ್ಲೇಖಿಸಿರುವ ನಿಯಮದ ಪ್ರಕಾರ ಒಂದೊಂದು ಮತಪತ್ರವನ್ನು ಮತದಾರನಿಗೆ ಕೊಡುವುದರ ಮೊದಲು, ಅದರ ಹಿಂದೆ ಪ್ರಿಸೈಡಿಂಗ್ ಅಧಿಕಾರಿಯು ಪೂರ್ತಿಯಾಗಿ ಸಹಿ ಮಾಡಬೇಕು. ದಯವಿಟ್ಟು ಗಮನದಲ್ಲಿಡಿ, ಮತಪತ್ರದ ಹಿಂಭಾಗದಲ್ಲಿ ಮಾತ್ರ ಸಹಿಮಾಡಬೇಕು, ಮತ್ತು ಅದರ ಪಕ್ಕ ಪ್ರತಿಯ ಮೇಲೆ ಮಾಡಬಾರದು. ನೀವು ಮತದಾನ ಪ್ರಾರಂಭವಾಗುವುದಕ್ಕೆ ಮೊದಲು ಎರಡು ಅಥವಾ ಮೂರು ಕಂತೆಗಳನ್ನು ಸಹಿ ಮಾಡಿ ಇಟ್ಟುಕೊಂಡಿರಬಹುದು. ಮಿಕ್ಕ ಮತಪತ್ರಗಳ ಮೇಲೆ ಅಗತ್ಯವಾದ ಹಾಗೆ ಮತದಾನ ಮುಂದುವರೆಯುತ್ತಿರುವಾಗ ಸಹಿ ಮಾಡಬಹುದು. ನೀವು ಮತದಾರರಿಗೆ ಕೊಡಲು ಎಷ್ಟು ಮತಪತ್ರಗಳು ಬೇಕಾಗುವುವೋ ಅಷ್ಟೇ ಸಹಿ ಮಾಡುವ ಹಾಗೆ ನೋಡಿಕೊಳ್ಳಬೇಕು. ಮತದಾನ ಮುಕ್ತಾಯವಾಗುವ ಹಂತದಲ್ಲಿರುವಾಗ ಒಂದೊಂದು ಮತಪತ್ರವನ್ನು ಮತ ಚಲಾಯಿಸಲು ಬಂದ

ಹಾಗೆ ಸಹಿ ಮಾಡಬೇಕು, ಇದು ಮತದಾನ ಕೊನೆಯಾದ ನಂತರ ಸಹಿ ಮಾಡಿದ ಯಾವುದೇ ಮತಪತ್ರ ಉಪಯೋಗಿಸದ ಮತಪತ್ರದ ಕಂತೆಯಲ್ಲಿ ಇರದ ಹಾಗೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ.

(vi) **ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರ ನೇಮಕಾತಿ; ಪ್ರತಿನಿಧಿಗಳ ನೇಮಕಾತಿ ಪತ್ರವನ್ನು ಹಾಜರುಪಡಿಸುವಿಕೆ:–**

ನಿಮ್ಮ ಎದುರಿಗೆ ಪ್ರತಿಯೊಬ್ಬ ಮತಗಟ್ಟೆಯ ಏಜೆಂಟರು **ಪ್ರಪತ್ರ–13** ರಲ್ಲಿ ಅಭ್ಯರ್ಥಿಯು, ಇಲ್ಲವೇ ಅವರ ಚುನಾವಣಾ ಏಜೆಂಟರು ಅವರನ್ನು ನೇಮಕಾತಿ ಮಾಡಿದ ಪತ್ರವನ್ನು ಹಾಜರುಪಡಿಸಬೇಕು. ಈ ನೇಮಕಾತಿಯು ನಿಮ್ಮ ಮತಗಟ್ಟೆಗೆ ಸಂಬಂಧಪಟ್ಟದ್ದು ಎಂದು ಪರಿಶೀಲಿಸಬೇಕು. ನಂತರ ಮತಗಟ್ಟೆಯ ಏಜೆಂಟರು **ಪ್ರಪತ್ರ–13**ನ್ನು ಪೂರ್ಣಗೊಳಿಸಿ ಅದರಲ್ಲಿ ಸಹಿ ಮಾಡಿ ಅದರಲ್ಲಿಯ ಘೋಷಣೆಯನ್ನು ನಿಮ್ಮ ಎದುರಿಗೆ ಸಹಿ ಮಾಡಿ ನಿಮಗೆ ನೀಡಬೇಕು. ನಂತರವೇ ಅವರನ್ನು ಮತಗಟ್ಟೆಯಲ್ಲಿ ಇರಗೊಡಬಹುದು. ಇಂತಹ ಎಲ್ಲಾ ನೇಮಕಾತಿ ಪತ್ರಗಳನ್ನು ಕಾಯ್ದಿರಿಸಿ ಮತದಾನ ಕೊನೆಗೊಂಡ ನಂತರ ರಿಟರ್ನಿಂಗ್ ಆಫೀಸರ್‌ಗೆ ಲಕೋಟೆಯಲ್ಲಿ ಕಳುಹಿಸಿಕೊಡಬೇಕು.

(Vii) **ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರುಗಳಿಗೆ ಅಪ್ಪಣೆ ಚೀಟಿ:–**

ಪ್ರತಿ ಅಭ್ಯರ್ಥಿಯು ಒಬ್ಬ ಮತಗಟ್ಟೆಯ ಏಜೆಂಟರನ್ನು ಮತ್ತು ಇಬ್ಬರು ನೆರವು (ರಿಲೀಫ್) ಏಜೆಂಟರುಗಳನ್ನು ಪ್ರತಿಯೊಂದು ಮತಗಟ್ಟೆಗೆ ನೇಮಕಾತಿ ಮಾಡಬಹುದು. ಆದಾಗ್ಯೂ ಯಾವುದೇ ಹೊತ್ತಿಗೆ ಅಭ್ಯರ್ಥಿಯ ಒಬ್ಬನೇ ಮತಗಟ್ಟೆಯ ಏಜೆಂಟರನ್ನು, ಪ್ರತಿನಿಧಿಯನ್ನು ಮತಗಟ್ಟೆಯ ಒಳಗೆ ಬಿಡಬೇಕು. ಮತಗಟ್ಟೆಯೊಳಗೆ ಪ್ರವೇಶ ನೀಡಿದ ಪ್ರತಿಯೊಬ್ಬ ಮತಗಟ್ಟೆಯ ಏಜೆಂಟರಿಗೆ ಮತಗಟ್ಟೆಯ ಒಳ ಹೊರಗೆ ಅವಶ್ಯವಿದ್ದಲ್ಲಿ ಹೋಗಿಬರುವುದಕ್ಕೆ ಅನುಕೂಲವಾಗಲು ಅಧಿಕಾರಯುತವಾದ ಅಪ್ಪಣೆ ಚೀಟಿಯನ್ನು ನೀಡಬೇಕು.

(Viii) **ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರ ಹಾಜರಾತಿ:–**

ಅಭ್ಯರ್ಥಿಗಳ ಮತಗಟ್ಟೆ ಏಜೆಂಟರುಗಳನ್ನು ಚುನಾವಣೆ ಪ್ರಾರಂಭವಾಗುವ 15 ನಿಮಿಷಗಳ ಮುಂಚೆ ಮತಗಟ್ಟೆಗೆ ತಲುಪಲು ಕೇಳಿಕೊಳ್ಳಬೇಕು. ಅಂದರೆ ಅವರಿಗೆ ಮತದಾನ ಶುರುವಾಗುವ ಮೊದಲು ಪ್ರಾರಂಭಿಕ ಕಾರ್ಯ ನಡೆದಾಗ ಅವರಿಗೆ ಹಾಜರಿರಲು ಅನುವಾಗುತ್ತದೆ. ಈ ಪ್ರಾರಂಭಿಕ ಕಾರ್ಯದ ಯಾವುದಾದರೊಂದು ಭಾಗವು ಅವರು ಮತಗಟ್ಟೆಗೆ ಬರುವ ಮುನ್ನವೇ ಮುಗಿದಿದ್ದರೆ ತಡವಾಗಿ ಬಂದವರ ಸಲುವಾಗಿ ಪುನಃ ಪ್ರಾರಂಭಿಸಬೇಕಾಗಿಲ್ಲ. ಮತಗಟ್ಟೆ ಏಜೆಂಟರ ಪ್ರತಿನಿಧಿಗಳ ನೇಮಕಾತಿಗೆ ಕಾಯ್ದೆಯಲ್ಲಿ ಯಾವುದೇ ಸಮಯದ ನಿರ್ಬಂಧ ಇರುವುದಿಲ್ಲವಾದ್ದರಿಂದ ಅವರು ತಡವಾಗಿ ಮತಗಟ್ಟೆಗೆ ಬಂದರೆ ಅವರಿಗೆ ಮತಗಟ್ಟೆಯಲ್ಲಿ ಮುಂದಿನ ನಡವಳಿಗಳಲ್ಲಿ ಭಾಗವಹಿಸಲು ಅನುಮತಿ ನೀಡಬೇಕು.

(ix) **ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರಿಗೆ ಮತಗಟ್ಟೆಯಲ್ಲಿ ಕುಳಿತಿರಲು ಆಸನದ ವ್ಯವಸ್ಥೆ:–**

ಗುರುತಿನ ಮತದಾರರ ಮತಪಟ್ಟಿಯನ್ನಿಟ್ಟುಕೊಂಡಿದ್ದ ಮತಗಟ್ಟೆಯ ಮೊದಲನೇ ಪೋಲಿಂಗ್ ಅಧಿಕಾರಿ ಮತ್ತು ಮತಪತ್ರಗಳನ್ನಿಟ್ಟುಕೊಂಡ ಎರಡನೇ ಪೋಲಿಂಗ್ ಅಧಿಕಾರಿಗಳ ಸಮೀಪದಲ್ಲಿ ಅವರ ಹಿಂದುಗಡೆ ಮತಗಟ್ಟೆಯ ಏಜೆಂಟರಿಗೆ ಆಸನ ಒದಗಿಸಬೇಕು. ಎಲ್ಲಿ ಇದು ಸಾಧ್ಯವಿಲ್ಲವೋ ಆ ಸಂರ್ಭದಲ್ಲಿ ಮತಗಟ್ಟೆಯ ಮೊದಲನೇ ಮತ್ತು ಎರಡನೇ ಪೋಲಿಂಗ್ ಅಧಿಕಾರಿಗಳ ಅಭಿಮುಖವಾಗಿ ಆಸನ ಒದಗಿಸಬೇಕು. ಅವರಿಗೆ ಮತದಾರರ ಮುಖ ನೋಡಲು ಮತ್ತು ಗುರುತಿನ ಬಗ್ಗೆ ಅವಶ್ಯಕತೆ ಇದ್ದಾಗ ಆಕ್ಷೇಪಣೆ ಎತ್ತಲು ಅವಕಾಶ ಇರುವಂತೆ ಆಸನ ವ್ಯವಸ್ಥೆ ಮಾಡಬೇಕು. ಅವರಿಗೆ ಮತಗಟ್ಟೆಯ ಒಳಗಡೆ ಓಡಾಡುವುದನ್ನು ನಿಷೇಧಿಸಬೇಕು.

(x) **ಮತಪೆಟ್ಟಿಗೆಯ ತಯಾರಿಕೆ (ಸಿದ್ಧತೆ):–**

ನೀವು ಮತಪೆಟ್ಟಿಗೆಯನ್ನು ಮತದಾನಕ್ಕೆ ತಯಾರಿಸಲು ಮತದಾನ ಪ್ರಾರಂಭವಾಗಲು ನಿಗಧಿಪಡಿಸಿದ ಗಂಟೆಗೆ 15 ನಿಮಿಷ ಮೊದಲು ಆರಂಭ ಮಾಡಬಹುದು. ಮತಪೆಟ್ಟಿಗೆ ಯನ್ನು ಮತಗಟ್ಟೆಯಲ್ಲಿ ಹಾಜರು ಇರುವ ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರಿಗೆ ಪರೀಕ್ಷಿಸಲು ಅವಕಾಶ ಕೊಡಿ, ಮತ್ತು ಅದು ಖಾಲಿ ಇದ್ದ ಬಗ್ಗೆ ಪ್ರದರ್ಶಿಸಿರಿ. ಅವಶ್ಯಕತೆ ಬಿದ್ದಾಗ ಮತಗಳ ಎಣಿಕೆ ಸಮಯದಲ್ಲಿ ಗುರುತು ಹತ್ತಲು ಅನುವಾಗಲು ಸರಬರಾಜು ಮಾಡಲಾದ ವಿಳಾಸ ಪಟ್ಟಿಯನ್ನು **ನಮೂನೆ–9** (ಬಿಳಿ ಕಾಗದ) ಅದರಲ್ಲಿ ಕೊಡಬೇಕಾದ ಎಲ್ಲ ವಿವರಗಳನ್ನು ತುಂಬಿ ಮತಪೆಟ್ಟಿಗೆಯೊಳಗೆ ಹಾಕಬೇಕು. ಬೇರೊಂದು ವಿಳಾಸ ಪಟ್ಟಿಯನ್ನು **ನಮೂನೆ–7** (ನೀಲಿ ಕಾರ್ಡ್) ಅದರಲ್ಲಿ ಕೊಡಬೇಕಾದ ಎಲ್ಲ ವಿವರಗಳನ್ನು ತುಂಬಿ ಮತಪೆಟ್ಟಿಗೆಯ ಹಿಡಿಕೆಗೆ ಕಟ್ಟಬೇಕು. ಮತಪೆಟ್ಟಿಗೆಯ ಹಿಡಿಕೆಗೆ ಕಟ್ಟುವ ವಿಳಾಸ ಪಟ್ಟಿಯ ಇತರೇ ವಿವರಗಳೊಂದಿಗೆ ಮತಪೆಟ್ಟಿಗೆಯ ಕ್ರಮ ಸಂಖ್ಯೆಯನ್ನು ಒಳಗೊಂಡಿರುತ್ತದೆ. ಮತಪೆಟ್ಟಿಗೆಯ ಕ್ರಮಸಂಖ್ಯೆಯು ಅಪೂರ್ಣಾಂಕ ಸಂಖ್ಯೆ ಇದ್ದು, ಪೆಟ್ಟಿಗೆಯ ಕ್ರಮಸಂಖ್ಯೆ ಹಾಗೂ ಒಟ್ಟು ಎಷ್ಟು ಮತಪೆಟ್ಟಿಗೆಗಳನ್ನು ಉಪಯೋಗಿಸಲಾಗಿದೆ ಎಂಬುದನ್ನು ತೋರಿಸತಕ್ಕದ್ದು. ಉದಾಹರಣೆಗೆ, ಒಂದು ಮತಗಟ್ಟೆಯಲ್ಲಿ ಮೂರು ಮತಪೆಟ್ಟಿಗೆಗಳನ್ನು ಉಪಯೋಗಿಸಿದ್ದರೆ, ಮತಪೆಟ್ಟಿಗೆಗಳ ಕ್ರಮ ಸಂಖ್ಯೆಗಳನ್ನು ಈ ಕೆಳಗಿನಂತೆ ನಮೂದಿಸಬೇಕು:–

(1) ಮೊದಲನೆಯ ಮತಪೆಟ್ಟಿಗೆಯ ಮೇಲೆ 1/3
(2) ಎರಡನೆಯ ಮತಪೆಟ್ಟಿಗೆಯ ಮೇಲೆ 2/3
(3) ಮೂರನೆಯ ಮತಪೆಟ್ಟಿಗೆಯ ಮೇಲೆ 3/3

ಮತ ಪೆಟ್ಟಿಗೆಯ ಹಿಡಿಕೆಗೆ ಕಟ್ಟುವ ವಿಳಾಸ ಪಟ್ಟಿಯಲ್ಲಿ ಈ ಕ್ರಮ ಸಂಖ್ಯೆಗಳನ್ನು ಮತದಾನ ಮುಗಿದ ಮೇಲೆ ಪೂರ್ತಿಗೊಳಿಸಬೇಕು.

(xi) **ಮತಪೆಟ್ಟಿಗೆಯ ಒಳಗೆ ಪೇಪರ್ ಸೀಲ್ ಅಂಟಿಸುವ ಬಗ್ಗೆ:–**

ಪ್ರತಿ ಮತಪೆಟ್ಟಿಗೆ ಸಲುವಾಗಿ ಒಂದೇ ಪೇಪರ್ ಸೀಲನ್ನು ಉಪಯೋಗಿಸಬೇಕು. ಪೇಪರ್ ಸೀಲನ್ನು ಮತಪೆಟ್ಟಿಗೆಯಲ್ಲಿ ಸೇರಿಸುವ ಮೊದಲು ಅದರ ಬಿಳಿ ಭಾಗದ ಮೇಲೆ ಮತಗಟ್ಟೆಯಲ್ಲಿ ಹಾಜರಿರುವ ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರ ಸಹಿ ತೆಗೆದುಕೊಳ್ಳತಕ್ಕದ್ದು, ಮತ್ತು ನೀವು ಕೂಡ ಸಹಿ ಮಾಡತಕ್ಕದ್ದು. ಅಭ್ಯರ್ಥಿ ಮತಗಟ್ಟೆಯ ಏಜೆಂಟರ ಸಹಿಯು **ಪ್ರಪತ್ರ–13**ರ ನೇಮಕಾತಿ ಪತ್ರಿಕೆಯಲ್ಲಿ ಮಾಡಿದ ಅವರ ಸಹಿಯೊಂದಿಗೆ ತಾಳೆ ಆಗುತ್ತದೆ ಎಂಬುದನ್ನೂ ಖಚಿತಪಡಿಸಿಕೊಳ್ಳಿ. ಮತಗಟ್ಟೆಯ ವಿಭೇದ ತೋರುವ ಚಿಹ್ನೆಯ ಗುರುತನ್ನು ಪೇಪರ್ ಸೀಲಿನ ಹಸಿರು ಮೇಲ್ಭಾಗದ ಮೇಲೆ ಸೀಲಿನ ಮಧ್ಯದಲ್ಲಿ ಹಾಕಿರಿ. ವಿಭೇದ ತೋರುವ ಚಿಹ್ನೆ ಮುದ್ರೆಯ ಒಳಗೆ ಮತಗಟ್ಟೆಯ ಅನುಕ್ರಮ ಸಂಖ್ಯೆಯ ನಂತರ ಒಂದು ಅಡ್ಡಗೆರೆಯನ್ನು ಹಾಕಿರಿ. ಮತಪೆಟ್ಟಿಗೆಯನ್ನು ಉಪಯೋಗಿಸುವ ಪ್ರಕಾರ 1 ಅಥವಾ 2 ಅಥವಾ 3 ಅಂಕೆಯನ್ನು ಸೇರಿಸಿರಿ. ಉದಾಹರಣೆಗೆ ಮೊದಲನೇ ಮತಪೆಟ್ಟಿಗೆಯ ಸೀಲಿನ ಮೇಲೆ ಮತಪೆಟ್ಟಿಗೆಯ ಕ್ರಮ ಸಂಖ್ಯೆಯ ನಂತರ ಅಂಕೆ 1ನ್ನು ಸೇರಿಸಿ ಎರಡನೇ ಮತಪೆಟ್ಟಿಗೆಯ ಸೀಲಿನ ಮೇಲೆ ಮತಗಟ್ಟೆಯ ಕ್ರಮಸಂಖ್ಯೆಯ ನಂತರ 2ನ್ನು ಸೇರಿಸಿ ಆ ಮೇಲೆ ಪೇಪರ್ ಸೀಲನ್ನು ಮತಪೆಟ್ಟಿಗೆಯ ಕಿಂಡಿಯಿಂದ ಹಸಿರು ಮೇಲ್ಭಾಗ ಕಾಣುವಂತೆ ಪೆಟ್ಟಿಗೆಯ ಮುಚ್ಚಳದ ಕೆಳಭಾಗದಲ್ಲಿರುವ ಚೌಕಟ್ಟಿನಲ್ಲಿ ಕಿಂಡಿಯ ಮೂಲಕ ವಿಭೇದ ಚಿಹ್ನೆಯ ಗುರುತು ಚಿಹ್ನೆ ಕಾಣುವ ಹಾಗೆ ಸೇರಿಸಬೇಕು. ಅದು ಅಲ್ಲಾಡದಂತೆ ಸ್ಥಿರವಾಗಿರಲು ಅದರ ಕೆಳಗೆ ಒಂದು ರಟ್ಟಿನ ತುಂಡನ್ನು ಒಳಸೇರಿಸಬೇಕು. ನಿಮಗೆ ಸರಬರಾಜು ಮಾಡಲಾದ ಪೇಪರ್ ಸೀಲು 10 ಇಂಚು ಉದ್ದವಿರುವುದರಿಂದ ಅದರ ತುದಿಯು ಮತಪೆಟ್ಟಿಗೆಯಲ್ಲಿ ನೇತಾಡದಂತೆ ಎರಡೂ ತುದಿಗಳನ್ನು ಮಡಚಬೇಕು. ಹಾಗೆ ಮಾಡದಿದ್ದರೆ ಮತಪತ್ರವನ್ನು ಮತಪೆಟ್ಟಿಗೆಯಲ್ಲಿ ನೂಕುವಾಗ ಪೇಪರ್ ಸೀಲು ಹರಿದುಹೋಗುವ ಸಂಭವವಿರುತ್ತದೆ. ಪೆಟ್ಟಿಗೆಯನ್ನು ಮತದಾನ ಮಾಡುವ ಸ್ಥಿತಿಯಲ್ಲಿ ಮತ್ತು ಮತಪತ್ರ ಸುಲಭವಾಗಿ ಒಳಸೇರುವಂತೆ ಅದರ ಸಂದು ಪೂರ್ಣ ತೆರದಿರಬೇಕು.

**(xii) ಪೇಪರ್ ಸೀಲಿನ ಲೆಕ್ಕ:–**

ಪ್ರತಿ ಪೇಪರ್ ಸೀಲನ್ನು ಉಪಯೋಗಿಸಿದ ಕೂಡಲೇ ಪೇಪರ್ ಸೀಲಿನ ಲೆಕ್ಕಪತ್ರದ ಭಾಗ ಒಂದರಲ್ಲಿ ಅದರ ಕ್ರಮ ಸಂಖ್ಯೆ ಮುಂತಾದುವನ್ನು ನಮೂದಿಸಬೇಕು.

ಮೇಲಿನಂತೆ ಸಿದ್ಧತೆಗಳನ್ನು ಮಾಡಿದ ನಂತರ ನೀವು ಕೆಳಗಿನಂತೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

**(6) ಮತದಾನ ನಡೆಯುವ ಕಿಂಚಿತ್ ಮೊದಲಿನ ಪ್ರಾರಂಭಿಕ ವ್ಯವಸ್ಥೆಗಳು (ಸಿದ್ಧತೆಗಳು)**

(i) ಮತಗಟ್ಟೆಯಲ್ಲಿ ಉಪಯೋಗಿಸುವ ಮತಪತ್ರಗಳ ಕ್ರಮ ಸಂಖ್ಯೆಯನ್ನು ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರಿಗೆ ಒದಗಿಸುವುದು ಮತ್ತು ಮತಪತ್ರಗಳ ಕಟ್ಟನ್ನು ಕಲಸುವುದು:–

ಮತದಾನ ಪ್ರಾರಂಭವಾಗುವ ಮೊದಲು ನೀವು ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರಿಗೆ ಮತಗಟ್ಟೆಯಲ್ಲಿ ಉಪಯೋಗಿಸುವ ಮತಪತ್ರಗಳ ಮೊದಲಿನ ಹಾಗೂ ಕೊನೆಯ ಕ್ರಮ ಸಂಖ್ಯೆಗಳನ್ನು ಮತ್ತು ಯುಕ್ತ ರದ್ದು ಮಾಡಿದ ನ್ಯೂನತೆಯುಳ್ಳ ಮತಪತ್ರಗಳ ಕ್ರಮ ಸಂಖ್ಯೆಯನ್ನು ಗುರುತು ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಮತದಾರರಿಗೆ ಕೊಡಲ್ಪಟ್ಟ ಮತಪತ್ರದ ಕ್ರಮಸಂಖ್ಯೆಯ ಟಿಪ್ಪಣಿ ಅಥವಾ ಬೇರೆ ಯಾವುದೇ ಟಿಪ್ಪಣಿಯನ್ನು ಅವರಿಗೆ ಬರೆದುಕೊಳ್ಳಲು ಅವಕಾಶವಿರದಂತೆ ಎಚ್ಚರಿಕೆ ವಹಿಸಬೇಕು. ಹಾಗೆ ಟಿಪ್ಪಣಿ ಮಾಡಿಕೊಳ್ಳಲು ಬಿಟ್ಟರೆ ಮತದಾನದ ಗೌಪ್ಯತೆಗೆ ಧಕ್ಕೆ ಬರಬಹುದು. ನಿಮಗೆ ಈ ತರಹದ ಟಿಪ್ಪಣಿ ತೆಗೆದುಕೊಳ್ಳದಂತೆ ನಿಬಂಧಿಸಲು ಅಧಿಕಾರವಿದೆ. ಎಚ್ಚರಿಕೆ ನೀಡಿದ್ದರೂ ಸಹ ಟಿಪ್ಪಣಿಯನ್ನು ಮಾಡಿಕೊಂಡಿದ್ದರೆ ಅವನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಮುಟ್ಟುಗೋಲು ಹಾಕಲು ಮತ್ತು ನೀವು ಆ ರೀತಿ ಟಿಪ್ಪಣಿ ಮಾಡಿಕೊಂಡವರನ್ನು ಮತಗಟ್ಟೆಯಿಂದ ಹೊರಗೆ ಹಾಕಲು ನಿಮಗೆ ಅಧಿಕಾರವಿದೆ.

ಯಾವುದೇ ಮತದಾರರಿಗೆ ನೀಡಲಾದ ಮತಪತ್ರಗಳ ಕ್ರಮ ಸಂಖ್ಯೆಯನ್ನು ಅಭ್ಯರ್ಥಿಗಳ ಮತಗಟ್ಟೆ ಏಜೆಂಟರಿಗೆ ಟಿಪ್ಪಣಿ ಮಾಡಿಕೊಳ್ಳಲು ಅವಕಾಶವಾಗದಂತೆ ಮತಪತ್ರಗಳ ಕಟ್ಟುಗಳನ್ನು ಕ್ರಮಾನುಗತವಾಗಿ ನೀಡದೆ ಕಲಸುವುದು. ನೀವು ಮೊದಲು ಎರಡು ಅಥವಾ ಮೂರು ಮತಪತ್ರಗಳ ಕಟ್ಟುಗಳನ್ನು ಕಲಸಿ ಸ್ವಾಧೀನವಿರುವ ಪೋಲಿಂಗ್ ಅಧಿಕಾರಿಯವರಿಗೆ ನೀಡಬೇಕು. ಅವುಗಳನ್ನು ಕ್ರಮಾನುಗತವಾಗಿ ನೀಡಬಾರದು. ಮತಪತ್ರಗಳ ಕಟ್ಟುಗಳ ಕಲಸುವಿಕೆಯ ಕ್ರಿಯೆಯನ್ನು ಮತದಾನದ ಕೊನೆ ಗಳಿಗೆ ಹತ್ತಿರವಾದಂತೆ ಪುನರಾವರ್ತಿಸಬಾರದು. ಹಾಗೇನಾದರೂ ಮಾಡಿದರೆ ಮತದಾರರಿಗೆ ನೀಡಲಾದ ಮತಪತ್ರಗಳ ಕ್ರಮ ಸಂಖ್ಯೆಗಳು ಅವಿಚ್ಛಿನ್ನವಾಗಿ ಒಂದೇ ಶ್ರೇಣಿಯಲ್ಲಿರಬಾರದು.

(ii) **ಗುರುತು ಮಾಡಲ್ಪಟ್ಟ ಮತದಾರರ ಪಟ್ಟಿ:-**

ಮತದಾನ ಪ್ರಾರಂಭವಾಗುವ ಮೊದಲು, ನೀವು ಮತಗಟ್ಟೆಯಲ್ಲಿರುವ ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರು ಮತ್ತು ಇತರರಿಗೆ ಗುರುತು ಮಾಡಲ್ಪಟ್ಟ ಮತದಾರರ ಪಟ್ಟಿಯ ಪ್ರತಿಗಳನ್ನು ಚುನಾವಣಾ ಕರ್ತವ್ಯಕ್ಕೆ ನೇಮಕವಾಗಿರುವವರ ಹೆಸರಿನ ಮುಂದೆ "ಇ.ಡಿ.ಸಿ" ಮತ್ತು ಅಂಚೆ ಮತಪತ್ರಗಳನ್ನು ನೀಡಲಾಗಿದ್ದ ಮತದಾರರ ಮುಂದೆ "ಪಿ.ಬಿ" ಗುರುತುಗಳನ್ನು ಬಿಟ್ಟು ಬೇರೆ ಇನ್ನಾವುವೂ ಗುರುತುಗಳನ್ನು ಹೊಂದಿಲ್ಲವೆಂದು ತೋರಿಸಬೇಕು.

(iii) **ಅಳಿಸಲಾಗದ ಮಸಿಯ ಬಗ್ಗೆ ಮುನ್ನೆಚ್ಚರಿಕೆ:-**

ಅಳಿಸಲಾಗದ ಮಸಿ ಇರುವ ಸಣ್ಣ ಸೀಸೆಯು ಅಲುಗಾಡದಂತೆ ಅಥವಾ ಬೀಳದಂತೆ ಮತ್ತು ಮತದಾನದ ವೇಳೆಯಲ್ಲಿ ಚೆಲ್ಲಿಹೋಗದಂತೆ ಸಾಕಷ್ಟು ಎಚ್ಚರಿಕೆ ವಹಿಸಲು ಅಳಿಸಲಾಗದ

ಮಸಿಯ ಜವಾಬ್ದಾರಿ ನಿರ್ವಹಿಸುವ ಎರಡನೆಯ ಪೋಲಿಂಗ್ ಅಧಿಕಾರಿಯವರಿಗೆ ಸೂಚನೆ ನೀಡಬೇಕು. ಈ ಉದ್ದೇಶಕ್ಕಾಗಿ, ಸಣ್ಣ ಸೀಸೆಯನ್ನು ನಿಮಗೆ ಕೊಟ್ಟಿರುವ ಪ್ಲಾಸ್ಟಿಕ್ ಕಡ್ಡಿಯನ್ನು ಮತದಾರರ ತೋರು ಬೆರಳಿಗೆ ಗುರುತು ಮಾಡುವಾಗ ಹೊರತುಪಡಿಸಿ ಇನ್ನುಳಿದಂತೆ ಸೀಸೆಯೊಳಗೆ ನೇರವಾಗಿ ಇಟ್ಟಿರುವಂತೆ ಖಾತ್ರಿಪಡಿಸಿಕೊಳ್ಳಿರಿ, ಮಸಿಯನ್ನು ಹಚ್ಚುವಾಗ ಕಡ್ಡಿಯನ್ನು ನೇರವಾಗಿ ಹಿಡಿದುಕೊಳ್ಳಬೇಕು. ಇಲ್ಲವಾದಲ್ಲಿ ಮಸಿಯ ಸ್ವಲ್ಪಭಾಗ ಕಡ್ಡಿಯಿಂದ ಇಳಿದು ಅದನ್ನು ಉಪಯೋಗಿಸುವ ಮತಗಟ್ಟೆ ಅಧಿಕಾರಿಯು ಬೆರಳು ಕೊಳಕು ಮಾಡಬಹುದು.

(iv) **ಅಳಿಸಲಾಗದ ಮಸಿಯನ್ನು ಹಚ್ಚುವ ರೀತಿ:–**

ಎಡಗೈ ತೋರುಬೆರಳಿನ ಉಗುರಿನ ಬುಡದ ತ್ವಚೆಯ ಮೇಲೆ ಅಳಿಸಲಾರದ ಮಸಿಯನ್ನು ಹಚ್ಚತಕ್ಕದ್ದು, ನಿಮಗೆ ಒದಗಿಸಲಾದ ಅಳಿಸಲಾಗದ ಮಸಿಯ ಬಾಟ್ಲಿಯೊಂದಿಗೆ ಪ್ಲಾಸ್ಟಿಕ್ ಕಡ್ಡಿಯಿಂದ ಮಸಿಯ ಗುರುತನ್ನು ಹಾಕತಕ್ಕದ್ದು. ಎಡಗೈಯಲ್ಲಿ ಬೆರಳುಗಳು ಇಲ್ಲದಿದ್ದಲ್ಲಿ ಆ ಕೈಯ ಬೇರೆ ಯಾವುದಾದರೂ ಬೆರಳಿಗೆ ಮಸಿಯ ಗುರುತನ್ನು ಹಾಕತಕ್ಕದ್ದು. ಎಡಗೈಯಲ್ಲಿ ಬೆರಳುಗಳು ಇಲ್ಲದಿದ್ದಲ್ಲಿ ಬಲಗೈ ತೋರುಬೆರಳಿನ ಮೇಲೆ ಮಸಿಯ ಗುರುತನ್ನು ಹಾಕಬೇಕು. ಮತ್ತು ಮತದಾರನಿಗೆ ಬಲಗೈ ತೋರುಬೆರಳು ಇಲ್ಲದಿದ್ದಲ್ಲಿ ಆ ಕೈಯ ತೋರುಬೆರಳಿನ ಬಲಗಡೆಯ ಯಾವುದಾದರೂ ಬೆರಳಿಗೆ ಮಸಿಯ ಗುರುತನ್ನು ಹಾಕಬೇಕು. ಮತದಾರನ ಯಾವ ಕೈಗಳಲ್ಲಿಯೂ ಬೆರಳುಗಳು ಇಲ್ಲದಿದ್ದಲ್ಲಿ ಸಂದರ್ಭಾನುಸಾರ ಅವನಿಗಿದ್ದ ಎಡಗೈ ಅಥವಾ ಬಲಗೈಯ ಮೋಟಿನ ಮೇಲೆ ಮಸಿಯ ಗುರುತನ್ನು ಹಾಕಬೇಕು.

(v) **ಮತದಾನದ ರಹಸ್ಯತೆಯ ಬಗ್ಗೆ ಎಚ್ಚರಿಕೆ:–**

ಮತದಾನ ಪ್ರಾರಂಭಿಸುವ ಮೊದಲು ಹಾಜರಿರುವ ಸಮಸ್ತರಿಗೂ **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 29**ರ ಉಪ ಬಂಧಗಳನ್ನು ವಿವರಿಸಿ.(ಅನುಬಂಧ–1ರಲ್ಲಿ ಹಾಗೂ ಪ್ರಪತ್ರ–13)

(vi) **ಮತಗಟ್ಟೆಯೊಳಗೆ ಮತದಾರರ ಪ್ರವೇಶದ ಕ್ರಮಗೊಳಿಸುವಿಕೆ.**

ಮತಗಟ್ಟೆಯೊಳಗೆ ಬರುವ ಮತದಾರರನ್ನು ಮತಗಟ್ಟೆಯ ಹೊರಗೆ ಕ್ಯೂನಲ್ಲಿ ನಿಂತಿರುವಂತೆ ವ್ಯವಸ್ಥೆ ಮಾಡಬೇಕು. ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಕ್ಯೂ ಮಾಡಬೇಕು. ಮತ್ತು ಮಹಿಳೆಯ ಕ್ಯೂನಿಂದ ಒಬ್ಬರಾದ ಬಳಿಕ ಪುರುಷರ ಕ್ಯೂನಿಂದ ಒಬ್ಬರಂತೆ ಸರದಿಯ ಮೇಲೆ ಮತಗಟ್ಟೆಯೊಳಗೆ ಬಿಡಬೇಕು. ಅಂಗವಿಕಲ ಮತ್ತು ಮಕ್ಕಳನ್ನು ಎತ್ತಿಕೊಂಡಿರುವ ಮಹಿಳಾ ಮತದಾರರಿಗೆ ಆದ್ಯತೆಯನ್ನು ಕೊಡಬೇಕು.

(vii) **ಚುನಾವಣೆಯನ್ನು ಮುಕ್ತ ಮತ್ತು ನಿಷ್ಪಕ್ಷಪಾತ ರೀತಿಯಲ್ಲಿ ನಡೆಸುವ ಸಂಬಂಧದಲ್ಲಿ ಪ್ರಿಸೈಡಿಂಗ್ ಅಧಿಕಾರಿಯಿಂದ ಘೋಷಣೆ:–**

ಚುನಾವಣೆ ಪ್ರಾರಂಭಿಸುವ ಮೊದಲು ನಿಮಗೆ ಒದಗಿಸಿರುವ **ನಮೂನೆ–12** ರಲ್ಲಿರುವಂತೆ ಘೋಷಣೆಯನ್ನು ಓದಿ ಹೇಳಬೇಕು. ನೀವು ಘೋಷಣೆಯನ್ನು ಮತಗಟ್ಟೆ ಯಲ್ಲಿರುವ ಎಲ್ಲಾ ವ್ಯಕ್ತಿಗಳೂ ಕೇಳಿಸಿಕೊಳ್ಳಬಲ್ಲಷ್ಟು ಉಚ್ಛಧ್ವನಿಯಲ್ಲಿ ಓದಬೇಕು. ; ಮತ್ತು ಅದರ ಮೇಲೆ, ಅಲ್ಲಿದ್ದ ಮತ್ತು ಹಸ್ತಾಕ್ಷರ ಹಾಕಲು ಇಚ್ಛೆಪಡುವ ಎಲ್ಲಾ ಅಭ್ಯರ್ಥಿಗಳ ಮತಗಟ್ಟೆ ಏಜೆಂಟರ ಹಸ್ತಾಕ್ಷರ ಪಡೆಯಬೇಕು. ಘೋಷಣೆಯ ಮೇಲೆ ಹಸ್ತಾಕ್ಷರ ನೀಡಲು ಇಚ್ಛೆ ಪಡದ ಏಜೆಂಟರ ಹೆಸರುಗಳನ್ನು ದಾಖಲೆ ಮಾಡಬೇಕು.

(7) **ಮತಗಟ್ಟೆಯನ್ನು ಪ್ರವೇಶಿಸಲು ಅರ್ಹತೆಯುಳ್ಳ ವ್ಯಕ್ತಿಗಳು:–**

(i) ನಿಮ್ಮ ಮತಗಟ್ಟೆಗೆ ವಹಿಸಲ್ಪಟ್ಟ ಮತದಾರರಲ್ಲದೇ, ಈ ಕೆಳಕಂಡ ವ್ಯಕ್ತಿಗಳನ್ನು ಮತಗಟ್ಟೆಯೊಳಗೆ ಸೇರಿಸಿಕೊಳ್ಳಬಹುದು.

(ಅ) ಪೋಲಿಂಗ್ ಅಧಿಕಾರಿಗಳು

(ಆ) ಅಭ್ಯರ್ಥಿ, ಅವನ ಚುನಾವಣಾ ಏಜೆಂಟ್ ಮತ್ತು ಒಂದು ಬಾರಿಗೆ ಅಭ್ಯರ್ಥಿಯ ಒಬ್ಬ ಮತಗಟ್ಟೆ ಏಜೆಂಟ್

(ಇ) ಜಿಲ್ಲಾಧಿಕಾರಿಗಳಿಂದ ಅಧಿಕಾರ ನೀಡಲ್ಪಟ್ಟ ಅಧಿಕಾರಿಗಳು

(ಈ) ರಾಜ್ಯ ಚುನಾವಣಾ ಆಯೋಗದಿಂದ ನಿಯುಕ್ತರಾದ ವೀಕ್ಷಕರು

(ಉ) ಚುನಾವಣೆ ಕರ್ತವ್ಯದಲ್ಲಿ ನಿರತವಾದ ಸರ್ಕಾರಿ ನೌಕರರು

(ಊ)ಮತದಾರ ಎತ್ತಿಕೊಂಡಿರುವ ಚಿಕ್ಕ ಮಗು

(ಎ) ಕುರುಡ ಅಥವಾ ಸಹಾಯವಿಲ್ಲದೇ ಚಲಿಸಲಾರದ ಅಂಗವಿಕಲ ಮತದಾರನೊಂದಿಗೆ ಬಂದಿರುವ ವ್ಯಕ್ತಿ

(ಏ) ಮತದಾರರನ್ನು ಗುರುತಿಸಲು ಅಥವಾ ಮತದಾನ ನಡೆಸಲು ನಿಮಗೆ ಸಹಾಯ ಮಾಡಲು ಅಗತ್ಯವಿರುವ ವ್ಯಕ್ತಿಗಳು.

(ii) ಚುನಾವಣಾಧಿಕಾರಿಯು ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ಗುರುತಿನ ಚೀಟಿ ಕೊಡುತ್ತಾರೆ. ಅವಶ್ಯಕತೆ ಉದ್ಭವಿಸಿದಲ್ಲಿ ಅದನ್ನು ತೋರಿಸಲು ನೀವು ಕೇಳಬಹುದು. ಹಾಗೆಯೇ ಅಭ್ಯರ್ಥಿಗಳ ಚುನಾವಣಾ ಏಜೆಂಟರನ್ನು ಅವರ ನೇಮಕಾತಿ ಪತ್ರದ ಎರಡನೇ ಪ್ರತಿಯನ್ನು ತೋರಿಸಲು ಕೇಳಬಹುದು.

(iii) ರಾಜ್ಯ ಚುನಾವಣಾ ಆಯುಕ್ತರಿಂದ, ಜಿಲ್ಲಾಧಿಕಾರಿಗಳಿಂದ ಅಧಿಕಾರ ನೀಡಲ್ಪಟ್ಟವರಲ್ಲಿ ಪತ್ರಿಕಾ ವರದಿಗಾರರು ಮತ್ತು ಛಾಯಾಚಿತ್ರಕಾರರಿರಬಹುದು. ಕೇಳಿದಲ್ಲಿ ಅವರಿಗೆ ಮತದಾನದ ವಿವರಗಳನ್ನು ನೀವು ನೀಡಬಹುದು. ಛಾಯಾಚಿತ್ರಕಾರರಿಗೆ ಮತದಾನದ ಪ್ರಗತಿಗೆ ತೊಂದರೆ ಬರದಂತೆ ಮತಗಟ್ಟೆಯ ಸಾಮಾನ್ಯ ವ್ಯವಸ್ಥೆಯ ಛಾಯಾಚಿತ್ರವನ್ನು ತೆಗೆದುಕೊಳ್ಳಲು ಅವಕಾಶ

ಕೊಡಬಹುದು. ಯಾವುದೇ ಸಂದರ್ಭದಲ್ಲಿ **ಮತದಾರರು ಮತಪತ್ರದಲ್ಲಿ ಗುರುತು ಮಾಡುತ್ತಿರುವ ಚಿತ್ರವನ್ನು ತೆಗೆಯಲು ಅವರಿಗೆ ಅವಕಾಶ ಕೊಡಬಾರದು.**

(iv) ಕರ್ತವ್ಯನಿರತ ಸರ್ಕಾರಿ ನೌಕರರಲ್ಲಿ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಮತಗಟ್ಟೆಯಲ್ಲಿ ಮತದಾನ ಶಾಂತಿಯುತವಾಗಿ ಮತ್ತು ಸುಸೂತ್ರವಾಗಿ ನಡೆಯುತ್ತಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಲು ಮತಗಟ್ಟೆ ಸಂದರ್ಶಿಸುತ್ತಿರುವ ಸಂಚಾರಿ ದಳದ ಅಧಿಕಾರಿ / ನೌಕರರನ್ನೊಳಗೊಂಡಿರುತ್ತಾರೆ. ಕೇಂದ್ರ ಇಲ್ಲವೆ ರಾಜ್ಯದ ಸಚಿವರು ಅಥವಾ ಪೊಲೀಸ್ ಅಧಿಕಾರಿಗಳನ್ನು ಚುನಾವಣಾ  ಕರ್ತವ್ಯನಿರತ ಸರ್ಕಾರಿ ನೌಕರರೆಂದು ಪರಿಗಣಿಸಬಾರದು. ಸಮವಸ್ತ್ರದಲ್ಲಿರುವ ಅಥವಾ ಮುಫ್ತಿಯಲ್ಲಿರುವ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸ್ ಅಧಿಕಾರಿಗಳನ್ನು ಅನಿವಾರ್ಯ ಸಂದರ್ಭಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಅಥವಾ ಅಂತಹ ಉದ್ದೇಶಗಳಿಗಾಗಿ ನೀವಾಗಲಿ ಅಥವಾ ಚುನಾವಣಾಧಿಕಾರಿಯಾಗಲೀ ಕರೆದಾಗ ಮಾತ್ರ ಮತಗಟ್ಟೆ ಪ್ರವೇಶಿಸಬಹುದು. ಉಳಿದ ಸಂದರ್ಭದಲ್ಲಿ ಅವರಿಗೆ ಮತಗಟ್ಟೆ ಪ್ರವೇಶಿಸಲು ಅಧಿಕಾರವಿಲ್ಲ.

(v) ಮತಗಟ್ಟೆಗೆ ನೇಮಿಸಿದ್ದ ಪೊಲೀಸ್ ಕಾನ್ಸ್‌ಟೇಬಲ್/ಗೃಹ ರಕ್ಷಕ ದಳದವರನ್ನು ಮತಗಟ್ಟೆಯ ಹೊರಗೆ ಕೂಡಿಸಬೇಕು. ಯಾವುದೇ ನಿರ್ದಿಷ್ಟ ಉದ್ದೇಶಗಳಿಗಾಗಿ ಅವರ ಸಹಾಯ  ನಿಮಗೆ ಅಗತ್ಯವಿದ್ದಾಗ ಮಾತ್ರ ಒಳ ಕರೆಯಬಹುದು.

(vi) ಗುರುತಿಸುವ ಅಧಿಕಾರಿಗಳು:–

ಮತದಾರರನ್ನು ಗುರುತಿಸಲು ಅಥವಾ ಚುನಾವಣೆ ನಡೆಸಲು ನಿಮಗೆ ಬೇರಾವುದೇ ರೀತಿಯಲ್ಲಿ ಸಹಾಯ ಮಾಡಲು ಇರುವ ಗ್ರಾಮಾಧಿಕಾರಿ ಅಥವಾ ನೀವೇ ನೇಮಕಮಾಡಿಕೊಂಡ ಬೇರಾವುದೇ ಅಧಿಕಾರಿ ಅಥವಾ ಮಹಿಳಾ ಸಹಾಯಕರನ್ನು ಮತಗಟ್ಟೆಯ ದ್ವಾರದ ಹೊರಗೆ ಕೂಡಿಸಿರಬೇಕು. ಮತ್ತು ಅವರ  ಸಹಾಯ ನಿಮಗೆ ಬೇಕಾದಾಗ ಮಾತ್ರ ಅವರನ್ನು ಒಳ ಸೇರಿಸಬೇಕು.

**(8) ಮತಗಟ್ಟೆಯೊಳಗೆ ಮತ್ತು ಸುತ್ತಮುತ್ತ ಚುನಾವಣಾ ಕಾನೂನನ್ನು ಜಾರಿಗೆ ತರುವುದು:–**

(i) ನಿಷ್ಪಕ್ಷಪಾತತೆಯ ಅಗತ್ಯತೆ:–

ನಿಮ್ಮ ನಡತೆ, ದೃಢತೆ ಮತ್ತು ನಿಷ್ಪಕ್ಷಪಾತತೆ, ಅದರಲ್ಲಿಯೂ ಮುಖ್ಯವಾಗಿ ನಿಷ್ಪಕ್ಷಪಾತತೆ ಶಾಂತಿಗೆ ಭಂಗ ಬರದಂತಿರಲು ಅತಿಮುಖ್ಯ ರಕ್ಷಣೆಗಳು. ಪಕ್ಷಗಳನ್ನು ಮತ್ತು ಅಭ್ಯರ್ಥಿಗಳನ್ನು ಸಮನಾಗಿ ಕಾಣಬೇಕು. ವಾದಿಸಲಾದ ಪ್ರತಿ ಅಂಶವನ್ನು ದೃಢವಾಗಿಯೂ ನ್ಯಾಯಯುತವಾಗಿಯೂ ತೀರ್ಮಾನಿಸಬೇಕು. ನೀವಾಗಲೀ ಅಥವಾ ಮತಗಟ್ಟೆಯಲ್ಲಿರುವ ಬೇರೆ

ಯಾರೇ ಅಧಿಕಾರಿಯಾಗಲಿ ಯಾವುದೇ ಅಭ್ಯರ್ಥಿಯ ಚುನಾವಣಾ ನಿರೀಕ್ಷೆಯು ಹೆಚ್ಚಬಹುದೆಂದು ಅರ್ಥೈಸುವಂತಹ ಯಾವುದೇ ಕೆಲಸವನ್ನು ಮಾಡಬಾರದು.

(ii) ಬೆಂಬಲ ಕೋರುವುದನ್ನು ನಿಷೇಧಿಸುವುದು:–

ಈಗಾಗಲೇ ಹೇಳಿದಂತೆ ಮತಗಳಿಗಾಗಿ ಬೆಂಬಲ ಕೋರುವುದು ಅಥವಾ ಯಾವುದಾದರೂ ಮತದಾರನಿಗೆ ಮತ ಕೊಡೆಂದು ಕೇಳುವುದು ಅಥವಾ ಯಾವುದೇ ಮತದಾರನನ್ನು ಯಾವುದೇ ನಿರ್ದಿಷ್ಟ ಅಭ್ಯರ್ಥಿಗೆ ಮತ ಚಲಾಯಿಸಬಾರದೆಂದು ಮನವೊಲಿಸುವುದು ಅಥವಾ ಮತಗಟ್ಟೆಯಿಂದ 100 ಮೀಟರಿನೊಳಗೆ ಯಾವುದೇ ಸೂಚನಾ ಪತ್ರ ಅಥವಾ ಗುರುತನ್ನು ಪ್ರದರ್ಶಿಸುವುದನ್ನು (ಚುನಾವಣೆಗೆ ಸಂಬಂಧಿಸಿದಂತೆ ಅಧಿಕೃತ ಸೂಚನಾ ಪತ್ರವನ್ನು ಹೊರತುಪಡಿಸಿ) ಮೇಲಿನ ಅಧಿನಿಯಮದ, ಪ್ರಕರಣ 26ರ ಮೇರೆಗೆ ನಿಷೇಧಿಸಲಾಗಿದೆ.

(iii) ಅಭ್ಯರ್ಥಿಗಳ ಚುನಾವಣಾ ಕಟ್ಟೆ:–

ಮತದಾರರಿಗೆ ಅನಧಿಕೃತ ಗುರುತಿನ ಚೀಟಿಯನ್ನು ನೀಡಲು ಅಭ್ಯರ್ಥಿಯು ಮೇಜು ಮತ್ತು ಒಂದೆರಡು ಕುರ್ಚಿಯುಳ್ಳ ಚುನಾವಣಾ ಕಟ್ಟೆಯನ್ನು ಮತಗಟ್ಟೆಯಿಂದ 200 ಮೀಟರ್ ದೂರದ ಹೊರಗೆ ಸ್ಥಾಪಿಸಿಕೊಳ್ಳಬಹುದು. ಆದರೆ ಮತದಾರರಿಗೆ ತಡೆಯೊಡ್ಡಿ ವಿವಿಧ ಪಕ್ಷಗಳ ಕಾರ್ಯಕರ್ತರು ಗಲಭೆ ಮಾಡಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ತಂದು ಮುಕ್ತ, ನಿಷ್ಪಕ್ಷಪಾತ ಮತ್ತು ಶಾಂತಿಯುತವಾಗಿ ಚುನಾವಣೆ ನಡೆಯುವಲ್ಲಿ ಅಡ್ಡಿ ಬರುವಂತೆ ಅಂತಹ ಮೇಜುಗಳ ಸುತ್ತಲೂ ಗುಂಪು ಸೇರಿಕೊಳ್ಳಲು ಅವಕಾಶ ಕೊಡಬಾರದು. ಅಂತಹ ಘಟನೆಗಳನ್ನೇನಾದರೂ ನಿಮ್ಮ ಗಮನಕ್ಕೆ ತಂದಲ್ಲಿ ನೀವು ನ್ಯಾಯ ದಂಡಾಧಿಕಾರಿಗಳಿಗೆ ಅಥವಾ ನಿಮ್ಮ ಮತಗಟ್ಟೆಯ ಸುತ್ತಲೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಜವಾಬ್ದಾರಿ ಹೊಂದಿರುವ ಇತರ ಅಧಿಕಾರಿಗಳಿಗೆ ವರದಿ ಮಾಡಬೇಕು.

(iv) ಮತಗಟ್ಟೆ ಯೊಳಗೆ ಅಥವಾ ಹತ್ತಿರ ಅಶಿಸ್ತುತನದ ವರ್ತನೆ:–

ಯಾರಾದರೂ ಮತಗಟ್ಟೆಯೊಳಗೆ ಅಥವಾ ಹತ್ತಿರ ಅಶಿಸ್ತಿನಿಂದ ವರ್ತಿಸಿದರೆ, **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ 1993 ಪ್ರಕರಣ 27**ರ ಉಪಬಂಧಗಳನ್ನು ಜಾರಿ ಮಾಡಿರಿ. ಯಾವುದೇ ವ್ಯಕ್ತಿಯು ಅಶಿಸ್ತಿನಿಂದ ವರ್ತಿಸಿದರೆ ಅವನನ್ನು ಅಲ್ಲಿಯ ಪೋಲೀಸ್ ಅಧಿಕಾರಿಯಿಂದ ದಸ್ತಗಿರಿ ಮಾಡಿಸಿರಿ. ಈ ತರಹದ ವರ್ತನೆಯನ್ನು ತಡೆಯಲು ಪೋಲೀಸರಿಗೆ ಕ್ರಮ ತೆಗೆದುಕೊಳ್ಳಲು ಮತ್ತು ಅವಶ್ಯವಿದ್ದ ಬಲ ಪ್ರಯೋಗಿಸಲು ಅಧಿಕಾರವಿರುತ್ತದೆ. ಆದರೆ ಈ ಅಧಿಕಾರವನ್ನು ನೀವು ನೀಡಿದ ಎಚ್ಚರಿಕೆ ಮತ್ತು ಮನವೊಲಿಸುವಿಕೆಯ ಪ್ರಯತ್ನ ವ್ಯರ್ಥವಾದಾಗ ಮಾತ್ರ ಈ ಅಧಿಕಾರ ಚಲಾಯಿಸಬೇಕು. ಧ್ವನಿವರ್ಧಕ ಮತ್ತು ಮೆಗಫೋನ್‌ಗಳ ಬಳಕೆಯು ಮತಗಟ್ಟೆಯಲ್ಲಿ ನಿಮ್ಮ ಕಾರ್ಯದಲ್ಲಿ ಆಡಚಣೆ ಉಂಟು ಮಾಡುತ್ತಿದ್ದರೆ ನೀವು ಅದನ್ನು ನಿಲ್ಲಿಸಲು ಮಾಡಲು ಕ್ರಮ ತೆಗೆದುಕೊಳ್ಳಬೇಕು. ಈ ಪ್ರಕರಣವು ನಿಗದಿತ ಅಂತರದ ಬಗ್ಗೆ ಏನೂ

ಹೇಳುವುದಿಲ್ಲ. ಅದು ಸಾಕಷ್ಟು ಹತ್ತಿರ ಅಥವಾ ದೊಡ್ಡ ಧ್ವನಿಯಲ್ಲಿ ಇದ್ದು, ಮತಗಟ್ಟೆಯಲ್ಲಿ ನಿಮ್ಮ ಕೆಲಸದಲ್ಲಿ ಅಡಚಣೆಯುಂಟು ಮಾಡುವುದು, ಎಂಬುದನ್ನು ನಿರ್ಧರಿಸುವುದು ನಿಮಗೆ ಬಿಟ್ಟಿರುತ್ತದೆ.

(v) ಅಶಿಸ್ತಿನಿಂದ ವರ್ತಿಸುವ ವ್ಯಕ್ತಿಗಳನ್ನು ಹೊರಹಾಕುವುದು:–

ಮತದಾನದ ವೇಳೆಯಲ್ಲಿ ಕಾನೂನು ಬದ್ಧ ನಿರ್ದೇಶನಗಳಿಗೆ ವಿಧೇಯಕನಾಗಿರದೇ ಅಶಿಸ್ತಿನಿಂದ ವರ್ತಿಸುವ ಯಾವುದೇ ವ್ಯಕ್ತಿಯನ್ನು ನಿಮ್ಮ ಆದೇಶದ ಮೇರೆಗೆ ಪೊಲೀಸ್ ಅಧಿಕಾರಿಯು ಇಲ್ಲವೇ ನಿಮ್ಮಿಂದ ಅಧಿಕಾರ ಪಡೆದ ಯಾವುದೇ ಅಧಿಕಾರಿಯು ಮತಗಟ್ಟೆಯಿಂದ ಹೊರಹಾಕಬಹುದು. ಮೇಲಿನ **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 28**ನ್ನು ನೋಡಿ.

(vi) ಮತದಾರರನ್ನು ಸಾಗಿಸಲು ಕಾನೂನು ಬಾಹಿರವಾಗಿ ವಾಹನಗಳನ್ನು ಬಾಡಿಗೆಗೆ ತೆಗೆದುಕೊಳ್ಳುವುದು:

ಮತದಾರರನ್ನು ಪುಕ್ಕಟ್ಟೆಯಾಗಿ ಮತಗಟ್ಟೆಗೆ ಸಾಗಿಸಲು ವಾಹನಗಳನ್ನು ಬಾಡಿಗೆಗೆ ತೆಗೆದುಕೊಳ್ಳುವುದು ಅಥವಾ ಪಡೆದುಕೊಳ್ಳುವುದು, ಮೇಲಿನ ಅಧಿನಿಯಮದ **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 22ರ** ಅನ್ವಯ ಭ್ರಷ್ಟ ಪದ್ಧತಿಯಾಗಿರುತ್ತದೆ. ಇದನ್ನು ತಡೆಯಲು ನಿಮಗೆ ಖಚಿತ ಅಧಿಕಾರವಿಲ್ಲ. ಈ ಬಗ್ಗೆ ನಿಮಗೇನಾದರೂ ದೂರು ಮಾಡಿದ್ದಲ್ಲಿ ಅದನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಸಂಬಂಧಿಸಿದ ದಂಡನಾಧಿಕಾರಿಗಳಿಗೆ ಕಳುಹಿಸಬೇಕು.

(vii) ಮತಗಟ್ಟೆಯಿಂದ ಮತಪತ್ರವನ್ನು ಹೊರಗೆ ಒಯ್ಯುವುದು :–

ಯಾವುದೇ ವ್ಯಕ್ತಿ ಯಾವುದೇ ಚುನಾವಣೆಯಲ್ಲಿ ವಂಚನೆಯಿಂದ ಮತಪತ್ರವನ್ನು ಹೊರಕ್ಕೆ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಪಟ್ಟರೆ ಅಥವಾ ಅಂತಹ ಕೃತ್ಯಕ್ಕೆ ಸ್ವಇಚ್ಛೆಯಿಂದ ಸಹಕರಿಸಿದರೆ, ಅಥವಾ ಉತ್ತೇಜನ ಕೊಟ್ಟರೆ, **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 32ರ** ಮೇರೆಗೆ ಶಿಕ್ಷಾರ್ಹನಾಗುತ್ತಾನೆ. ಯಾವುದೇ ವ್ಯಕ್ತಿ ಅಂತಹ ಅಪರಾಧವನ್ನು ಮಾಡಿದ್ದಾನೆ ಅಥವಾ ಮಾಡುತ್ತಿದ್ದಾನೆಂದು ನಿಮಗೆ ನಂಬಲರ್ಹಕಾರಣಗಳಿದ್ದರೆ ನೀವು ಅಂತಹ ವ್ಯಕ್ತಿಯು ಮತಗಟ್ಟೆಯನ್ನು ಬಿಡುವ ಮೊದಲು ದಸ್ತಗಿರಿ ಮಾಡಬಹುದು, ಅಥವಾ ಪೊಲೀಸ್ ಅಧಿಕಾರಿಗೆ ಅಂತಹ ವ್ಯಕ್ತಿಯನ್ನು ದಸ್ತಗಿರಿ ಮಾಡಲು ನಿರ್ದೇಶಿಸಬಹುದು. ಮತ್ತು ಅಂತಹ ವ್ಯಕ್ತಿಯ ಶೋಧನೆ ಮಾಡಬಹುದು. ಅಥವಾ ಅವನನ್ನು ಪೊಲೀಸ್ ಅಧಿಕಾರಿಯಿಂದ ಶೋಧಿಸಲ್ಪಡಬಹುದು. ಒಬ್ಬ ಮಹಿಳೆಯ ಶೋಧನೆ ಅಗತ್ಯವಿದ್ದಲ್ಲಿ ಸಭ್ಯತೆಗೆ ಲಕ್ಷ್ಯವಿಟ್ಟು, ಬೇರೊಬ್ಬ ಮಹಿಳೆಯಿಂದ ಶೋಧನೆ ಮಾಡಿಸಬೇಕು. ದಸ್ತಗಿರಿ ಮಾಡಿ ಶೋಧನೆ ಮಾಡಲ್ಪಟ್ಟ

ವ್ಯಕ್ತಿಯಿಂದ ಪಡೆದುಕೊಂಡ ಮತಪತ್ರವನ್ನು ಪೊಲೀಸ್ ಅಧಿಕಾರಿಗೆ ಸಂರಕ್ಷಣೆಗಾಗಿ ವಹಿಸಿಕೊಡಬೇಕು.

(viii) ಚುನಾವಣಾಧಿಕಾರಿಗಳಿಂದ ಅಧಿಕಾರ ಕರ್ತವ್ಯ ಭಂಗ:–

(9) **ಮತದಾನ:–** ಮೇಲೆ ಹೇಳಿದ ಅಧಿನಿಯಮದ **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 31ರ** ಪ್ರಕಾರ ಮತಗಟ್ಟೆ ಪ್ರಿಸ್ಯೆಡಿಂಗ್ ಅಧಿಕಾರಿ ಅಥವಾ ಪೊಲಿಂಗ್ ಅಧಿಕಾರಿಯು ಯುಕ್ತವಾದ ಕಾರಣವಿಲ್ಲದೆ ಯಾವುದಾದರೂ ಅಕೃತ್ಯವೆಸಗಿದರೆ ಇಲ್ಲವೇ ಅವನಿಂದ ಕರ್ತವ್ಯಚ್ಯುತಿಯಾಗಿದ್ದರೆ ಅದು ಅಪರಾಧವಾಗುತ್ತದೆ.

**(i) ಮತದಾನದ ಪ್ರಾರಂಭ:–**

ಮತದಾನವನ್ನು ನಿಗದಿತ ಗಂಟೆಗೆ ಸರಿಯಾಗಿ ಪ್ರಾರಂಭ ಮಾಡಿರಿ. ಆ ಹೊತ್ತಿಗೆ ಎಲ್ಲಾ ಪ್ರಾರಂಭಿಕ ಕೆಲಸಗಳು ಮುಗಿದಿರಬೇಕು. ಆದರೆ ದುರ್ದೈವವಶಾತ್ ಪ್ರಾರಂಭಿಕಗಳು ಮುಗಿಯದೇ ಇದ್ದರೆ ನೀವು ಮತದಾರರನ್ನು ನಿಗದಿಪಡಿಸಿದ ಗಂಟೆಗೆ ಮತಗಟ್ಟೆಯ ಒಳಗೆ ಬಿಡಲು ಪ್ರಾರಂಭಿಸಿ ಮತ್ತು ಮತದಾರರನ್ನು ಗುರುತಿಸುವುದು, ಅಳಿಸಲಾಗದ ಮಸಿಯನ್ನು ಹಚ್ಚುವ ಕಾರ್ಯವನ್ನು ನಿಮ್ಮ ಪ್ರಾರಂಭಿಕ ಕೆಲಸವನ್ನು ಮುಗಿಯುವರೆಗೆ ಮಾಡಿರಿ. ಆಕಸ್ಮಿಕ ಕಾರಣಗಳಿಂದಾಗಿ ನಿಮಗೆ ನಿಗದಿಪಡಿಸಿದ ಗಂಟೆಗೆ ಮತದಾನವನ್ನು ಪ್ರಾರಂಭಿಸಲು ಆಗದಿದ್ದರೆ ನೀವು ನಿಗದಿಪಡಿಸಿದ ಮತದಾನ ಸಮಯವನ್ನು ಹೆಚ್ಚಿಸಬಾರದು. ಮತ್ತು ಮತಗಟ್ಟೆಯಲ್ಲಿ ಹಾಜರಿದ್ದ ಮತದಾರರನ್ನು ಮತಹಾಕಲು ಅವಕಾಶ ಕೊಡಬೇಕು.

(ii) **ಮತದಾರರ ಗುರುತನ್ನು ಪ್ರಮಾಣಿಸಿ ನೋಡುವುದು:–**

ನೇರವಾಗಿ ಮತದಾರನು ಮತಗಟ್ಟೆ ಪ್ರವೇಶಿಸಿದ ಕೂಡಲೇ ಗುರುತಿನ ಪ್ರತಿಯ ಮತದಾರರ ಪಟ್ಟಿ ಇಟ್ಟುಕೊಂಡಿರುವ ಮತ್ತು ಮತದಾರರನ್ನು ಗುರುತಿಸುವ ಕಾರ್ಯ ನಿರ್ವಹಿಸಿರುವ ಮೊದಲನೇ ಪೊಲಿಂಗ್ ಅಧಿಕಾರಿಯು ಮತಗಟ್ಟೆಯಲ್ಲಿರುವ ಮತದಾರನ ಹೆಸರು, ವಯಸ್ಸು ಮುಂತಾದ ವಿವರಗಳ ಆಧಾರದ ಮೇಲೆ ಮತದಾರರನ್ನು ಗುರುತಿಸಬೇಕು. ಮತದಾರರನ್ನು ಗುರುತಿಸುವಾಗ ಅವರು ತಂದ ಗುರುತಿನ ಚೀಟಿಯ ಮೇಲೆ ಪೂರ್ಣವಾಗಿ ಅವಲಂಬಿಸಿರಬಾರದು. ಅವರು ಆ ಚೀಟಿಯನ್ನು ಮತದಾರನ ಹೆಸರನ್ನು ಮತದಾರರ ಪಟ್ಟಿಯಲ್ಲಿ ಕಂಡುಹಿಡಿಯಲು ಉಪಯೋಗಿಸಬೇಕು. ಮತ್ತು ಮತದಾರನಿಗೆ ಅವನ/ಅವಳ ಹೆಸರನ್ನು ಹೇಳಲು ಮತ್ತು ಅವಶ್ಯಕವಿದ್ದರೆ, ಮತದಾರರ ಪಟ್ಟಿಯಲ್ಲಿ ನಮೂದಿಸಿರುವ ಇತರೇ ಮಾಹಿತಿಯನ್ನು ಅವನ/ಅವಳ ನಿಜವಾದ ಮತದಾರ ಎಂದು ತಿಳಿದುಕೊಳ್ಳಲು ಕೇಳಬೇಕು. ಹಾಗೂ 22 ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ತೋರಿಸಬೇಕು.

**ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ ರಾಚುಆ 34:ಇಯುಬಿ:2009 ದಿನಾಂಕ: 24–08–2009 ಮತ್ತು 24–02–2015ರಲ್ಲಿ ಮತದಾರರು ಮತದಾನ ಮಾಡುವಾಗ ಭಾರತ ಚುನಾವಣಾ ಆಯೋಗವು ನೀಡಿರುವ**

**ಮತದಾರರ ಭಾವಚಿತ್ರದ ಗುರುತಿನ ಚೀಟಿ ಅಥವಾ ಈ ಕೆಳಕಂಡ 22 ದಾಖಲೆಗಳ ಪೈಕಿ ಯಾವುದಾದರೂ ಒಂದನ್ನು ಅವರು ತಮ್ಮ ಗುರುತಿಗಾಗಿ ಹಾಜರು ಪಡಿಸತಕ್ಕದ್ದು.**

ಮತದಾರರನ್ನು ಗುರುತಿಸುವ ಕಾರ್ಯ ನಿರ್ವಹಿಸುವ ಮೊದಲನೇ ಪೋಲಿಂಗ್ ಅಧಿಕಾರಿಯು ಮತದಾರನು ತರುವ ಈ ಕೆಳಕಂಡ 22 ದಾಖಲೆಗಳ ಆಧಾರದ ಮೇಲೆ ಮತದಾರರನ್ನು ಗುರುತಿಸಬೇಕು.

1. ಪಾಸ್‌ಪೋರ್ಟ್
2. ಡ್ರೈವಿಂಗ್ ಲೈಸನ್ಸ್
3. ಆದಾಯ ತೆರಿಗೆ ಗುರುತಿನ ಚೀಟಿ (PAN)
4. ರಾಜ್ಯ/ ಕೇಂದ್ರ ಸರ್ಕಾರ ಹಾಗೂ ಸಾರ್ವಜನಿಕ ಉದ್ದಿಮೆಗಳು ಅಥವಾ ಇತರೆ ಖಾಸಗಿ ಔದ್ಯಮಿಕ ಸಂಸ್ಥೆಗಳು ಅವರ ಕೆಲಸಗಾರರಿಗೆ ನೀಡಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿಗಳು.
5. ಸಾರ್ವಜನಿಕ ವಲಯದ ಬ್ಯಾಂಕ್/ ಕಿಸಾನ್ ಮತ್ತು ಅಂಚೆ ಕಛೇರಿ ನೀಡಿರುವ ಭಾವಚಿತ್ರವಿರುವ ಪಾಸ್ ಪುಸ್ತಕ.
6. ಮಾನ್ಯತೆ ಪಡೆದ ನೋಂದಾಯಿತ ವಿದ್ಯಾ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಕೊಟ್ಟಿರುವ ಗುರುತಿನ ಚೀಟಿಗಳು.
7. ಭಾವಚಿತ್ರವಿರುವ ನೋಂದಾಯಿತ ಡೀಡ್‌ಗಳು/ ಪಟ್ಟಾಗಳು ಮುಂತಾದ ಆಸ್ತಿ ದಾಖಲೆಗಳು.
8. ಭಾವಚಿತ್ರವಿರುವ ಪಡಿತರ ಚೀಟಿಗಳು (Ration Card)
9. ಸಕ್ಷಮ ಪ್ರಾಧಿಕಾರ ನೀಡಿರುವ SC/ ST/ OBC ಭಾವಚಿತ್ರವಿರುವ ಪ್ರಮಾಣ ಪತ್ರಗಳು.
10. ಸಕ್ಷಮ ಪ್ರಾಧಿಕಾರ ನೀಡಿರುವ ಭಾವಚಿತ್ರವಿರುವ ಪಿಂಚಣಿ ಪಾವತಿ ಆದೇಶಗಳು ಅಥವಾ ಮಾಜಿ ಯೋಧರ ಪಿಂಚಣಿ ಪುಸ್ತಕ/ ಪಿಂಚಣಿ ಸಂದಾಯ ಆದೇಶಗಳಂತಹ ಪಿಂಚಣಿ ದಾಖಲೆಗಳು, ವೃದ್ದಾಪ್ಯ ವೇತನ ಆದೇಶಗಳು, ವಿಧವಾ ವೇತನ ಆದೇಶಗಳು.
11. ಭಾವಚಿತ್ರವಿರುವ ಸ್ವಾತಂತ್ರ್ಯ ಯೋಧರ ಗುರುತಿನ ಚೀಟಿಗಳು
12. ಸಕ್ಷಮ ಪ್ರಾಧಿಕಾರ ನೀಡಿರುವ ಭಾವಚಿತ್ರವಿರುವ ಶಸ್ತ್ರ ಪರವಾನಗಿ.
13. ಅಂಗವಿಕಲರಿಗೆ ಸಕ್ಷಮ ಪ್ರಾಧಿಕಾರ ನೀಡಿರುವ ಭಾವಚಿತ್ರವಿರುವ ಗುರುತಿನ ಚೀಟಿಗಳು.
14. ಮಾಜಿ ಯೋಧರ ಭಾವಚಿತ್ರವಿರುವ ಸಿ.ಎಸ್.ಡಿ. ಕ್ಯಾಂಟೀನ್ ಕಾರ್ಡ್.
15. ಸಂಧ್ಯಾ ಸುರಕ್ಷಾ ಯೋಜನೆಯ ಭಾವಚಿತ್ರವಿರುವ ಗುರುತಿನ ಚೀಟಿ.
16. NREG ಯೋಜನೆಯ ಅಡಿಯಲ್ಲಿ ನೀಡಿರುವ ಭಾವಚಿತ್ರವಿರುವ ಉದ್ಯೋಗ ಕಾರ್ಡ್.
17. ಭಾವಚಿತ್ರವಿರುವ ಯಶಸ್ವಿನಿ ಕಾರ್ಡ್.
18. ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಗ್ರಾಮ ಪಂಚಾಯತಿಗಳು ಇತ್ಯಾದಿ ಸ್ಥಳೀಯ ಸಂಸ್ಥೆಗಳು ನೀಡಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿಗಳು
19. ಸರ್ಕಾರಿ ಇಲಾಖೆ ನೀಡಿರುವ ಭಾವಚಿತ್ರವಿರುವ ಹಿರಿಯ ನಾಗರಿಕರ ಗುರುತಿನ ಚೀಟಿ.
20. ಕರ್ನಾಟಕ ಸರ್ಕಾರದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ನೀಡಿರುವ ಕುಟುಂಬದ ಸದಸ್ಯರ ಹೆಸರು ಮತ್ತು ವಯಸ್ಸು ಹಾಗೂ ಕುಟುಂಬದ ಯಜಮಾನನೊಂದಿಗೆ ಹೊಂದಿರುವ ಸದಸ್ಯರ ಸಂಬಂಧ ಒಳಗೊಂಡ ಭಾವಚಿತ್ರ ಇರುವ ತಾತ್ಕಾಲಿಕ/ಮೂಲ ಪಡಿತರ ಚೀಟಿ.
21. ಭಾವಚಿತ್ರವಿರುವ ಆರೋಗ್ಯ ವಿಮಾ ಯೋಜನೆ ಸ್ಮಾರ್ಟ್ ಕಾರ್ಡ್‌ಗಳು (ಕಾರ್ಮಿಕ ಮಂತ್ರಾಲಯ ಯೋಜನೆ)
22. ಆಧಾರ್ ಕಾರ್ಡ್

ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿ ನೀಡಲಾಗಿರುವ 22 ದಾಖಲೆಗಳ ಪೈಕಿ ಯಾವುದಾದರೊಂದು ದಾಖಲೆಯನ್ನು, ಆ ಕುಟುಂಬದ ಇನ್ನಿತರ ಸದಸ್ಯರ ಗುರುತಿದಾಗಿ

ಬಳಸಬಹುದು. ಇದೇ ರೀತಿಯಾಗಿ ಕುಟುಂಬದ ಇನ್ನಿತರ ಸದಸ್ಯರ ಗುರುತಿಗಾಗಿ ನೀಡಿರುವ ದಾಖಲೆಯನ್ನು ಆ ದಾಖಲೆಯ ಆಧಾರದ ಮೇಲೆ ಸದರಿ ಸದಸ್ಯರನ್ನು ಗುರುತಿಸಬಹುದಾದಲ್ಲಿ ಅವುಗಳನ್ನು ಕುಟುಂಬದ ಇನ್ನಿತರ ಸದಸ್ಯರ ಗುರುತಿಗಾಗಿ ಸಹ ಬಳಸಬಹುದು.

ಮತದಾರನ ಗುರುತಿನ ಬಗ್ಗೆ ಖಾತ್ರಿಯಾದ ಮೇಲೆ ಮೊದಲನೇ ಪೋಲಿಂಗ್ ಅಧಿಕಾರಿಯು ಮತದಾರರ ಪಟ್ಟಿಯ ಗುರುತಿನ ಪಟ್ಟಿಯಿಂದ ಪುಟ ನಂ. ಭಾಗದ ನಂ., ಕ್ರಮ ಸಂಖ್ಯೆ ಮತ್ತು ಮತದಾರನ ಹೆಸರನ್ನು ಚುನಾವಣಾ ಪ್ರತಿನಿಧಿಗಳಿಗೆ ಮತ್ತು ಎರಡನೇ ಪೋಲಿಂಗ್ ಅಧಿಕಾರಿಯವರಿಗೆ ಕೇಳಿಸುವಂತೆ ಕರೆಯುವುದು. ಮತದಾರನ ಗುರುತಿನ ಚೀಟಿಯನ್ನು(Voter Slip) ತಂದಿದ್ದರೆ, ಅದನ್ನು ಚೂರು ಚೂರು ಮಾಡಿ ಕಸದ ಬುಟ್ಟಿಯಲ್ಲಿ ಹಾಕಬೇಕು. ಮತದಾರನ ಗುರುತಿನ ಬಗ್ಗೆ ಅಭ್ಯರ್ಥಿಗಳ ಮತಗಟ್ಟೆ ಏಜೆಂಟರಿಗೆ ಆಕ್ಷೇಪಣೆ ಇಲ್ಲದಿದ್ದರೆ ಮತಾಧಿಕಾರಿಯು ಮತದಾರರ ಪಟ್ಟಿಯಲ್ಲಿ ಆ ಮತದಾರನ ಹೆಸರಿನ ಕೆಳಗೆ ಗೆರೆಯನ್ನು ಹಾಕುವನು. ಮತದಾರ ಹೆಂಗಸಾಗಿದ್ದರೆ ಅವಳ ಹೆಸರಿನ ಎಡಗಡೆಗೆ ಸಣ್ಣ ಟಿಕ್ (√) ಗುರುತನ್ನು ಹಾಕಬೇಕು. ಆದಾದ ಮೇಲೆ ಮತದಾರನಿಗೆ ಎರಡನೇ ಪೋಲಿಂಗ್ ಅಧಿಕಾರಿಯ ಕಡೆಗೆ ಕಳುಹಿಸಬೇಕು.

**(iii) ಮತಪತ್ರ ನೀಡುವುದು:–**

ಮೊದಲನೆಯ ಪೊಲಿಂಗ್ ಅಧಿಕಾರಿಯು ಮತದಾರನ ಹೆಸರು ಮತ್ತು ಮತದಾರರ ಪಟ್ಟಿಯ ಭಾಗ ಸಂಖ್ಯೆ, ಮತದಾರ ಕ್ರಮ ಸಂಖ್ಯೆ ಓದುತ್ತಿದ್ದ ಹಾಗೆ ಎರಡನೆಯ ಪೊಲಿಂಗ್ ಅಧಿಕಾರಿಯು ಅಳಿಸಲಾಗದ ಮಸಿ ಮತ್ತು ಮತಪತ್ರಗಳ ಕಟ್ಟು ಇಟ್ಟುಕೊಂಡಿರುವ ಮತದಾರರ ಪಟ್ಟಿಯ ಗುರುತಿನ ಪ್ರತಿಯಲ್ಲಿ ನಮೂದಿಸಿದ ಪ್ರಕಾರ ಮತದಾರರ ಬೆರಳುಗಳ ಉಗುರಿನ ಕೆಳಭಾಗದಲ್ಲಿ ಅಳಿಸಲಾಗದ ಮಸಿಯ ಗುರುತು ಇಲ್ಲವೆಂದು ಖಾತ್ರಿ ಮಾಡಿಕೊಂಡು ಎಡಗೈ ಬೆರಳಿನ ಮೇಲೆ ಉಗುರಿನ ಬುಡದಲ್ಲಿ ಮಸಿಯಲ್ಲಿ ಅದ್ದಿದ ಗಾಜಿನ ಪ್ಲಾಸ್ಟಿಕ್ ಕಡ್ಡಿಯ ಸಹಾಯದಿಂದ ಹಗುರವಾಗಿ ಒತ್ತಿ ಅದೇ ಹೊತ್ತಿಗೆ ಸರಿಯಾಗಿ ಗುರುತು ಮಾಡುವಂತೆ ತಿರುಗಿಸಿ ಮಸಿ ಹಚ್ಚಬೇಕು. ಮತದಾರನು ತನ್ನ ಬೆರಳಿಗೆ ಎಣ್ಣೆಯಂತಹ ಇತರೆ ಜಿಡ್ಡಾದ ಪದಾರ್ಥವನ್ನು ಅಳಿಸಲಾರದ ಮಸಿಯ ಗುರುತನ್ನು ನಿಷ್ಪರಿಣಾಮಗೊಳಿಸಲು ಹಚ್ಚಿದ್ದರೆ ಅಂತಹ ಪದಾರ್ಥವನ್ನು ಮತಗಟ್ಟೆ ಅಧಿಕಾರಿಯು ಸರಬರಾಜು ಮಾಡಲಾದ ತುಂಡು ಬಟ್ಟೆಯ ಅಥವಾ ಚಿಂದಿಯಿಂದ ಬೆರಳನ್ನು ಚೆನ್ನಾಗಿ ಒರೆಸಬೇಕು ಮತ್ತು ಆ ಮೇಲೆ ಮಸಿಯಿಂದ ಗುರುತು ಮಾಡಬೇಕು. ಅಳಿಸಲಾಗದ ಶಾಯಿಯನ್ನು ಹಚ್ಚಿದ ಮೇಲೆ ಅವನು ಮತದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಮತಪತ್ರದ ಪಕ್ಕದ ಪ್ರತಿಯ ಮೇಲೆ ತೆಗೆದುಕೊಳ್ಳಬೇಕು. ಆದಾದ ಮೇಲೆ ಮತಪತ್ರದ ಪಕ್ಕದ ಪ್ರತಿಯಿಂದ ಮೆಟಲ್ ರೂಲರಿನ ಸಹಾಯದಿಂದ ಬೇರ್ಪಡಿಸಿ ಅದನ್ನು ಮತದಾರನಿಗೆ ಕೊಡಬೇಕು. ಆ ಮೇಲೆ ಮತದಾರನಿಗೆ ಮೂರನೆಯ ಪೊಲಿಂಗ್ ಅಧಿಕಾರಿಯ ಹತ್ತಿರ ಹೋಗಲು ಹೇಳಬೇಕು. ಯಾವುದೇ ಮತದಾರನು ತನ್ನ ಎಡಗೈಯ ತೋರುಬೆರಳನ್ನು ಪರಿಶೀಲಿಸಲು ಅಥವಾ ಮಸಿಯ ಗುರುತು ಹಾಕಿಸಿಕೊಳ್ಳಲು

ನಿರಾಕರಿಸಿದರೆ ಅಥವಾ ಅವರ ಎಡಗೈ ತೋರುಬೆರಳಿನ ಮೇಲೆ ಮಸಿಯ ಗುರುತು ಇದ್ದರೆ ಅಥವಾ ಮಸಿಯನ್ನು ಅಳಿಸುವ ಯಾವುದಾದರೂ ವರ್ತನೆಯಲ್ಲಿ ತೊಡಗಿದ್ದರೆ, ಮತ್ತು ಅವನು ಮತಪತ್ರದ ಮೇಲೆ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ಹಾಕಿಸಿಕೊಳ್ಳಲು ನಿರಾಕರಿಸಿದರೆ ಅವನಿಗೆ ಮತಪತ್ರವನ್ನು ಸರಬರಾಜು ಮಾಡಕೂಡದು ಅಥವಾ ಮತ ಚಲಾಯಿಸಲು ಅವಕಾಶ ಕೊಡಕೂಡದು.

(iv) **ಮತಪತ್ರವನ್ನು ಮುಂದಾಗಿ ಮಡಚುವುದು ಮತ್ತು ಅದರ ಮೇಲೆ ಗುರುತು ಹಾಕಲು ಸ್ಟಾಂಪ್ ಪ್ಯಾಡಿನ ಶಾಯಿ ಹಚ್ಚಿ ಅಡ್ಡ ಬಾಣದ ಗುರುತಿನ ರಬ್ಬರ್ ಮೊಹರನ್ನು ಕೊಡುವುದು:–**

ಎರಡನೆಯ ಪೋಲಿಂಗ್ ಅಧಿಕಾರಿಯಿಂದ ಮತದಾರನು ಮತಪತ್ರವನ್ನು ತೆಗೆದುಕೊಂಡ ನಂತರ ಅವನು ಬಾಣದ ಗುರುತಿನ ರಬ್ಬರ್ ಮೊಹರು (ಆ್ಯರೋಕ್ರಾಸ್ ಮಾರ್ಕ್ ರಬ್ಬರ್ ಸ್ಟಾಂಪ್) ಇಟ್ಟುಕೊಂಡಿರುವ ಮೂರನೇ ಪೋಲಿಂಗ್ ಅಧಿಕಾರಿಯ ಬಳಿ ಹೋಗಬೇಕು. ಮೂರನೇ ಪೋಲಿಂಗ್ ಅಧಿಕಾರಿಯು ಮತಪತ್ರವನ್ನು ಮತದಾರನಿಂದ ತೆಗೆದುಕೊಂಡು ಅದನ್ನು ಎರಡು ಸಲ ಮೊದಲು ನೆಟ್ಟಗೆ, ನಂತರ ಅಡ್ಡವಾಗಿ ಮತಪತ್ರದ ಹಿಂದಿರುವ ವಿಭೇದ ಚಿನ್ಹೆಯ ಗುರುತು ಬಲಗಡೆ ಮೇಲಿನ ತುದಿಯಲ್ಲಿ ಸ್ಪಷ್ಟವಾಗಿ ತೋರುವಂತೆ ಮಡಚಬೇಕು. ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು ಒಂಭತ್ತಕ್ಕಿಂತ ಹೆಚ್ಚು ಇರುವಲ್ಲಿ ಮತಪತ್ರ ಎರಡು ಅಥವಾ ಹೆಚ್ಚು ಅಂಕಣಗಳಲ್ಲಿ ಮುದ್ರಿತವಾಗಿರುವುದು. ಇಂತಹ ಸಂದರ್ಭದಲ್ಲಿ ಮತಪತ್ರಗಳು ಮಡಚುವ ವಿಧಾನವು ಬೇರೆ ಇರುವುದು. ಮತಪತ್ರಗಳು ಎರಡು ಅಂಕಣಗಳಲ್ಲಿ ಮುದ್ರಿತವಾಗಿದ್ದರೆ ಅದನ್ನು ಮೊದಲು ಪ್ರತಿ ಅಂಕಣದ ಮಧ್ಯದಲ್ಲಿ ಮಡಚಬೇಕು ಮತ್ತು ಅನಂತರ ಮೂರನೆಯ ಮಡಿಕೆಯನ್ನು ಎರಡು ಅಂಕಣ ಬೇರ್ಪಡಿಸಿ ಭೇದಿಸುವ ಕಪ್ಪು ಛಾಯೆ ಇರುವ ನೇರವಾದ ರೇಖೆಯಗಂಟು ಮಾಡಬೇಕು. ಆ ಮೇಲೆ ಅದನ್ನು ಅದರ ಹಿಂದಿರುವ ವಿಭೇದ ಚಿನ್ಹೆಯ ಗುರುತು ಸ್ಪಷ್ಟವಾಗಿ ಕಾಣಿಸುವ ತರಹ ಅಡ್ಡವಾಗಿ ಮಡಚಬೇಕು. ಮತ ಪತ್ರಿಕೆಗಳು ಮೂರು ಅಂಕಣದಲ್ಲಿ ಮುದ್ರಿತವಾಗಿದ್ದರೆ, ಮೊದಲು ನೇರವಾಗಿ ಮೊದಲನೆಯ ಮತ್ತು ಮೂರನೆಯ ಅಂಕಣದ ಮಧ್ಯದಲ್ಲಿ ಮಡಚಬೇಕು ಮತ್ತು ತಿರುಗಿ ಮಧ್ಯದ ಅಂಕಣದ ಮಧ್ಯದಲ್ಲಿ ಮತ್ತು ಆದಾದ ಮೇಲೆ ನೇರವಾಗಿ ಮಧ್ಯದಲ್ಲಿ ಮಡಚಬೇಕು. ಆದಾದ ಮೇಲೆ ಹಿಂಭಾಗದಲ್ಲಿ ಮುದ್ರಿಸಿದ ವಿಭೇದ ಚಿನ್ಹೆಯ ಗುರುತು ಸ್ಪಷ್ಟವಾಗಿ ಕಾಣಿಸುವಂತೆ ಅಡ್ಡವಾಗಿ ಮಡಚಬೇಕು ಮೇಲೆ ಹೇಳಿದಂತೆ ಮತಪತ್ರ ಮಡಚಿದ ಬಳಿಕ ಅದನ್ನು ಬಿಚ್ಚಿ ಮತದಾರನಿಗೆ ಕೊಡಬೇಕು.

**(v) ಮತಪತ್ರದ ಮೇಲೆ ಗುರುತು ಮಾಡುವ ವಿಧಾನದ ಬಗ್ಗೆ ಸೂಚನೆ:–**

ಮೂರನೇಯ ಪೋಲಿಂಗ್ ಅಧಿಕಾರಿಯು ಮತದಾರನಿಗೆ ಕೊಡಬೇಕಾದ ಸೂಚನೆ:–

(ಅ) ಖಾಲಿ ಇದ್ದ ಮತದಾನದ ಅಂಕಣದ (ವೋಟಿಂಗ್ ಕಂಪಾರ್ಟ್‌ಮೆಂಟ್) ಒಳಗೆ ಹೋಗಲು ತಿಳಿಸುವುದು.

(ಆ) ತನಗೆ ಇಷ್ಟಬಂದ ಅಭ್ಯರ್ಥಿಯ ಚಿನ್ಹೆಯ ಮೇಲೆ ಅಡ್ಡಬಾಣದ ಗುರುತಿನ ರಬ್ಬರ್ ಮೊಹರಿನ ಗುರುತು ಹಾಕಲು ತಿಳಿಸುವುದು, ಆದರೆ ರಬ್ಬರ್ ಮೊಹರಿನ ಗುರುತನ್ನು ಮತಪತ್ರದಲ್ಲಿ ಯಾವುದೇ

ನಿರ್ದಿಷ್ಟವಾದ ಅಭ್ಯರ್ಥಿಯ ಚಿನ್ಹೆಯ ಮೇಲೆ ಪ್ರತ್ಯಕ್ಷ ಹಾಕಿ ತೋರಿಸಬಾರದು, ಯಾವುದೇ ಮತದಾರನಿಗೆ ಸಹಾಯ ಬೇಕಾದರೆ ಗುರುತು ಹಾಕಲು ವಿಧಾನವನ್ನು ಖಾಲಿ ಕಾಗದದ ಮೇಲೆ ಗುರುತು ಹಾಕಿ ತಿಳಿಸಿ ಹೇಳಬೇಕು.

(ಇ) ಮೊದಲು ಮಡಚಿದಂತೆ ಮತಪತ್ರವನ್ನು ತಿರುಗಿ ಮಡಚಲು ಹೇಳುವುದು,

(ಈ) ಅದಾದ ಮೇಲೆ ಮತದಾನ ಅಂಕಣದಿಂದ ಹೊರಬರುವುದು ಮತ್ತು

(ಉ) ಮತ ಪೆಟ್ಟಿಗೆಯೊಳಗೆ ಮಡಚಿದ ಮತ ಪತ್ರವನ್ನು ಹಾಕುವುದು, ಮೂರನೇ ಪೋಲಿಂಗ್ ಅಧಿಕಾರಿಯು ಮತದಾರನಿಗೆ ಅಡ್ಡಬಾಣದ ಗುರುತಿನ ರಬ್ಬರ್ ಮೊಹರು ಕೊಡುವ ಮೊದಲು ಅದು ಸಾಕಷ್ಟು ಪ್ರಮಾಣದಲ್ಲಿ ಶಾಯಿ ಹೊಂದಿದ ಬಗ್ಗೆ ಆದರೆ ಹೆಚ್ಚಾಗಿರದ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಅವನು ಹೊತ್ತು ಹೊತ್ತಿಗೆ ಪ್ಯಾಡ್ ಒಣಗಿರದ ಬಗ್ಗೆ ಮತ್ತು ಅಡ್ಡಬಾಣದ ಗುರುತಿನ ರಬ್ಬರ್ ಮೊಹರು ಸರಿಯಾದ ಸ್ಥಿತಿಯಲ್ಲಿ ಮತ್ತು ಧಕ್ಕೆಯಾಗದಂತೆ ಇದೆಯೇ ಎಂಬುದನ್ನು ಪರಿಶೀಲಿಸಬೇಕು. ಸ್ಟಾಂಪ್ ಪ್ಯಾಡನ್ನು ಯಾವುದೇ ಹಂತದಲ್ಲಿ ಮತದಾನದ ಕಣದಲ್ಲಿ ಇರದಂತೆ ಅದನ್ನು ನೋಡಿಕೊಳ್ಳಬೇಕು. ವಿಶೇಷವಾಗಿ ಅವನು ಅನಕ್ಷರಸ್ಥ ಮತದಾರನಾದ ಸಂದರ್ಭದಲ್ಲಿ ಅವರು ಗುರುತು ಹಾಕಲು ಮೊಹರು ಹೇಗೆ ಉಪಯೋಗಿಸಬೇಕೆಂದು ತಿಳಿದುಕೊಂಡಿದ್ದಾರೆಂದು ಖಾತ್ರಿ ಮಾಡಿಕೊಳ್ಳಬೇಕು. ಹಾಗೆ ಖಾತ್ರಿ ಮಾಡಿಕೊಳ್ಳಲು ಅವಶ್ಯವಿದ್ದರೆ ಅಂತಹ ಮತದಾರರಿಗೆ ಖಾಲಿ ಕಾಗದದ ಮೇಲೆ ಅಡ್ಡ ಬಾಣದ ಗುರುತಿನ ರಬ್ಬರ್ ಮೊಹರಿನಿಂದ ಗುರುತು ಹಾಕಲು ಹೇಳಬಹುದು.

**(vi) ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಮತಗಟ್ಟೆಯ ಮೂರನೇ ಪೋಲಿಂಗ್ ಅಧಿಕಾರಿಯ ಹೆಚ್ಚಿನ ಕರ್ತವ್ಯಗಳು :-**

ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಮೇಲಿನ ಕರ್ತವ್ಯಗಳ ಜೊತೆಗೆ ಮತಗಟ್ಟೆಯ ಮೂರನೇ ಪೋಲಿಂಗ್ ಅಧಿಕಾರಿಯು ಪ್ರತಿಯೊಬ್ಬ ಮತದಾರನಿಗೆ/ಳಿಗೆ ಏಕಸದಸ್ಯ ಅಥವಾ ದ್ವಿಸದಸ್ಯ ಅಥವಾ ತ್ರಿಸದಸ್ಯ ಕ್ಷೇತ್ರಗಳನ್ನು ಅವಲಂಬಿಸಿ, ಎಷ್ಟು ಮತಗಳಿವೆಯೆಂದು ತಿಳಿಸಬೇಕು. ಏಕಸದಸ್ಯ ಕ್ಷೇತ್ರವಾದರೆ ಮತದಾರನಿಗೆ/ಳಿಗೆ ಒಂದೇ ಮತವಿರುವುದರಿಂದ ಅವನು /ಅವಳು ಇಚ್ಛಿಸಿದ ಒಬ್ಬನಿಗಿಂತ ಹೆಚ್ಚಿನ ಅಭ್ಯರ್ಥಿಗೆ ಮತ ನೀಡಬಾರದೆಂದು ತಿಳಿಸಬೇಕು. ದ್ವಿಸದಸ್ಯ ಕ್ಷೇತ್ರವಾದರೆ ಮತದಾರನಿಗೆ/ಳಿಗೆ ಎರಡು ಮತಗಳಿರುವುದರಿಂದ ಅವನು/ಅವಳು ಇಚ್ಛಿಸಿದ ಇಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಮತ ನೀಡಬಾರದೆಂದು ತಿಳಿಸಬೇಕು. ತ್ರಿಸದಸ್ಯ ಕ್ಷೇತ್ರವಾದಲ್ಲಿ ಮತದಾರನಿಗೆ/ಳಿಗೆ ಮೂರು ಮತಗಳಿರುವುದರಿಂದ ಅವನು/ಅವಳು ಇಚ್ಛಿಸಿದ ಮೂವರಿಗಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಮತ ನೀಡಬಾರದೆಂದು ತಿಳಿಸಬೇಕು.

ಮತದಾರರಿಗಿರುವ ಮತಗಳ ಸಂಖ್ಯೆಯನ್ನು ತಿಳಿಸದಿದ್ದರೆ ಅವರು ಮಾಡಬಹುದಾದ ತಪ್ಪಿನಿಂದ ಮತಗಳು ತಿರಸ್ಕೃತವಾಗುವ ಸಂಭವವಿದೆ. ಆದುದರಿಂದ, ಮತಗಟ್ಟೆಯ ಪ್ರಿಸೈಡಿಂಗ್

ಅಧಿಕಾರಿಯು ಮತಗಟ್ಟೆಯ ಮೂರನೇ ಪೋಲಿಂಗ್ ಅಧಿಕಾರಿಯು ಮೇಲಿನ ಸೂಚನೆಗಳನ್ನು ಅತ್ಯಂತ ನಿಷ್ಠೆಯಿಂದ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು.

**(vii) ಮರಣ ಹೊಂದಿದವರ, ಅನುಪಸ್ಥಿತರ ಮತ್ತು ನಿಖರವಾದ ಕೃತಕ ಮತದಾರರ ಪಟ್ಟಿ:–**

ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರು ಮರಣ ಹೊಂದಿದವರ ಅನುಪಸ್ಥಿತರ ಮತ್ತು ನಿಜವಾದ ಮತದಾರರಲ್ಲದವರ (ಬೋಗಸ್ ವೋಟರ್ಸ್) ಪಟ್ಟಿಯನ್ನು ತರಬಹುದು. ಅಭ್ಯರ್ಥಿ ಅಥವಾ ಅವನ ಪಕ್ಷವು ನಿಮಗೆ ಅಂತಹ ಒಂದು ಪಟ್ಟಿಯನ್ನು ಕೊಡಬಹುದು. ಅಂತಹ ಪಟ್ಟಿಯೊಳಗೆ ಹೆಸರಿದ್ದ ಯಾವುದೇ ವ್ಯಕ್ತಿಯು ಮತ ಹಾಕಲು ಬಂದಲ್ಲಿ ಆ ವ್ಯೆಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿ ಇದ್ದರೆ ಆ ವ್ಯಕ್ತಿಯು ನಿಜವಾದ ಮತದಾರನೇ ಇಲ್ಲವೇ ಎಂಬುದನ್ನು ನಿಶ್ಚಯಿಸಲು ಅವನು ಕೊಟ್ಟ ಮಾಹಿತಿಯನ್ನು ಹೆಚ್ಚಿನ ಪರಿಶೀಲನೆಗೊಳಪಡಿಸುವುದು ಅಗತ್ಯ. ಇದು ಆಕ್ಷೇಪಣೆ (ಚಾಲೆಂಜ್) ಎಂದು ಭಾವಿಸತಕ್ಕದ್ದಲ್ಲ.

**(viii) ಲಿಪಿಕ ಮತ್ತು ಮುದ್ರಣ ದೋಷಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ:–**

ಮತದಾರರ ಪಟ್ಟಿಯಲ್ಲಿ ನಮೂದಿಸಿರುವ ಮತದಾರರ ವಿವರಗಳು ಕೆಲವೊಂದು ಬಾರಿ ತಪ್ಪಾಗಿ ಮುದ್ರಿತವಾಗಿರಬಹುದು. ಅಥವಾ ಹಳೆಯದಾಗಿರಬಹುದು, ಉದಾಹರಣೆಗೆ ಮತದಾರರ ಪಟ್ಟಿಯಲ್ಲಿ ನಮೂದಿಸಿರುವ ಅವರ ವಯಸ್ಸು ಮತ್ತು ಅವರ ಈಗಿನ ವಯಸ್ಸಿನಲ್ಲಿ ಹೆಚ್ಚು ಕಡಿಮೆಯಿರಬಹುದು. ನಿಮಗೆ ಮತದಾರರ ಪಟ್ಟಿಯಲ್ಲಿ ನಮೂದಿಸಿರುವ ಅವರ ಇತರೇ ಮಾಹಿತಿಯ ಪ್ರಕಾರ ಅವರ ಗುರುತಿನ ಬಗ್ಗೆ ಖಾತ್ರಿಯಾದರೆ ನೀವು ಅಂತಹ ಮುದ್ರಣ ಅಥವಾ ಲಿಪಿಕ ದೋಷಗಳನ್ನು ಗಣನೆಗೆ ತೆಗೆದುಕೊಳ್ಳಬಾರದು.

**(ix) ಮತದಾರನ ಅರ್ಹತೆ ಮತ್ತು ವಯಸ್ಸಿನ ಬಗ್ಗೆ ಮತದಾರನ ಘೋಷಣೆ:–**

ಮತದಾರರ ಪಟ್ಟಿಯಲ್ಲಿ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಗೂ ಅವರ ಗುರುತು ಸ್ಥಾಪಿತವಾಗಿದ್ದರೆ ಮತದಾನ ಮಾಡುವ ಹಕ್ಕಿದೆ. ಅಂತಹ ವ್ಯಕ್ತಿಗೆ ಅವನ ಅರ್ಹತೆಯ ಬಗ್ಗೆ ಪ್ರಶ್ನಿಸುವ ಹಾಗಿಲ್ಲ. ಉದಾಹರಣೆಗೆ ಅವನ ವಯಸ್ಸು 18 ರ ಮೇಲೆ ಇರುವ ಬಗ್ಗೆ ಅಥವಾ ಆ ಕ್ಷೇತ್ರದ ನಿವಾಸಿ ಎಂಬುದರ ಬಗ್ಗೆ ವಿಚಾರಣೆ ನಡೆಸಲು ನಿಮಗೆ ಅಧಿಕಾರವಿರುವುದಿಲ್ಲ. ಆದರೆ ಯಾವುದೇ ವ್ಯಕ್ತಿಯ ಅರ್ಹತೆಯ ವಯಸ್ಸು ಬಹಳ ಕಡಿಮೆ ತೋರಿ ಬಂದರೆ ಮತದಾರರ ಪಟ್ಟಿಯಲ್ಲಿ ಕೊಟ್ಟಿರುವ ವಿವರಗಳ ಆಧಾರದ ಮುಖಾಂತರ ಅವನ ಮತ ಚಲಾಯಿಸುವ ಹಕ್ಕಿನ ಬಗ್ಗೆ ಸರಿಯಾಗಿ ಖಾತ್ರಿಪಡಿಸಿಕೊಳ್ಳಬೇಕು.

ಅವನ ಹೆಸರು ಮತದಾರರ ಪಟ್ಟಿಯಲ್ಲಿದ್ದು, ಅವನ ಗುರುತು ಸ್ಥಾಪಿತವಾಗಿದ್ದು, ಹೆಸರು ಒಳಗೊಂಡಿರುವುದರ ಬಗ್ಗೆ ಖಾತ್ರಿಯಾಗಿದ್ದು, ವಯಸ್ಸು 18 ವರ್ಷಕ್ಕಿಂತ ಕಡಿಮೆಯೆಂದು ನಿಮಗೆ ಅನಿಸಿದರೆ ನೀವು ಆ ಮತದಾರನಿಂದ ನಿಮಗೆ ಒದಗಿಸಿದ ನಮೂನೆಯಲ್ಲಿ ಮತದಾರ ಪಟ್ಟಿ ಸಿದ್ದಪಡಿಸಿದ:ಪರಿಷ್ಕರಣೆ ಮಾಡಿದ ವರ್ಷಕ್ಕೆ ಸಂಬಂಧಪಟ್ಟ ಜನವರಿ ತಿಂಗಳಿನ

ಮೊದಲನೆಯ ತಾರೀಖಿಗೆ ಅವನ ವಯಸ್ಸು ಕುರಿತು ಯೋಗ್ಯ ನಮೂನೆಯಲ್ಲಿ (ಸರಬರಾಜು ಮಾಡಲಾಗಿರುವ) ಪ್ರಮಾಣ ಪತ್ರವನ್ನು (ಡಿಕ್ಲರೇಷನ್) ತೆಗೆದುಕೊಳ್ಳಬೇಕು. ಪ್ರಮಾಣ ಪತ್ರವನ್ನು ತೆಗೆದುಕೊಳ್ಳುವ ಮೊದಲು ಅವನು ಸುಳ್ಳು ಪ್ರಮಾಣ ಪತ್ರ ಮಾಡಿದರೆ **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993** ರ ಪ್ರಕಾರ ಶಿಕ್ಷೆಗೆ ಗುರಿಯಾಗುವಿರೆಂದು ತಿಳಿಸಿ ಹೇಳಬೇಕು. ಆದಾದ ನಂತರವೇ ಅವನಿಗೆ ಮತಹಾಕಲು ಸಮ್ಮತಿ ನೀಡಬಹುದು.

**(x) ಕುರುಡರಿಂದ ಮತ್ತು ದುರ್ಬಲರಿಂದ ಮತದಾನ:-**

ಕುರುಡುತನದಿಂದಾಗಿ ಮತಪತ್ರದ ಮೇಲಿನ ಹೆಸರು ಮತ್ತು ಚಿನ್ಹೆ ಗುರುತಿಸಲು ಇಲ್ಲವೇ ಇತರ ದೈಹಿಕ ಅಶಕ್ತತೆಯಿಂದಾಗಿ ಬೇರೆಯವರ ಸಹಾಯವಿಲ್ಲದೆ ಮತಪತ್ರದ ಮೇಲೆ ಗುರುತು ಮಾಡಲು ಅಶಕ್ತವಾಗಿದ್ದಾನೆಂದು ನಿಮಗೆ ಖಾತ್ರಿಯೆನಿಸಿದರೆ ಮತದಾರನು ತನ್ನ ಜೊತೆಗೆ 18 ವರ್ಷಕ್ಕೆ ಕಡಿಮೆ ಇಲ್ಲದ ವಯಸ್ಸಿನ ಒಬ್ಬ ಸಂಗಡಿಗನನ್ನು ತನ್ನ ಪರವಾಗಿ ತನ್ನ ಇಚ್ಛೆಯನುಸಾರ ಮತಪತ್ರದ ಮೇಲೆ ಗುರುತುಮಾಡಲು ಮತ್ತು ಅದನ್ನು ಮಡಚಿ ಮತ ಪೆಟ್ಟಿಗೆಯಲ್ಲಿ ಹಾಕಲು ಮತಗಟ್ಟೆಯೊಳಗೆ ಒಯ್ಯಲು ನೀವು ಅನುಮತಿ ನೀಡಬೇಕು. ಆದರೆ ಯಾವುದೇ ಮತದಾನ ಕೇಂದ್ರದಲ್ಲಿ ಅದೇ ದಿನ ಒಬ್ಬರಿಗಿಂತ ಹೆಚ್ಚು ಮತದಾರರಿಗೆ ಮತದಾನ ಸಂಗಾತಿ ಆಗಿ ಕಾರ್ಯ ನಿರ್ವಹಿಸಲು ಯಾವ ವ್ಯಕ್ತಿಗೂ ಅನುಮತಿ ನೀಡತಕ್ಕುದಲ್ಲ ಮತ್ತು ಮತದಾರನ ಪರವಾಗಿ ಹಾಕಿದ ಮತವನ್ನು ಗೌಪ್ಯವಾಗಿಡುವಂತೆ ಮತ್ತು ಆ ದಿನ ತಾನು ಯಾವುದೇ ಮತದಾನ ಕೇಂದ್ರದಲ್ಲಿ ಬೇರೆ ಯಾವುದೇ ಮತದಾರನಿಗೆ ಸಂಗಡಿಗನಾಗಿ ಈಗಾಗಲೇ ಕಾರ್ಯನಿರ್ವಹಿಸಿಲ್ಲವೆಂದು ಅವನಿಂದ/ಅವಳಿಂದ ಪ್ರಮಾಣ ಪತ್ರವನ್ನು (ಡಿಕ್ಲರೇಷನ್) ತೆಗೆದುಕೊಳ್ಳತಕ್ಕದ್ದು. (ಪ್ರಮಾಣಪತ್ರದ ನಮೂನೆಯ ಪ್ರತಿಗಳನ್ನು ನಿಮಗೆ ಸರಬರಾಜು ಮಾಡಲಾಗುವುದು) ಇವೆಲ್ಲ ಪ್ರಕರಣಗಳ ದಾಖಲೆಗಳನ್ನು ನೀವು ಇಡತಕ್ಕದ್ದು (ದಾಖಲೆಯ ನಮೂನೆಯನ್ನು ಸರಬರಾಜು ಮಾಡಲಾಗುವುದು) ಈ ಎರಡೂ ನಮೂನೆಗಳನ್ನು ನೀವು ರಿಟರ್ನಿಂಗ್ ಅಧಿಕಾರಿಗೆ ಲಕೋಟೆಯಲ್ಲಿ ಹಾಕಿ ಕಳುಹಿಸಬೇಕು. ಈ ಮೇಲಿನ ಷರತ್ತುಗಳ ಪಾಲನೆಗೆ ಒಳಪಟ್ಟು ಅಭ್ಯರ್ಥಿಯಾಗಲಿ ಇಲ್ಲವೇ ಚುನಾವಣಾ ಏಜೆಂಟನಾಗಲಿ, ಕುರುಡ ಅಥವಾ ಅಂಗವಿಕಲ ಮತದಾರರ ಸಂಗಡಿಗನಾಗಿ ಕಾರ್ಯನಿರ್ವಹಿಸಲು ಅಭ್ಯಂತರವಿಲ್ಲ. ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರು ಕೂಡ ಕುರುಡ ಅಥವಾ ಅಂಗವಿಕಲ ಮತದಾರರ ಸಂಗಡಿಗನೆಂದು ಕಾರ್ಯನಿರ್ವಹಿಸಲು ಸಮ್ಮತಿಸಬಹುದು. ಆದರೆ ಅವನು 18 ವರ್ಷಕ್ಕಿಂತ ಕಡಿಮೆ ವಯಸ್ಸಿಲ್ಲದವರಿರಬೇಕು. ಆದರೆ ನೀವು ಅಥವಾ ಯಾವುದೇ ಪೋಲಿಂಗ್ ಅಧಿಕಾರಿಯು ಕುರುಡು ಅಥವಾ ಅಂಗವಿಕಲ ಮತದಾರನ ಸಂಗಾತಿಯಾಗಿ ಕಾರ್ಯನಿರ್ವಹಿಸತಕ್ಕದ್ದಲ್ಲ.

(xi) **ಕುರುಡ ಅಥವಾ ಅಂಗವಿಕಲ ಅಥವಾ ಕುಷ್ಠರೋಗ ಮತದಾರರ ಮತಪತ್ರದ ಪಕ್ಕದ ಪ್ರತಿಯ ಮೇಲೆ ಹಸ್ತಾಕ್ಷರ ಅಥವಾ ಹೆಬ್ಬೆರಳಿನ ಗುರುತು:–**

ಕುರುಡ ಮತದಾರ ಅಥವಾ ಕುಷ್ಠರೋಗದಿಂದ ಬಳಲುತ್ತಿರುವ ಮತದಾರನಿಂದ ಮತಪತ್ರದ ಪಕ್ಕದ ಪ್ರತಿಯ ಮೇಲೆ ಹೆಬ್ಬೆರಳಿನ ಗುರುತನ್ನು ತೆಗೆದುಕೊಳ್ಳತಕ್ಕದ್ದು ಅಂತಹ ಮತದಾರನು ಸಾಕ್ಷರನಿದ್ದರೆ ಅವನಿಗೆ ಹೆಬ್ಬೆರಳು ಒತ್ತುವುದರ ಬದಲು ಹಸ್ತಾಕ್ಷರ ಹಾಕಲು ಅನುವು ಮಾಡಿಕೊಡಬೇಕು. ಅಂಗವಿಕಲ ಮತದಾರನಿಗೆ ತನ್ನ ಎರಡೂ ಕೈಯಿಂದ ಹಸ್ತಾಕ್ಷರ ಅಥವಾ ಹೆಬ್ಬೆರಳಿನ ಗುರುತು ಹಾಕಲು ಬರದಿದ್ದರೆ ಅವನ ಮತಪತ್ರದ ಪಕ್ಕ ಪ್ರತಿಯ(**ಕೌಂಟರ್ ಫೈಲ್**) ಮೇಲೆ ಅವನ ಸಂಗಡಿಗನ ಹಸ್ತಾಕ್ಷರ ಅಥವಾ ಹೆಬ್ಬೆರಳಿನ ಗುರುತನ್ನು ತೆಗೆದುಕೊಳ್ಳತಕ್ಕದ್ದು ಅಂತಹ ಮತಪತ್ರದ ಪಕ್ಕ ಪ್ರತಿಯ ಮೇಲೆ "ಸಂಗಡಿಗನ ಹಸ್ತಾಕ್ಷರ ಅಥವಾ ಹೆಬ್ಬೆರಳಿನ ಗುರುತು" ಎಂದು ಟಿಪ್ಪಣಿಯನ್ನು ಬರೆಯಬೇಕು.

**(xii) ಮತದಾರನ ಗುರುತನ್ನು ಆಕ್ಷೇಪಿಸುವುದು:– (ಛಾಲೆಂಜ್)**

(ಅ) ಯಾರು ಅಕ್ಷೇಪಿಸಬಹುದು:–

ಮತದಾರನನ್ನು ಗುರುತಿಸಲು ವಿಚಾರಿಸಿಕೊಳ್ಳುತ್ತಿರುವಾಗ ಅಭ್ಯರ್ಥಿಯಿಂದ ಅಥವಾ ಅವನ ಚುನಾವಣಾ ಏಜೆಂಟ್ ಅಥವಾ ಮತಗಟ್ಟೆ ಏಜೆಂಟನಿಂದ ಆಕ್ಷೇಪಣೆ ಬಂದಲ್ಲಿ ಅಥವಾ ನಿಮಗೆ ಮತದಾರನ ಬಗ್ಗೆ ಸಂದೇಹ ಬಂದಲ್ಲಿ ನೀವು ಒಂದು ಸಂಕ್ಷಿಪ್ತ ವಿಚಾರಣೆ ನಡೆಸಿ ಅವನು ನಿಜವಾದ ಮತದಾರನೇ ಇಲ್ಲವೇ ಎಂಬುದನ್ನು ತೀರ್ಮಾನಿಸಬೇಕು.

(ಆ) ಆಕ್ಷೇಪಣೆ ಶುಲ್ಕ:– ಆಕ್ಷೇಪಣೆ ಮಾಡುವವರು ನಗದಾಗಿ ಎರಡು ರೂಪಾಯಿಯ ಶುಲ್ಕವನ್ನು ಕೊಡತಕ್ಕದ್ದು. ಶುಲ್ಕ ಸಂದಾಯ ಮಾಡಿದ ಮೇಲೆ ಆಕ್ಷೇಪಿಸಿದವರಿಗೆ ರಸೀದಿ ಕೊಡಿ. (ರಸೀದಿ ಪುಸ್ತಕವನ್ನು **ನಮೂನೆ–6** ಸರಬರಾಜು ಮಾಡಲಾಗುವುದು) ಶುಲ್ಕ ಸಂದಾಯ ಮಾಡಿದ ಮೇಲೆ ನೀವು:–

(i) ಆಕ್ಷೇಪಿತನಾದ ವ್ಯಕ್ತಿಗೆ ಬೇರೊಬ್ಬನ ಹೆಸರಿನ ಮೇಲೆ ಮತ ಹಾಕಲು ಪ್ರಯತ್ನಿಸಿದ್ದಕ್ಕಾಗಿ ದಂಡನೆಯ ಬಗ್ಗೆ ಎಚ್ಚರಿಕೆ ನೀಡತಕ್ಕದ್ದು;

(ii) ಮತದಾರರ ಪಟ್ಟಿಯಲ್ಲಿಯ ಸಂಬಂಧಪಟ್ಟ ವಿವರಗಳನ್ನು ಪೂರ್ಣವಾಗಿ ಓದತಕ್ಕದ್ದು, ಮತ್ತು ಅಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು ಅವನೇ ಎಂಬುದಕ್ಕೆ ಅವನನ್ನು ಪ್ರಶ್ನಿಸತಕ್ಕದ್ದು.

(iii) ಅವನ ಹೆಸರು ಮತ್ತು ವಿಳಾಸವನ್ನು **ಪ್ರಪತ್ರ–25**ರಲ್ಲಿ ಇರುವ ಆಕ್ಷೇಪಿತ ಮತಗಳ ಪಟ್ಟಿಯಲ್ಲಿ ನಮೂದಿಸತಕ್ಕದ್ದು.(ಈ ಪ್ರಪತ್ರವನ್ನು ನಿಮಗೆ ಸರಬರಾಜು ಮಾಡಲಾಗುವುದು) ಮತ್ತು

(iv) ಸದರಿ ಪಟ್ಟಿಯಲ್ಲಿ ಅವನ ಸಹಿ ಅಥವಾ ಎಡಗೈ ಹೆಬ್ಬೆರಳಿನ ಗುರುತನ್ನು ತೆಗೆದುಕೊಳ್ಳತಕ್ಕದ್ದು.

**(ಇ) ಸಂಕ್ಷಿಪ್ತ ವಿವರಣೆ:–**

ಮೊದಲು ಆಕ್ಷೇಪಣೆಕಾರನ ಆಕ್ಷೇಪಣೆಯ ಪರವಾಗಿ ಸಾಕ್ಷ್ಯವನ್ನು ಆಕ್ಷೇಪಿಸಲ್ಪಟ್ಟ ವ್ಯಕ್ತಿಯು ಮತದಾರನಲ್ಲವೆನ್ನುವುದರ ಬಗ್ಗೆ ಪುರಾವೆಯನ್ನು ಒದಗಿಸಲು ಕೇಳಬಹುದು. ಆಕ್ಷೇಪಣೆಕಾರನು ಪುರಾವೆ ಒದಗಿಸಲು ವಿಫಲನಾದಲ್ಲಿ ಆಕ್ಷೇಪಣೆಯನ್ನು ರದ್ದು ಮಾಡಿ, ಮತ್ತು ಆಕ್ಷೇಪಿಸಲ್ಪಟ್ಟ ವ್ಯಕ್ತಿಗೆ ಮತದಾನ ಮಾಡಲು ಅವಕಾಶ ಕೊಡತಕ್ಕದ್ದು. ಆಕ್ಷೇಪಣೆಕಾರನು ಪುರಾವೇ ಕೊಡುವುದರಲ್ಲಿ ಸಫಲನಾದಲ್ಲಿ ನೀವು ಆಕ್ಷೇಪಿಸಲ್ಪಟ್ಟ ಮತದಾರನಿಗೆ ಕರೆದು ಆಕ್ಷೇಪಣೆಯನ್ನು ಖಂಡಿಸಲು (ತಾನೇ ಆ ಮತದಾರನೆಂದು ರುಜುವಾತುಪಡಿಸಲು) ಪುರಾವೆ ಹಾಜರು ಮಾಡಲು ಕೇಳತಕ್ಕದ್ದು. ಅವನು ತಾನೇ ಆ ಮತದಾರನೆಂದು ಪುರಾವೆಯಿಂದ ರುಜುವಾತುಪಡಿಸಿದರೆ ಅವನಿಗೆ ಮತದಾನ ಮಾಡಲು ಅವಕಾಶ ಕೊಡಿ. ಅವನು ಹಾಗೆ ಮಾಡಲು ವಿಫಲವಾದಲ್ಲಿ ಆಕ್ಷೇಪಣೆಯು ಸ್ಥಿರಪಡಿಸಲಾಯಿತೆಂದು ಭಾವಿಸುವುದು. ವಿಚಾರಣೆಯ ಸಮಯದಲ್ಲಿ ಗ್ರಾಮ ಅಧಿಕಾರಿಯಿಂದ ಆ ಮತದಾರನ ನೆರೆಯವರಿಂದ ಮತ್ತು ಅಲ್ಲೇ ಹಾಜರು ಇದ್ದ ಯಾವನೇ ಇತರೆ ವ್ಯಕ್ತಿಯಿಂದ, ನಿಜವಾದ ಸಂಗತಿಯನ್ನು ತಿಳಿದುಕೊಳ್ಳಬಹುದು. ಸಾಕ್ಷ್ಯವನ್ನು ತೆಗೆದುಕೊಳ್ಳುವಾಗ ಆಕ್ಷೇಪಿತ ವ್ಯಕ್ತಿಗೆ ಮತ್ತು ಸಾಕ್ಷ್ಯವನ್ನು ನೀಡಲು ಒಪ್ಪಿದ ಇತರೆ ವ್ಯಕ್ತಿಯಿಂದ ಪ್ರಮಾಣ ವಚನವನ್ನು ನೀವು ಓದಿ ಹೇಳಿಸಿಕೊಳ್ಳಬೇಕು. ಒಂದು ವೇಳೆ ಆಕ್ಷೇಪಣೆಯು ಸ್ಥಿರಪಟ್ಟಲ್ಲಿ ಅಂತಹ ವ್ಯಕ್ತಿಯನ್ನು ನೀವು ನಿಮ್ಮ ಮತದಾನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೋಲಿಸ್ ಸ್ಟೇಷನ್ನಿನ ಅಧಿಕಾರಿಯ ಹೆಸರಿಗೆ ಬರೆದ ಫಿರ್ಯಾದು ಪತ್ರದೊಂದಿಗೆ (ಫಿರ್ಯಾದು ಮಾಡುವ **ನಮೂನೆ–5ರ** ಪ್ರತಿಗಳನ್ನು ನಿಮಗೆ ಸರಬರಾಜು ಮಾಡಲಾಗುವುದು) ಪೋಲಿಸರ ವಶಕ್ಕೆ ಕೊಡತಕ್ಕದ್ದು.

**(ಈ) ಶುಲ್ಕವನ್ನು ವಾಪಸ್ ಮಾಡುವುದು ಅಥವಾ ಮುಟ್ಟುಗೋಲು ಹಾಕುವುದು:–**

ವಿಚಾರಣೆ ಮುಗಿದ ಕೂಡಲೇ ಎರಡು ರೂಪಾಯಿಗಳನ್ನು ಆಕ್ಷೇಪಣೆಕಾರನು ಆಕ್ಷೇಪಿಸಲ್ಪಟ್ಟ ವ್ಯಕ್ತಿಯು ನಿಜವಾದ ಮತದಾರನಲ್ಲವೆಂದು ರುಜುವಾತು ಮಾಡುವುದರಲ್ಲಿ ಸಫಲವಾದರೆ ಶುಲ್ಕವನ್ನು ಆಕ್ಷೇಪಣೆ ಮಾಡಿದ ವ್ಯಕ್ತಿಗೆ ಆಕ್ಷೇಪಿತ ಮತಗಳ ಪಟ್ಟಿಯಲ್ಲಿ **(ನಮೂನೆ–6** ಸರಬರಾಜು ಮಾಡಲಾಗುವುದು) ಮತ್ತು ರಸೀದಿ ಪುಸ್ತಕದ ಸಂಬಂಧಪಟ್ಟ ರಸೀದಿಯ ಪಕ್ಕದ ಪ್ರತಿಯ ಮೇಲೆ ಅವನ ಸ್ವೀಕೃತಿಯನ್ನು ತೆಗೆದುಕೊಂಡು ತಿರುಗಿ ಕೊಡಬೇಕು. ಇನ್ನು ನಿಮ್ಮ ಅಭಿಪ್ರಾಯದಲ್ಲಿ ಆಕ್ಷೇಪಣೆಯು ಕ್ಷುಲ್ಲಕವಾದದ್ದು ಅಥವಾ ಸದ್ಭಾವನೆಯಿಂದ ಮಾಡಲಾಗಿಲ್ಲವೆಂದು ಕಂಡುಬಂದಲ್ಲಿ ನೀವು ಶುಲ್ಕದ ಹಣ ಸರ್ಕಾರಕ್ಕೆ ಮುಟ್ಟುಗೋಲು ಹಾಕತಕ್ಕದ್ದು ಮತ್ತು ಅದನ್ನು ಆಕ್ಷೇಪಣೆಕಾರನಿಗೆ ವಾಪಸ್ಸು ಮಾಡಬಾರದು ಮತ್ತು

ಮುಟ್ಟುಗೋಲು ಹಾಕಲಾಗಿದೆ ಎಂಬುದನ್ನು ಆಕ್ಷೇಪಿತ ಮತಗಳ ಪಟ್ಟಿಯಲ್ಲಿ ಮತ್ತು ರಸೀದಿ ಪುಸ್ತಕದ ಸಂಬಂಧಪಟ್ಟ ಪಕ್ಕದ ಪ್ರತಿಯಲ್ಲಿ ನಮೂದಿಸಬೇಕು.

(xiii) **ನೀಡಿದ ಮತಗಳು:–(ಟೆಂಡರ್ಡ್):–**

ಒಬ್ಬ ವ್ಯಕ್ತಿಯು ತಾನೇ ನಿರ್ದಿಷ್ಟ ಮತದಾರನೆಂದು ಬೇರೊಬ್ಬ ವ್ಯಕ್ತಿಯು ಅಂತಹ ಮತದಾರನೆಂದು ಅಗಲೇ ಮತ ನೀಡಿದ ನಂತರ ಮತ ಹಾಕಲು ಬಂದಾಗ ಅವನ ಗುರುತಿನ ಬಗ್ಗೆ ನೀವು ಕೇಳಿದ ಪ್ರಶ್ನೆಗಳಿಗೆ ತೃಪ್ತಿಕರವಾಗಿ ಉತ್ತರ ನೀಡಿದ ಮೇಲೆ ಅವನ ತೋರುಬೆರಳಿನ ಮೇಲೆ ಅಳಿಸಲಾರದ ಮಸಿಯಿಂದ ಗುರುತು ಮಾಡಬೇಕು.

ಅನಂತರ ಆ ಮತಗಟ್ಟೆಯಲ್ಲಿ ಉಪಯೋಗಿಸಲಾಗುತ್ತಿರುವ ಮತಪತ್ರಗಳಿಂದ ಒಂದು ಮತಪತ್ರ ಅವನಿಗೆ ಕೊಡಬೇಕು, ಆದರೆ,

(ಅ) ಅಂಥ ಮತಪತ್ರವು ನಿಮಗೆ ಒದಗಿಸಲಾದ ಮತಪತ್ರಗಳ ಕಟ್ಟಿನಲ್ಲಿ ಕ್ರಮವಾಗಿ ಕೊನೆಯದಾಗಿರಬೇಕು ಮತ್ತು

(ಆ) ಆ ಮತಪತ್ರ ಮತ್ತು ಅದರ ಪಕ್ಕ ಪ್ರತಿಯ ಹಿಂಭಾಗದಲ್ಲಿ " ನೀಡಿದ ಮತಪತ್ರ" ವೆಂದು ಸ್ವತ: ನೀವೇ (ಪ್ರಿಸೈಡಿಂಗ್ ಅಧಿಕಾರಿ) ಹಸ್ತಾಕ್ಷರದಲ್ಲಿ ಬರೆದು ಸಹಿ ಮಾಡಬೇಕು.

ನಂತರ ಮತದಾರನು ಮತದಾನ ಅಂಕಣದಲ್ಲಿ (ಓಟಿಂಗ್ ಕಂಪಾರ್ಟ್‌ಮೆಂಟ್‌ನಲ್ಲಿ) ಗುರುತು ಮಾಡಿದ ಮತಪತ್ರವನ್ನು ಸೂಚನೆಯ ಪ್ರಕಾರ ಮಡಚಿ ಅದನ್ನು ಮತಪೆಟ್ಟಿಗೆಯಲ್ಲಿ ಹಾಕದೇ ನಿಮ್ಮ ಕೈಯಲ್ಲಿ ಕೊಡತಕ್ಕದ್ದು. ನೀವು ಎಲ್ಲಾ ನೀಡಿದ ಮತಪತ್ರ ಗಳನ್ನು ಮತ್ತು **ಪ್ರಪತ್ರ–27** ರಲ್ಲಿ ತಯಾರಿಸಿದ ಪಟ್ಟಿಯನ್ನು ಮತದಾನ ಮುಗಿದ ಮೇಲೆ, ಈ ಉದ್ದೇಶಕ್ಕಾಗಿ ಇಡಲಾದ ಲಕೋಟೆಯಲ್ಲಿ ಹಾಕಿಡಬೇಕು. ಇಂಥ ಮತಪತ್ರಗಳ ಲೆಕ್ಕವನ್ನು **ಪ್ರಪತ್ರ–28** ರಲ್ಲಿ ಮತಪತ್ರ ಲೆಕ್ಕದ ಭಾಗ 1ರ 4(ಸಿ) ರಲ್ಲಿ ನಮೂದಿಸತಕ್ಕದ್ದು.

(xiv) **ಮತದಾನದ ಮುಂದುವರಿಕೆಗೆ ತಡೆಯಾಗಕೂಡದು:–** ಕಡಿಮೆ ವಯಸ್ಸಿನ ಮತದಾರರ (ಆಕ್ಷೇಪಿತ ಮತದಾರರ) ನೀಡಿದ ಮತಗಳ ಇಲ್ಲವೆ ಅಥವಾ ಯಾವನೇ ಸಂದೇಹಾಸ್ಪದ ಮತದಾರನನ್ನು ಮೊದಲನೆ ಪೋಲಿಂಗ್ ಅಧಿಕಾರಿಯು ನಿಮ್ಮ ಬಳಿಗೆ ಇತ್ಯರ್ಥಕ್ಕೆ ಕಳಿಸಿದರೆ ನೀವು ಅವುಗಳನ್ನು ಪರಿಶೀಲಿಸುತ್ತಿರುವಾಗ ಮತದಾನವನ್ನು ತಡೆಹಿಡಿಯಬಾರದು ಮತದಾನ ಮುಂದುವರೆಸುತ್ತಲಿರಬೇಕು.

(xv) **ಮತಪತ್ರಗಳನ್ನು ರದ್ದುಗೊಳಿಸುವುದು:–**

(ಅ) ಮತಪತ್ರದ ಪಕ್ಕ ಪ್ರತಿಯ ಮೇಲೆ ಸಹಿ/ಹೆಬ್ಬೆಟ್ಟಿನ ಗುರುತನ್ನು ಹಾಕುವುದಕ್ಕೆ ನಿರಾಕರಿಸಿದರೆ:–

ಯಾವನೇ ಮತದಾರನು ಮತಪತ್ರದ ಪಕ್ಕದ ಪ್ರತಿಯ ಮೇಲೆ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ಹಾಕುವುದಕ್ಕೆ ನಿರಾಕರಿಸಿದರೆ, ಅವನಿಗೆ ಮತಪತ್ರವನ್ನು ಕೊಡತಕ್ಕದ್ದಲ್ಲ. ಪಕ್ಕ ಪ್ರತಿಯ ಜೊತೆಗಿದ್ದ ಮತಪತ್ರವನ್ನು ಯಾವುದರ ಮೇಲೆ ಮತಗಟ್ಟೆಯ ಅಧಿಕಾರಿಯಿಂದ ಸಹಿ ಮಾಡಲು

ನಿರಾಕರಿಸಿದವನ ಮತದಾರರ ಪಟ್ಟಿಯ ಸಂಖ್ಯೆಯನ್ನು ಈಗಾಗಲೇ ಬರೆದಿದ್ದರೆ ಮತಪತ್ರ ರದ್ದುಮಾಡಿ ಮತಪತ್ರ ಮತ್ತು ಪಕ್ಕದ ಪ್ರತಿಯ ಹಿಂದೆ " ಸಹಿ ಮಾಡಲು ನಿರಾಕರಿಸಿದುದರಿಂದ ರದ್ದು ಮಾಡಲಾಗಿದೆ" ಎಂದು ಬರೆಯತಕ್ಕದ್ದು. ಅಂತಹ ರದ್ದು ಮಾಡಲಾದ ಮತಪತ್ರವನ್ನು **ಪ್ರಪತ್ರ–28**ರ ಮತಪತ್ರ ಲೆಕ್ಕದ ಭಾಗ 1ರ 4(ಎ)ಯಲ್ಲಿ ನಮೂದಿಸಬೇಕು ಮತ್ತು ರದ್ದುಮಾಡಲಾದ ಮತಪತ್ರಗಳನ್ನೊಳಗೊಂಡ ಲಕೋಟೆಯಲ್ಲಿಡತಕ್ಕುದ್ದು.

(ಆ) ಲೋಪವುಳ್ಳ ಮತಪತ್ರಗಳು:– ಮತಪತ್ರಗಳನ್ನು ಕೊಡುತ್ತಿರುವಾಗ ಅದರಲ್ಲಿ ಏನಾದರೂ ಲೋಪದೋಷಗಳು ಕಂಡುಬಂದರೆ ಅವುಗಳನ್ನು ಮತದಾರರಿಗೆ ಕೊಡದೇ ರದ್ದು ಮಾಡಿ ಅದರ ಹಿಂದೆ " ರದ್ದು ಮಾಡಿದ ಲೋಪವುಳ್ಳ ಮತಪತ್ರ" ಎಂದು ಬರೆದು ನೀವು ಮತದಾನದ ಹಿಂದಿನ ದಿನ ಮತಗಟ್ಟೆಯಲ್ಲಿ "ರದ್ದು ಮಾಡಿದ ಇತರ ಲೋಪವುಳ್ಳ ಮತಪತ್ರಗಳುಳ್ಳ ಮತಪತ್ರ" ಹಿಂಬರಹದೊಂದಿಗೆ ಕಟ್ಟಿನಲ್ಲಿ ಉಳಿಯುವುವು. ಎಲ್ಲಾ ರದ್ದುಗೊಳಿಸಿದ ಮತಪತ್ರಗಳ ಲೆಕ್ಕವನ್ನು **ಪ್ರಪತ್ರ–28**ರ ಭಾಗ 1ರ 4 (ಬಿ)ಯಲ್ಲಿ ನಮೂದಿಸಬೇಕು.

(ಇ) ಹಿಂದಿರುಗಿಸಿದ ಮತಪತ್ರಗಳು: ಒಂದು ವೇಳೆ ಮತದಾರನು ಮತಪತ್ರವನ್ನು ಸ್ವೀಕರಿಸಿದ ನಂತರ ಮತ ನೀಡಲು ಇಚ್ಛೆಪಡದಿದ್ದರೆ ಅವನು ನಿಮಗೆ ಗುರುತುಮಾಡದೆ ಹಿಂದಿರುಗಿಸಬಹುದು. ಇಂತಹ ಮತಪತ್ರ ಮತ್ತು ಪಕ್ಕದ ಪ್ರತಿಯನ್ನು ರದ್ದು ಮಾಡತಕ್ಕದ್ದು ಮತ್ತು ಅದರ ಮೇಲೆ "ಹಿಂದಿರುಗಿಸಲಾಗಿದೆ ರದ್ದುಪಡಿಸಲಾಗಿದೆ" ಎಂದು ಬರೆಯಬೇಕು. ಇಂತಹ ರದ್ದುಗೊಳಿಸಿದ ಮತಪತ್ರಗಳ ಲೆಕ್ಕವನ್ನು **ಪ್ರಪತ್ರ–28** ಭಾಗ 1ರ 4(ಎ)ಯಲ್ಲಿ ನಮೂದಿಸಬೇಕು.

(ಈ) **ನಿರುಪಯುಕ್ತ ಮತಪತ್ರಗಳು:–** ಯಾವನೇ ಮತದಾರನು ಹಾಳಾಗಿದೆ ಎಂದು ಮತಪತ್ರವನ್ನು ನಿಮಗೆ ಹಿಂದಿರುಗಿಸಿದರೆ ಅದು ಅವನ ಅಜಾಗರೂಕತೆಯಿಂದ ಆಗಿದೆಯೆಂದು ನಿಮಗೆ ಖಾತ್ರಿಯೆನಿಸಿದರೆ ಅವನಿಗೆ ಇನ್ನೊಂದು ಮತಪತ್ರವನ್ನು ಕೊಡಬಹುದು. ಹಿಂದಿರುಗಿಸಿದ ಮತಪತ್ರ ಮತ್ತು ಅದರ ಪಕ್ಕದ ಪ್ರತಿಯ ಹಿಂಬದಿಯಲ್ಲಿ "ನಿರಪಯುಕ್ತವಾಗಿದೆ ರದ್ದುಪಡಿಸಲಾಗಿದೆ" ಎಂದು ಬರೆಯತಕ್ಕದ್ದು. ಇಂತಹ ಮತಪತ್ರಗಳ ಲೆಕ್ಕವನ್ನು **ಪ್ರಪತ್ರ–28** ರಲ್ಲಿ ಮತಪತ್ರಗಳ ಲೆಕ್ಕದ ಭಾಗ 1ರ 4(ಬಿ)ಯಲ್ಲಿ ನಮೂದಿಸಿ ಪ್ರತ್ಯೇಕ ಲಕೋಟೆಯಲ್ಲಿ ಹಾಕಿ ಮತದಾನ ಮುಗಿದಮೇಲೆ ಮೊಹರು ಮಾಡತಕ್ಕದ್ದು.

(ಉ) **ಮತದಾನ ರಹಸ್ಯದ ಉಲ್ಲಂಘನೆ:–** ಒಂದು ವೇಳೆ ಯಾವನಿಗೆ ಮತಪತ್ರವನ್ನು ನೀಡಲಾಗಿದೆಯೋ ಅವನು ನೀವು ಎಚ್ಚರಿಕೆ ಕೊಟ್ಟಿದ್ದಾಗ್ಯೂ **ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ ) 1993 ನಿಯಮ 54(5)**ರಲ್ಲಿ ತಿಳಿಸಿದ ವಿಧಾನವನ್ನು ಪಾಲಿಸಲು ನಿರಾಕರಿಸಿದರೆ, ಅವನು ಮತಪತ್ರಕ್ಕೆ ಗುರುತು ಹಾಕಿದ್ದಲ್ಲಿ ಅಥವಾ ಹಾಕದಿದ್ದಲ್ಲಿ ನೀವಾಗಲೀ ಇಲ್ಲವೆ ನಿಮ್ಮ ಆದೇಶದಂತೆ ಪೋಲಿಂಗ್ ಅಧಿಕಾರಿಯಾಗಲಿ ಅವನಿಂದ ಮತಪತ್ರವನ್ನು

ಹಿಂತೆಗೆದುಕೊಳ್ಳಬೇಕು. ಅಂತಹ ಹಿಂತೆಗೆದುಕೊಳ್ಳಲಾದ ಮತಪತ್ರ ಮತ್ತು ಅದರ ಪಕ್ಕ ಪ್ರತಿಗಳ ಹಿಂದೆ "ರದ್ದುಗೊಳಿಸಲಾಗಿದೆ. ಮತದಾನ ರಹಸ್ಯವನ್ನು ಉಲ್ಲಂಘಿಸಲಾಗಿದೆ" ಎಂದು ಬರೆದು ಅದರ ಕೆಳಗೆ ನಿಮ್ಮ ಸಹಿಯನ್ನು ಹಾಕಬೇಕು. ಇಂತಹ ರದ್ದುಗೊಳಿಸಲಾದ ಮತಪತ್ರಗಳನ್ನು ಪತ್ಯೇಕ ಲಕೋಟೆಯಲ್ಲಿ ಹಾಕಿ ಅದರ ಮುಂಭಾಗದ ಮೇಲೆ "ರದ್ದುಗೊಳಿಸಲಾದ ಮತಪತ್ರಗಳು ಮತದಾನದ ಪ್ರಕ್ರಿಯೆಯ ಉಲ್ಲಂಘನೆ" ಎಂದು ಬರೆಯಬೇಕು ಮತ್ತು ಅವುಗಳ ಲೆಕ್ಕವನ್ನು ಮತಪತ್ರಗಳ ಲೆಕ್ಕದ **ಪ್ರಪತ್ರ–28**ರ ಭಾಗ 1ರ 4(ಎ)ದಲ್ಲಿ ನಮೂದಿಸಬೇಕು.

**(xvi) ಚುನಾವಣಾನಿರತ ಸರಕಾರಿ ನೌಕರರಿಗೆ ಮತದಾನದ ಸೌಲಭ್ಯ:–**

ಪೋಲಿಂಗ್ ಅಧಿಕಾರಿಗಳು, ಪ್ರಿಸೈಡಿಂಗ್ ಅಧಿಕಾರಿಗಳು ಅಥವಾ ಇತರ ಸರಕಾರಿ ನೌಕರರು ತಾವು ಮತದಾರರೆಂದು ನೋಂದಾಯಿಸಿದ ಕ್ಷೇತ್ರದಲ್ಲಿ ಚುನಾವಣಾ ಕರ್ತವ್ಯದಲ್ಲಿದ್ದರೆ, ಇಚ್ಛೆಪಟ್ಟಲ್ಲಿ ಅವರು ಚುನಾವಣಾ ಕಾರ್ಯನಿರ್ವಹಿಸುವ ಮತಗಟ್ಟೆಯಲ್ಲಿಯೇ ಅಂಚೆ ಮತಪತ್ರದ ಮೂಲಕವಲ್ಲದೇ ಖುದ್ದಾಗಿ ಮತ ನೀಡುವ ಹಕ್ಕನ್ನು ಪಡೆದಿರುವರು. ಆದರೆ ಈ ಸೌಲಭ್ಯಕ್ಕಾಗಿ ಅವರು **ಪ್ರಪತ್ರ–19**ರಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ಅರ್ಜಿ ಸಲ್ಲಿಸಿರಬೇಕು. ರಿಟರ್ನಿಂಗ್ ಅಧಿಕಾರಿಯು ವ್ಯಕ್ತಿಯು ಈ ಸೌಲಭ್ಯ ಪಡೆಯಲು ಹಕ್ಕುದಾರನೆಂಬುದಕ್ಕೆ ಸಮಾಧಾನಪಡಿಸಿಕೊಂಡು **ಪ್ರಪತ್ರ–20**ರಲ್ಲಿ ಚುನಾವಣಾ ಕರ್ತವ್ಯ ಪ್ರಮಾಣಪತ್ರವನ್ನು ನೀಡುತ್ತಾನೆ.

ಅಂತಹ ವ್ಯಕ್ತಿಯನ್ನು ಗುರುತಿಸಲು ಯಾವುದೇ ಕ್ರಮ ಅಗ್ಯವಿರುವುದಿಲ್ಲ. ಅವನಿಗೆ ಮತದಾನ ಮಾಡಲು ಈ ಕೆಳಕಂಡಂತೆ ಅವಕಾಶ ಕೊಡಬಹುದು.

(ಅ) ಚುನಾವಣಾ ಕರ್ತವ್ಯದ ಪ್ರಮಾಣಪತ್ರವನ್ನು ಹಾಜರುಪಡಿಸಿದಾಗ ಅದರ ಮೇಲೆ ಇದನ್ನು ಹಾಜರು ಪಡಿಸಿದ ವ್ಯಕ್ತಿಯ ಹಸ್ತಾಕ್ಷರ ಪಡೆಯಬೇಕು.

(ಆ) ವ್ಯಕ್ತಿಯ ಹೆಸರು ಮತ್ತು ಪ್ರಮಾಣಪತ್ರದಲ್ಲಿ ನಮೂದಿಸಿದ ಮತದಾರನ ಕ್ರಮ ಸಂಖ್ಯೆಯನ್ನು ಗುರುತುಮಾಡಲ್ಪಟ್ಟ ಮತದಾರರ ಪಟ್ಟಿಯ ಕೊನೆಯಲ್ಲಿ ದಾಖಲೆ ಮಾಡಿಕೊಳ್ಳಿ ಮತ್ತು

(ಇ) ಅವನಿಗೆ ಮತಪತ್ರವನ್ನು ಕೊಟ್ಟು ಆ ಮತಗಟ್ಟೆಯಲ್ಲಿ ಬೇರೆ ಮತದಾರನು ಮತದಾನ ನೀಡುವಂತೆ ಅವನಿಗೂ ನೀಡಲು ಅನುಮತಿಕೊಡಿ.

**(xvii) ಹೆಚ್ಚುವರಿ ಮತಪೆಟ್ಟಿಗೆಯನ್ನು ಉಪಯೋಗಿಸುವ ವಿಧಾನ:–**

ಮತದಾನದ ಯಾವುದೇ ವೇಳೆಯಲ್ಲಿ ಮತಪೆಟ್ಟಿಗೆಯು, ಅದನ್ನು ಅಲುಗಾಡಿಸಿ ಮತ್ತು ಸಂದಿನ ಮೂಲಕ ತಳ್ಳುವುದರಿಂದ ಮತಪತ್ರಗಳನ್ನು ಸಮಸ್ಥಿತಿಗೆ ಒತ್ತಲ್ಪಟ್ಟಿದ್ದರೂ, ತುಂಬುತ್ತಿದೆ ಎಂದು ನಿಮಗೆ ಕಂಡುಬಂದರೆ, ಮತ ಚಲಾವಣೆಯ ಸಮಯದಲ್ಲೇ ಆದರೆ ಸಾಕಷ್ಟು ಮುಂಚಿತವಾಗಿ

ಮೊದಲಿನಂತೆಯೇ ಬೇರೊಂದು ಪೆಟ್ಟಿಗೆಯನ್ನು ಸಿದ್ಧಪಡಿಸಬೇಕು. ಮತಪತ್ರಗಳ ಸಂಗ್ರಹಣೆಗಾಗಿ ಎರಡನೆ ಪೆಟ್ಟಿಗೆಯನ್ನು ಇಟ್ಟಾಗ, ಮೊದಲನೆ ಪೆಟ್ಟಿಗೆಯನ್ನು ತಕ್ಷಣವೇ ಮುಚ್ಚಿ **ಅನುಬಂಧ IV** ರಲ್ಲಿ ಸೂಚಿಸಿದಂತೆ ಮೊಹರು ಹಾಕಬೇಕು ಮತ್ತು ಸುರಕ್ಷಿತ ಸ್ಥಳದಲ್ಲಿ ಇಡಬೇಕು. ಯಾವುದೇ ಘಳಿಗೆಯಲ್ಲಿ ಒಂದೇ ಒಂದು ಪೆಟ್ಟಿಗೆ ಉಪಯೋಗದಲ್ಲಿರಬೇಕು ಮತ್ತು ಮೊದಲನೆ ಪೆಟ್ಟಿಗೆಯು ಪೂರ್ಣ ಉಪಯೋಗವಾದ ನಂತರವೆ ಎರಡನೆ ಪೆಟ್ಟಿಗೆಯನ್ನು ಉಪಯೋಗಕ್ಕೆ ತರಬೇಕು, ಮತಪೆಟ್ಟಿಗೆ ಖಾಲಿ ಇದ್ದದ್ದು, ಪೇಪರ್ ಮೊಹರು ಸೇರಿಸುವ ಎಲ್ಲಾ ನಿರೂಪಣೆಯನ್ನು ಪ್ರಾರಂಭದಲ್ಲಿ ಮಾಡಿದಂತೆ ಇಲ್ಲಿಯೂ ಅನ್ವಯಿಸತಕ್ಕದ್ದು.

ಹೆಚ್ಚುವರಿ ಪೆಟ್ಟಿಗೆಯನ್ನು ಉಪಯೋಗಕ್ಕೆ ತಂದಾಗ ನಿಮಗೆ ಒದಗಿಸಲಾದ ಹೇಳಿಕೆ ಪ್ರಿಸೈಡಿಂಗ್ ಅಧಿಕಾರಿಯ ಘೋಷಣೆ **ನಮೂನೆ–12 ಭಾಗ II** ರಲ್ಲಿನಂತೆ ಮುಂದಿನ ಹೇಳಿಕೆಯನ್ನು ಉಚ್ಛ ಸ್ವರದಲ್ಲಿ ಓದಿ ಹೇಳಬೇಕು. ಈ ರೀತಿ ಪ್ರತಿ ಬಾರಿಯೂ ಹೆಚ್ಚುವರಿ ಮತಪೆಟ್ಟಿಗೆಯನ್ನು ಉಪಯೋಗಕ್ಕೆ ತೆಗೆದುಕೊಂಡಾಗ ಮಾಡಬೇಕು. ನಿಮಗೆ ಒದಗಿಸಲಾದ ಹೇಳಿಕೆ ನಮೂನೆಯ ಹೆಚ್ಚುವರಿ ಪೆಟ್ಟಿಗೆ ಉಪಯೋಗಿಸಿದ ಬಗ್ಗೆ ಹೇಳಿಕೆ ನೀಡಲು ಒಂದೇ ಪುಟವನ್ನೊಳಗೊಂಡಿರುತ್ತದೆ. ಒಂದಕ್ಕಿಂತ ಹೆಚ್ಚು ಹೆಚ್ಚುವರಿ ಪೆಟ್ಟಿಗೆಗಳನ್ನು ಉಪಯೋಗಿಸಿದ್ದರೆ ಒದಗಿಸಲಾದ **ನಮೂನೆ–12 ಭಾಗ II** ರಲ್ಲಿನ ಹೇಳಿಕೆಯನ್ನು ಬಿಳಿ ಹಾಳೆಯೊಂದರ ಮೇಲೆ ಬರೆದುಕೊಂಡು ಹೇಳಿಕೆ ನೀಡಬೇಕು.

(xviii) **ಗಲಭೆ ಮುಂತಾದವುಗಳಿಗಾಗಿ ಮತದಾನ ಮುಂದೂಡುವುದು:–**

ಏನಾದರೂ ಗಲಭೆಯಾದಲ್ಲಿ ಅಥವಾ ಶಾಂತಿ ಭಂಗಕ್ಕೆ ಪ್ರಯತ್ನ ನಡೆದಲ್ಲಿ ಅದನ್ನು ನಿಯಂತ್ರಿಸಲು ಪೋಲೀಸರನ್ನು ಉಪಯೋಗಿಸಿರಿ. ಅದನ್ನು ನಿಯಂತ್ರಿಸಲು ಮತ್ತು ಮತದಾನವನ್ನು ಮುಂದುವರಿಸಲು ಸಾಧ್ಯವಾಗದಿದ್ದರೆ ನೀವು ಮತದಾನವನ್ನು ಮುಂದೂಡಬೇಕು, ಪ್ರಕೃತಿ ವಿಕೋಪ ಅಥವಾ ಬೇರೆ ಸಾಕಷ್ಟು ಕಾರಣಗಳಿಗೂ ಕೂಡ ಮತದಾನ ನಡೆಸುವುದು ಅಸಾಧ್ಯವಾದಲ್ಲಿ ಮತದಾನವನ್ನು ಮುಂದೂಡಬೇಕು. ಸಾಧಾರಣ ಮಳೆ ಅಥವಾ ಬಲವಾದ ಗಾಳಿಯು ಮತದಾನ ಮುಂದೂಡಲು ಸಾಕಷ್ಟು ಕಾರಣವಲ್ಲ. ಮತದಾನ ಮುಂದೂಡಿದ ಪ್ರತಿ ಪ್ರಕರಣದಲ್ಲಿ ರಿಟರ್ನಿಂಗ್ ಅಧಿಕಾರಿಗೆ ಕೂಡಲೇ ನಿಜಾಂಶದ ಬಗ್ಗೆ ಪೂರ್ಣ ವರದಿ ಮಾಡಬೇಕು. ಮತದಾನ ಮುಂದೂಡಲ್ಪಟ್ಟಾಗ, ಉಪಸ್ಥಿತರಿದ್ದ ಸಮಸ್ತರಿಗೂ ತದನಂತರ ಪ್ರಕಟಿಸಲಾಗುವ ದಿನಾಂಕದಂದು ಮತದಾನ ನಡೆಯುವುದೆಂದು ಔಪಚಾರಿಕವಾಗಿ ಪ್ರಕಟಿಸಿ ಮತದಾನವು ಸಾಮಾನ್ಯ ಸ್ಥಿತಿಯಲ್ಲಿ ಮುಗಿದಂತೆ ಮತದಾನದ ಪ್ರತಿನಿಧಿಗಳ ಸಮ್ಮುಖದಲ್ಲಿ ಪೆಟ್ಟಿಗೆ ಇತ್ಯಾದಿಗಳನ್ನು ಮೊಹರು (ಸೀಲು) ಮಾಡತಕ್ಕದ್ದು.

(xix) **ಮತದಾನದ ವೇಳೆ ಮುಗಿಯಲು ಬಂದಾಗ ವ್ಯಕ್ತಿಗಳಿಂದ ಮತದಾನ:–**

ಮತದಾನ ಮುಗಿಯುವ ನಿರ್ದಿಷ್ಟ ಅವಧಿಗೆ ಕೆಲವು ನಿಮಿಷಗಳ ಮೊದಲು ಮತಗಟ್ಟೆಯ ಪರಿಮಿತಿಯೊಳಗೆ ಮತದಾನಕ್ಕಾಗಿ ನಿರೀಕ್ಷಿಸುತ್ತಿರುವ ಎಲ್ಲರಿಗೂ ಸರದಿಯ ಮೇಲೆ ಮತ ನೀಡಲು ಅವಕಾಶ ಕೊಡುವುದಾಗಿ ಪ್ರಕಟಿಸಿ ಆ ಘಳಿಗೆಯಲ್ಲಿ ಕ್ಯೂನಲ್ಲಿ ನಿಂತಿರುವ ಎಲ್ಲಾ ಮತದಾರರಿಗೂ ಸಂಖ್ಯೆ ಒಂದರಿಂದ ಮುಂದುವರೆದ ನಿಮ್ಮ ಸಂಪೂರ್ಣ ಹಸ್ತಾಕ್ಷರವಿರುವ ಚೀಟಿಗಳನ್ನು ಹಂಚಿ ಮತದಾನದ ಘಳಿಗೆಯು ಮುಗಿದ ನಂತರವೂ ಈ ಮತದಾರರು ತಮ್ಮ ಮತ ಚಲಾಯಿಸುವವರೆಗೆ ಮತದಾನವನ್ನು ಮುಂದುವರಿಸಿರಿ. ನಿರ್ದಿಷ್ಟ ಅಂತಿಮ ಘಳಿಗೆ ಮುಗಿದ ನಂತರ ಬೇರೆ ಯಾರೂ ಸರದಿಯನ್ನು ಸೇರಿಕೊಳ್ಳದಂತೆ ಖಾತ್ರಿ ಮಾಡಿಕೊಳ್ಳಿರಿ. ನೀವು ಹಂಚಿದ ನಿಮ್ಮ ಹಸ್ತಾಕ್ಷರವಿರುವ ಚೀಟಿಗಳನ್ನು ಪಡೆದವರಿಗೆ ಮಾತ್ರ ಮತದಾನ ಮಾಡಲು ಅವಕಾಶ ಕೊಡಬೇಕು.

(xx) **ಮತದಾನ ಸಮಾಪ್ತಿಗೊಳಿಸುವುದು:–**

ಮತದಾನ ಮಾಡಲು ನಿರ್ದಿಷ್ಟಪಡಿಸಿದ ಅಂತಿಮ ಘಳಿಗೆಯಲ್ಲಿ ಹಾಜರಿರುವ ಎಲ್ಲಾ ಮತದಾರರೂ ಮೇಲೆ ಹೇಳಿದ ಪ್ರಕಾರ ಮತ ನೀಡಿದ ನಂತರ ಮತದಾನವು ಸಮಾಪ್ತಿಯಾಯಿತೆಂದು ನೀವು ಔಪಚಾರಿಕವಾಗಿ ತಿಳಿಸಬೇಕು ಮತ್ತು ತದನಂತರ ಯಾವ ವ್ಯಕ್ತಿಗೂ ಯಾವುದೇ ಸಂದರ್ಭದಲ್ಲಿ ಮತ ನೀಡಲು ಅನುಮತಿ ಕೊಡಕೂಡದು.

(xxi) **ಮತಪೆಟ್ಟಿಗೆಯನ್ನು ಮುಚ್ಚುವುದು ಮತ್ತು ಮೊಹರು ಮಾಡುವುದು:–**

ಮತದಾನ ಸಮಾಪ್ತಿಯಾದ ನಂತರ ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರ ಸಮ್ಮುಖದಲ್ಲಿ ಮತಪೆಟ್ಟಿಗೆಯಲ್ಲಿ ಸಂದನ್ನು ಮುಚ್ಚಿರಿ ಮತ್ತು **ಅನುಬಂಧ IV** ರಲ್ಲಿಯ ಸೂಚನೆಯಂತೆ ಕ್ರಮ ತೆಗೆದುಕೊಳ್ಳಿರಿ. ಆಮೇಲೆ ಒಂದು ಟೇಪನ್ನು ಪೆಟ್ಟಿಗೆಯ ನಾಲ್ಕು ಭಾಗಗಳಲ್ಲೂ ಉದ್ದವಾಗಿಯೂ ಮತ್ತು ಅಡ್ಡವಾಗಿಯೂ ಮುಚ್ಚಳದ ಮೇಲೆ ಒಂದನ್ನೊಂದು ಎದುರಾಗುವಂತೆ ತೆಗೆದುಕೊಂಡು ಹಿಡಿಕೆ ಇದ್ದರೆ ಅದರ ಕೆಳಗೆ ಬರುವಂತೆ ಗಂಟು ಹಾಕಿರಿ ಮತ್ತು ದಪ್ಪ ಕಾಗದ ಅಥವಾ ಕಾರ್ಡ್‌ಬೋರ್ಡ್ ಮೇಲೆ ಗಂಟನ್ನು ನಿಮ್ಮ ಮುದ್ರೆಯೊಂದಿಗೆ ಮೊಹರು ಮಾಡಿ ಹಾಜರಿರುವ ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರು ಅವರು ಇಚ್ಛೆಪಟ್ಟರೆ ತಮ್ಮ ಮುದ್ರೆ ಅಥವಾ ಹಸ್ತಾಕ್ಷರ ಹಾಕಬೇಕೆಂದು ಕೇಳಿಕೊಳ್ಳಬೇಕು. ಇದಾದ ನಂತರ ಮತಪೆಟ್ಟಿಗೆ ಅಥವಾ ಮತಪೆಟ್ಟಿಗೆಗಳನ್ನು ಒಂದು ಬಟ್ಟೆಯ ಚೀಲದಲ್ಲಿಟ್ಟು ಹೊಲಿಯಬೇಕು ಮತ್ತು ಹೊಲಿಗೆಯ ಮೇಲೆ ಅಲ್ಲಲ್ಲಿ ಮೊಹರು ಮಾಡಬೇಕು. ಹಾಜರಿರುವ ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರು ಅವರು ಇಚ್ಛೆಪಡುವುದಾದರೆ ಅವರ ಮುದ್ರೆಯನ್ನೂ ಹಾಕಲು ಕೇಳಬೇಕು. ಬಟ್ಟೆಯ ಹೊದಿಕೆಯ ಮೇಲೆ ವಿಳಾಸದ ಪತ್ರವನ್ನು ಬಿಗಿಯಾಗಿಯೂ ಮತ್ತು ಸರಿಯಾಗಿಯೂ ಸೇರಿಸಿರಿ. ನಿಮಗೆ ಬಟ್ಟೆಯ ಚೀಲವನ್ನು ಒದಗಿಸಲಾಗುವುದು.

(xxii) **ಮತದಾರರಿಗೆ ಕೊಟ್ಟ ಮತಪತ್ರಗಳ ಸಂಖ್ಯೆಯನ್ನು ಪರಿಶೀಲಿಸುವುದು:–**

ದಿನದ ಮತದಾನ ಮುಗಿದ ನಂತರ ಗುರುತು ಮಾಡಲಾದ ಮತದಾರರ ಪಟ್ಟಿ ಮತ್ತು ಮತಪತ್ರಗಳನ್ನಿಟ್ಟುಕೊಂಡಿದ್ದ ಪೋಲಿಂಗ್ ಅಧಿಕಾರಿಗಳು, ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರಕಾರ ಅವರಿಂದ ಮತದಾರರಿಗೆ ಕೊಡಲಾದ ಮತಪತ್ರಗಳ ಪಟ್ಟಿಯಲ್ಲಿ ನಮೂದಿಸಿದ

ಪ್ರಕಾರ ನೀಡಿದ್ದ ಮತಪತ್ರಗಳ ಒಟ್ಟು ಸಂಖ್ಯೆ ಮತ್ತು ರದ್ದು ಮಾಡಿದ ಮತಪತ್ರದ ಬದಲಾಗಿ ಕೊಡಲ್ಪಟ್ಟ ಮತಪತ್ರಗಳ ಒಟ್ಟು ಸಂಖ್ಯೆಯು ವಾಸ್ತವವಾಗಿ ನೀಡಲಾದ ಮತಪತ್ರಗಳ ಸಂಖ್ಯೆಗೆ ಸರಿಹೊಂದುತ್ತದೆಯೋ ಎಂದು ತಾಳೆ ನೋಡಬೇಕು ಮತ್ತು ಅದನ್ನು ಅವರ ಹಸ್ತಾಕ್ಷರದೊಂದಿಗೆ ಪ್ರಿಸೈಡಿಂಗ್ ಅಧಿಕಾರಿಯು ದಿನಚರಿಯಲ್ಲಿ ನಮೂದಿಸಬೇಕು. ಮೊದಲನೆ ಪೋಲಿಂಗ್ ಅಧಿಕಾರಿಯು ಮಹಿಳಾ ಮತದಾರರ ಸಂಖ್ಯೆಯನ್ನು ಲೆಕ್ಕಹಾಕಿ ಅದನ್ನು ದಾಖಲೆ ಮಾಡತಕ್ಕದ್ದು.

**(xxiii) ಮತಪತ್ರಗಳ ಲೆಕ್ಕ**

(ಅ) ತಯಾರು ಮಾಡುವುದು:– ಮತದಾನ ಸಮಾಪ್ತಿಯಾದ ನಂತರ **ಪ್ರಪತ್ರ–28**ರಲ್ಲಿ ನಿಮಗೆ ಒದಗಿಸಲಾದ ಎಲ್ಲಾ ಮತಪತ್ರಗಳು ಮತ್ತು ಮತಗಟ್ಟೆಯಲ್ಲಿ ಉಪಯೋಗಿಸಲಾದ ಮತಪತ್ರಗಳ ಸಂಪೂರ್ಣ ಮತ್ತು ನಿಖರವಾದ ಲೆಕ್ಕವನ್ನು ನೀವು ತಯಾರಿಸಬೇಕು.

(ಆ) ನೀವು ಮತದಾನದ ಸಮಾಪ್ತಿ ವೇಳೆಯಲ್ಲಿ ಹಾಜರಿರುವ ಪ್ರತಿಯೊಬ್ಬ ಅಭ್ಯರ್ಥಿಯ ಪೋಲಿಂಗ್ ಏಜೆಂಟನಿಗೆ (ಪ್ರತಿಯೊಬ್ಬ ಅಭ್ಯರ್ಥಿಯ ಒಬ್ಬ ಏಜೆಂಟನಿಗೆ ಮಾತ್ರ) ಮತಪತ್ರಗಳ ಲೆಕ್ಕದ ದೃಢೀಕೃತ ಪ್ರತಿಯನ್ನು ಕೊಡಬೇಕು. ಅಂತಹ ಪ್ರತಿಯನ್ನು ಪಡೆದ ಬಗ್ಗೆ ಅವರ ಸಂಪೂರ್ಣ ಹಸ್ತಾಕ್ಷರವನ್ನು ಮತದಾನ ಸಮಾಪ್ತಿ ಮಾಡುವಾಗ ಮಾಡಬೇಕಾದ ಹೇಳಿಕೆಯ ನಮೂನೆಯ ಮೇಲೆ ಪಡೆದುಕೊಳ್ಳಿರಿ.

**(xxiv) ಮತದಾನ ಸಮಾಪ್ತಿಯಾದ ನಂತರದ ಘೋಷಣೆ:–**

ಮತದಾನ ಸಮಾಪ್ತಿಯಾದ ಮೇಲೆ ಮತ್ತು ಮತಪತ್ರಗಳ ಲೆಕ್ಕ ತಯಾರಿಸಿದ ಕೂಡಲೇ ನಿಮಗೆ ಒದಗಿಸಲಾದ ಹೇಳಿಕೆ **ನಮೂನೆ–12 ಭಾಗ III** ರಲ್ಲಿರುವಂತೆ ಹೇಳಿಕೆ ನೀಡಬೇಕು ಮತ್ತು **ಪ್ರಪತ್ರ–28** (ಮತಪತ್ರಗಳ ಲೆಕ್ಕದ) ಪ್ರತಿ ಕೊಟ್ಟ ಬಗ್ಗೆ ಹಾಜರಿರುವ ಅಭ್ಯರ್ಥಿಗಳ ಮತಗಟ್ಟೆಯ ಏಜೆಂಟರಿಂದ ಹಸ್ತಾಕ್ಷರ ತೆಗೆದುಕೊಳ್ಳಬೇಕು.

(xxv) **ಪ್ರಿಸೈಡಿಂಗ್ ಅಧಿಕಾರಿಯ ದಿನಚರಿ:–**

ನಿಮಗೆ ಒದಗಿಸಲಾದ ದಿನಚರಿಯಲ್ಲಿ ಮತದಾನ ತೆಗೆದುಕೊಳ್ಳುವಾಗಿನ ನಡವಳಿಯನ್ನು ಬರೆಯಬೇಕು. ಸಂಬಂಧಿಸಿದ ಘಟನೆಗಳನ್ನು ಅವು ನಡೆದಂತೆ ಆಗಿಂದಾಗ ದಾಖಲೆ ಮಾಡಬೇಕು ಮತ್ತು ದಿನಚರಿಯಲ್ಲಿ ದಾಖಲೆಗಳನ್ನು ಭರ್ತಿ ಮಾಡುವುದು ಮತ್ತು ಸಂಪೂರ್ಣಗೊಳಿಸುವುದನ್ನು ಮತದಾನ ಮುಗಿಯುವವರೆಗೂ ಮುಂದೂಡಬಾರದು. ಅದರಲ್ಲಿ ಎಲ್ಲಾ ಪ್ರಮುಖ ಘಟನೆಗಳನ್ನು ಆಯಾ ಸಮಯದಲ್ಲಿ ನಮೂದಿಸಬೇಕು.

**(xxvi) ಚುನಾವಣಾ ಕಾಗದ ಪತ್ರಗಳನ್ನು ಮೊಹರು ಮಾಡುವುದು** (ಲಕೋಟೆಗಳಲ್ಲಿ)

ಮತದಾನ ಮುಗಿದ ನಂತರ ಕೆಳಗಿನ ಕಾಗದ ಪತ್ರಗಳನ್ನು ಬೇರೆ ಬೇರೆ ಲಕೋಟೆಯಲ್ಲಿ ಹಾಕಿ ಮೊಹರು ಮಾಡಿರಿ:–

(ಅ) ಗುರುತು ಮಾಡಲಾದ ಮತದಾರರ ಪಟ್ಟಿ.

(ಆ) ಉಪಯೋಗಿಸಿದ ಮತಪತ್ರಗಳ ಪಕ್ಕ ಪ್ರತಿಗಳು

(ಇ) ಪ್ರಿಸೈಡಿಂಗ್ ಅಧಿಕಾರಿ ಯಿಂದ ಪೂರ್ಣ ಸಹಿ ಮಾಡಲಾದ ಮತ್ತು ಮತದಾರರಿಗೆ ಕೊಟ್ಟಿಲ್ಲದ ಮತಪತ್ರಗಳು.

(ಈ) ಮತದಾರರಿಗೆ ಕೊಟ್ಟಿರದ ಬೇರಾವುದೇ ಮತಪತ್ರಗಳು

(ಉ) ನಿಯಮ 54ರ ಪ್ರಕಾರ ಮತದಾನದ ಕ್ರಮಗಳನ್ನು ಉಲ್ಲಂಘಿಸಿದ ಕಾರಣಕ್ಕಾಗಿ ರದ್ದುಮಾಡಲಾದ ಮತಪತ್ರಗಳು.

(ಊ) ಬೇರಾವುದೇ ರದ್ದು ಮಾಡಲಾದ ಮತಪತ್ರಗಳು

(ಋ) ನೀಡಲಾದ ಮತಪತ್ರಗಳ ದಾಖಲೆ ಮತ್ತು **ಪ್ರಪತ್ರ–27**ರಲ್ಲಿ ತಯಾರಿಸಲಾದ ಪಟ್ಟಿ

(ಎ) ಆಕ್ಷೇಪಣೆ ಮಾಡಲಾದ ಮತದಾರರ ಪಟ್ಟಿ

ಈ ಎಲ್ಲಾ ಪೊಟ್ಟಣಗಳ ಮೇಲೆ ನಿಮ್ಮ ಮುದ್ರೆಯಿಂದ ಮತ್ತು ಅದರ ಮೇಲೆ ತನ್ನ ಮುದ್ರೆ ಹಾಕಲು ಇಷ್ಟಪಡುವ ಮತಗಟ್ಟೆಯಲ್ಲಿ ಹಾಜರಿದ್ದ ಅಭ್ಯರ್ಥಿಗಳ ಅಥವಾ ಅವನ ಚುನಾವಣಾ ಏಜೆಂಟನ ಅಥವಾ ಅವನ ಮತಗಟ್ಟೆಯ ಏಜೆಂಟನ ಮುದ್ರೆಯಿಂದ ಮುದ್ರೆ ಹಾಕಬೇಕು. ಮತಪತ್ರಗಳ ಲೆಕ್ಕ **ಪ್ರಪತ್ರ–28,** ಪೇಪರ್ ಸೀಲ್‌ಗಳ ಲೆಕ್ಕ **ನಮೂನೆ–16** ಪ್ರಿಸೈಡಿಂಗ್ ಅಧಿಕಾರಿಯ ದಿನಚರಿ **ನಮೂನೆ–10** ಮತ್ತು ಹೇಳಿಕೆಗಳಿರುವ ಲಕೋಟೆಗಳನ್ನು ಮುಚ್ಚಿ ಮೊಹರು ಹಾಕಿರಿ.

"ಆ" ಯಿಂದ "ಎ" ವರೆಗೆ ಉಲ್ಲೇಖಿಸಲಾದ ಪೊಟ್ಟಣಗಳನ್ನು ಒಂದು ದೊಡ್ಡ ಲಕೋಟೆಯಲ್ಲಿ ಹಾಕಿ ಅದನ್ನೂ ಮೊಹರು ಮಾಡಬೇಕು. ಇತರೆ ಲಕೋಟೆಗಳನ್ನು ಮತ್ತು ಕಾಗದಗಳನ್ನು ಒಂದು ದೊಡ್ಡ ಲಕೋಟೆಯಲ್ಲಿ ಹಾಕಿ ಬಂದು ಮಾಡಬೇಕು. ನಿಮಗೆ ಒದಗಿಸಲಾದ ಚುನಾವಣಾ ಸಾಮಗ್ರಿಗಳನ್ನು ಬೇರೊಂದು ದೊಡ್ಡ ಲಕೋಟೆಯಲ್ಲಿ ಹಾಕಿ ಬಂದು ಮಾಡಬೇಕು.

**(xxvii) ಸಂಗ್ರಹಣಾ ಕೇಂದ್ರದಲ್ಲಿ ಮತಪೆಟ್ಟಿಗೆಗಳನ್ನು ಚುನಾವಣಾ ಕಾಗದ ಪತ್ರಗಳು ಇತ್ಯಾದಿಗಳನ್ನೊಳಗೊಂಡ ಪೊಟ್ಟಣಗಳನ್ನು ತಲುಪಿಸುವುದು:–**

ಪೋಲಿಂಗ್ ಅಧಿಕಾರಿಗಳ ತಂಡವು ಮತಪತ್ರಗಳಿದ್ದ ಪೆಟ್ಟಿಗೆಗಳು ಮತ್ತು ಉಳಿದ ಖಾಲಿ ಪೆಟ್ಟಿಗೆಗಳೇನಾದರೂ ಇದ್ದರೆ ಅವುಗಳೊಂದಿಗೆ ಮತ್ತು ಚುನಾವಣಾ ಪತ್ರಗಳನ್ನೊಳಗೊಂಡ ಎರಡು ದೊಡ್ಡ ಪೊಟ್ಟಣಗಳು, ಚುನಾವಣಾ ಸಾಮಗ್ರಿಗಳಿರುವ ಒಂದು ದೊಡ್ಡ ಲಕೋಟೆ ಮತ್ತು **ಮತಪತ್ರಗಳ ಲೆಕ್ಕ ಪ್ರಪತ್ರ–28, ಪೇಪರ್ ಸೀಲ್‌ಗಳ ಲೆಕ್ಕ ನಮೂನೆ–16 ಪ್ರಿಸೈಡಿಂಗ್ ಅಧಿಕಾರಿಯ ದಿನಚರಿ ನಮೂನೆ–10** ಮತ್ತು ಹೇಳಿಕೆಗಳಿರುವ **ಮೂರು ಲಕೋಟೆಗಳೊಂದಿಗೆ** ಸಂಗ್ರಹಣಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಬೇಕು ಮತ್ತು ಪ್ರಿಸೈಡಿಂಗ್ ಅಧಿಕಾರಿಯು ಅವುಗಳನ್ನೆಲ್ಲಾ ಸಂಬಂಧಪಟ್ಟ ಅಧಿಕಾರಿಗೆ ತಲುಪಿಸಬೇಕು. ತದನಂತರ ಮತದಾನದ ತಂಡವು ಚದುರಬಹುದು.

10: <u>ಮತಗಟ್ಟೆಯ ಪ್ರಪತ್ರ/ನಮೂನೆಗಳ ಪುಸ್ತಕವನ್ನು ಬಳಸುವ ವಿಧಾನ</u>

ಈ ಹಿಂದಿನ ಚುನಾವಣೆಗಳಲ್ಲಿ ಮತಗಟ್ಟೆಗಳಲ್ಲಿ ಬಳಸಲು 26 ಮಾದರಿಯ ಪ್ರಪತ್ರಗಳು/ ನಮೂನೆಗಳನ್ನು ಬಿಡಿಬಿಡಿಯಾಗಿ ಹಾಗೂ ಈ ಪ್ರಪತ್ರ/ನಮೂನೆಗಳಿಗೆ ಪ್ರತ್ಯೇಕವಾದ ಲಕೋಟೆಗಳನ್ನು ಒದಗಿಸಲಾಗುತ್ತಿತ್ತು. ಇದರಿಂದ ಮತಗಟ್ಟೆ ಅಧಿಕಾರಿಗಳು ಪ್ರಪತ್ರಗಳು/ ನಮೂನೆಗಳನ್ನು ಹುಡುಕಿ ಭರ್ತಿಮಾಡಿ ಸಂಬಂಧಪಟ್ಟ ಲಕೋಟೆಗಳಲ್ಲಿ ಇರಿಸಿ ಅದಕ್ಕೆ ಗೋಂದನ್ನು ಅಂಟಿಸಿ ಡಿ.ಮಸ್ಟರಿಂಗ್ ಕೇಂದ್ರಕ್ಕೆ ನೀಡಬೇಕಾಗಿತ್ತು. ಇದರಿಂದ ಅನಗತ್ಯವಾಗಿ ನಮೂನೆಗಳು ಹಾಳಾಗುತ್ತಿದ್ದು ತುಂಬಾ ಸಮಯವನ್ನು ತೆಗೆದುಕೊಳ್ಳುತ್ತಿತ್ತು. ಇದನ್ನು ತಪ್ಪಿಸುವ ದೃಷ್ಟಿಯಿಂದ ಆಯೋಗವು ಈ ಚುನಾವಣೆಯಲ್ಲಿ ಮತಗಟ್ಟೆಗಳಲ್ಲಿ ಬಳಸುವ ಈ ಕೆಳಕಂಡ ಪ್ರಪತ್ರ/ನಮೂನೆಗಳನ್ನು ಪುಸ್ತಕದ ರೂಪದಲ್ಲಿ ತಯಾರಿಸಿ ನೀಡಲಾಗುತ್ತಿದೆ. ಇದರಲ್ಲಿರುವ ಕೆಲವು ನಮೂನೆಗಳನ್ನು ಮಾತ್ರ ಬೇರ್ಪಡಿಸಿ ಉಪಯೋಗಿಸಬೇಕಾಗಿರುತ್ತದೆ. ಉಳಿದವುಗಳನ್ನು ಪುಸ್ತಕದಲ್ಲಿಯೇ ಇರಿಸಿ ಭರ್ತಿ ಮಾಡಬಹುದಾಗಿರುತ್ತದೆ.

**1. ಪ್ರತ್ಯೇಕ ಲಕೋಟೆಯಲ್ಲಿಡುವ ಪ್ರಪತ್ರ/ನಮೂನೆಗಳು**

| ಕ್ರ. ಸಂ | ನಮೂನೆ ಸಂಖ್ಯೆ | ನಮೂನೆಗಳ ವಿವರ | ಸಂಬಂಧಪಟ್ಟ ಲಕೋಟೆ ಸಂಖ್ಯೆ |
|---|---|---|---|
| 1 | ಪ್ರಪತ್ರ–27 | ನೀಡಿದ ಮತಗಳ ಪಟ್ಟಿ (ಟೆಂಡರ್ಡ್) | ಲಕೋಟೆ–2 |
| 2 | ಪ್ರಪತ್ರ–28 | ಮತಪತ್ರಗಳ ಲೆಕ್ಕ | ಲಕೋಟೆ–4 |
| 3 | ನಮೂನೆ 10 | ಪ್ರಿಸೈಡಿಂಗ್ ಅಧಿಕಾರಿಯ ದಿನಚರಿ | ಲಕೋಟೆ–9 |
| 4 | ನಮೂನೆ 16 | ಉಪಯೋಗಿಸಿರುವ ಪೇಪರ್ ಸೀಲುಗಳ ದಾಖಲೆ | ಲಕೋಟೆ–5 |

**2. ನಮೂನೆ ಪುಸ್ತಕದಿಂದ ಬೇರ್ಪಡಿಸಿ ಉಪಯೋಗಿಸುವ ನಮೂನೆಗಳು**

| | | |
|---|---|---|
| 5 | ನಮೂನೆ–3 | ಮತಪೆಟ್ಟಿಗೆಯನ್ನು ಮುಚ್ಚಿರುವ ಬಟ್ಟೆ ಚೀಲದ ಮೇಲೆ ಅಂಟಿಸುವ ಚೀಟಿ |
| 6 | ನಮೂನೆ–4 | ಅನುಮತಿ ಚೀಟಿ |
| 7 | ನಮೂನೆ–24 | ಹಾಜರಾತಿ ಪ್ರಮಾಣ ಪತ್ರ |
| 8 | ನಮೂನೆ–18 | ಡಿ.ಮಸ್ಟರಿಂಗ್ ಕೇಂದ್ರಕ್ಕೆ ಒಪ್ಪಿಸಬೇಕಾದ ಸಾಮಗ್ರಿಗಳ ಪಟ್ಟಿ |

**3. ಪ್ರಪತ್ರ ಹಾಗೂ ನಮೂನೆಗಳನ್ನು ಭರ್ತಿ ಮಾಡಿ ಲಕೋಟೆ–11ರಲ್ಲಿ ಇರಿಸುವುದು.**

| | | |
|---|---|---|
| 9 | ಪ್ರಪತ್ರ–25 | ಆಕ್ಷೇಪಿತ ಮತಗಳ ಪಟ್ಟಿ (ಚಾಲೆಂಜ್) |
| 10 | ಪ್ರಪತ್ರ–26 | ಅಂಧ ಮತ್ತು ದುರ್ಬಲ ಮತದಾರರ ಪಟ್ಟಿ |
| 11 | ನಮೂನೆ–5 | ಪೋಲೀಸ್ ಠಾಣೆ ಅಧಿಕಾರಿಗೆ ಸಲ್ಲಿಸುವ ದೂರು |
| 12 | ನಮೂನೆ–8 | ಪ್ರಿಸೈಡಿಂಗ್ ಅಧಿಕಾರಿಯ ವಿಶೇಷ ಸೂಚನೆ |
| 13 | ನಮೂನೆ–11 | ಅಂಧ: ದುರ್ಬಲ ಮತದಾರನ ಸಂಗಡಿಗನ ಘೋಷಣೆ |
| 14 | ನಮೂನೆ–12 | ಮತದಾನವು ಪ್ರಾರಂಭವಾಗುವ ಮೊದಲು ಪ್ರಿಸೈಡಿಂಗ್ ಅಧಿಕಾರಿಯವರ ಘೋಷಣೆ |
| 15 | ನಮೂನೆ–17 | ಮತದಾನ ತಂಡವು ಮಸ್ಟರಿಂಗ್ ಅಧಿಕಾರಿಯಿಂದ ಸಂಗ್ರಹಿಸಿಕೊಳ್ಳಬೇಕಾದ ಸಾಮಗ್ರಿಗಳ ಪಟ್ಟಿ |
| 16 | ನಮೂನೆ–18 | ಡಿ.ಮಸ್ಟರಿಂಗ್ ಅಧಿಕಾರಿಯವರಿಗೆ ಒಪ್ಪಿಸಬೇಕಾದ ತನಿಖಾ ಪಟ್ಟಿ |
| 17 | ನಮೂನೆ -20 | ಮತದಾರರಿಂದ ಅವರ ವಯಸ್ಸಿನ ಬಗ್ಗೆ ಘೋಷಣೆ ಮಾಡುವ ನಮೂನೆ |
| 18 | ನಮೂನೆ–21 | ಅವರ ವಯಸ್ಸಿನ ಬಗ್ಗೆ ಘೋಷಣೆ ನೀಡಿದ /ನೀಡಲು ನಿರಾಕರಿಸಿದ ನಂತರ ಮತದಾನ ಮಾಡಿದ ಮತದಾರರ ಪಟ್ಟಿ |

<u>ಉಪಯೋಗಿಸುವ ಕ್ರಮದ ಬಗ್ಗೆ ಸೂಚನೆಗಳು;–</u>

1. ಭರ್ತಿಮಾಡಿದ ಕ್ರಮ ಸಂಖ್ಯೆ 1 ರಿಂದ 4 ವರೆಗಿನ ನಮೂನೆಗಳನ್ನು ಪುಸ್ತಕದಿಂದ ಪ್ರತ್ಯೇಕಿಸಿ ಸಂಬಂದಪಟ್ಟ ಲಕೋಟೆಯಲ್ಲಿರಿಸಿ ಸೀಲ್ ಮಾಡುವುದು.
2. **ಮತಪತ್ರ ಲೆಕ್ಕ ಪ್ರಪತ್ರ–28;–** ಪುಸ್ತಕದಲ್ಲಿರುವ 8 ಪ್ರತಿಗಳಲ್ಲಿ ಭರ್ತಿ ಮಾಡಿದ ಒಂದು ಪ್ರತಿಯನ್ನು ಲಕೋಟೆ–4 ರಲ್ಲಿರಿಸಿ ಸೀಲ್ ಮಾಡಿ ಡಿ–ಮಸ್ಟರಿಂಗ್ ಅಧಿಕಾರಿಗಳಿಗೆ ಒಪ್ಪಿಸುವುದು. ಉಳಿದ ಭರ್ತಿ ಮಾಡಿದ ಪ್ರತಿಗಳನ್ನು ಅಭ್ಯರ್ಥಿಗೆ/ ಅವರ ಏಜೆಂಟರಿಗೆ ನೀಡುವುದು.
3. ನಮೂನೆ–3, ನಮೂನೆ–4, ನಮೂನೆ–18 ಮತ್ತು ನಮೂನೆ–24 ಗಳನ್ನು ಪುಸ್ತಕದಿಂದ ಪ್ರತ್ಯೇಕಿಸಿ ಮತಗಟ್ಟೆಯಲ್ಲಿ ಉಪಯೋಗಿಸುವುದು,
4. **ನಮೂನೆ–5;–** ಪೋಲಿಸ್ ಠಾಣಾಧಿಕಾರಿಗೆ ದೂರು ನೀಡಲು ಉಪಯೋಗಿಸಿದಲ್ಲಿ ಅದರ ಪ್ರತಿ ಮತ್ತು ಸ್ವೀಕೃತಿ/ರಸೀದಿಯನ್ನು ಲಕೋಟೆ–11 ರಲ್ಲಿಸುವುದು.
5. ಅಧ್ಯಕ್ಷಾಧಿಕಾರಿಯವರ ಘೋಷಣೆ (ನಮೂನೆ–12) ಎರಡು ಪ್ರತಿಗಳಲ್ಲಿ ಒಂದು ಪ್ರತಿಯನ್ನು ಅಧ್ಯಕ್ಷಾಧಿಕಾರಿಗಳು ಮಾಹಿತಿಗಾಗಿ ತಮ್ಮಲ್ಲಿ ಇಟ್ಟುಕೊಳ್ಳಬಹುದು, ಒಂದು ಪ್ರತಿಯನ್ನು ಪುಸ್ತಕದಲ್ಲಿಯೇ ಭರ್ತಿ ಮಾಡಿ ಲಕೋಟೆ–11 ರಲ್ಲಿ ಇರಿಸುವುದು.
6. ಪ್ರಿಸೈಡಿಂಗ್ ಅಧಿಕಾರಿಗಳು ಮತಗಟ್ಟೆಯಲ್ಲಿ ಅಭ್ಯರ್ಥಿಗಳಿಂದ ಸ್ವೀಕರಿಸುವ ಪ್ರಪತ್ರ–13 ಮತದಾನ ಏಜೆಂಟರ ನೇಮಕಾತಿ ಪತ್ರಗಳು ಮತ್ತು ಪ್ರಪತ್ರ–14 ಮತದಾನ ಏಜೆಂಟರ ರದ್ದಿಯಾತಿ ಪತ್ರಗಳನ್ನು ಹಾಗು ಉಪಯೋಗಿಸದೆ ಇರುವ ಮತದಾರರ ಪಟ್ಟಿಯನ್ನು, ಉಳಿದ ಇತರೆ ಕಾಗದ ಪತ್ರಗಳನ್ನು ಲಕೋಟೆ–11 ರಲ್ಲಿಟ್ಟು ಸೀಲ್ ಮಾಡಿ ಕೊಡುವುದು.
7. ಉಳಿದ ನಮೂನೆಗಳಲ್ಲಿ ಅವಶ್ಯವಿರುವ ನಮೂನೆಗಳನ್ನು ಪ್ರತ್ಯೇಕಿಸದೇ ಪುಸ್ತಕದಲ್ಲಿಯೇ ಭರ್ತಿಮಾಡಿ ಪುಸ್ತಕದ ಸಮೇತವಾಗಿ ಲಕೋಟೆ–11 ರಲ್ಲಿರಿಸಿ ಲಕೋಟೆಯನ್ನು ಸೀಲ್ ಮಾಡಿ, ಲಕೋಟೆಯ ಮೇಲೆ ಭರ್ತಿಮಾಡಿರುವ ನಮೂನೆಗಳ/ಪ್ರಪತ್ರಗಳ ವಿವರಗಳನ್ನು (✓) ಮಾಡುವುದು. ಸದರಿ ಲಕೋಟೆಯನ್ನು ಡಿ–ಮಸ್ಟರಿಂಗ್ ಕೇಂದ್ರದಲ್ಲಿ ನೀಡಿ ಸ್ವೀಕೃತಿ ಪಡೆದುಕೊಳ್ಳುವುದು.
8. ಪುಸ್ತಕದ ಕೊನೆಯಲ್ಲಿ ಎರಡು ಬಿಳಿ ಹಾಳೆಯನ್ನು ನೀಡಲಾಗಿದ್ದು, ಅವಶ್ಯಕವಿದ್ದಲ್ಲಿ ಅವುಗಳನ್ನು ಉಪಯೋಗಿಸಿಕೊಳ್ಳುವುದು.
9. 2ಕ್ಕಿಂತ ಹೆಚ್ಚು ಪುಟಗಳಿರುವ ನಮೂನೆ/ ಪ್ರಪತ್ರಗಳನ್ನು ಭರ್ತಿ ಮಾಡಿ ಸ್ಟಪ್ಲರ್ / ಗುಂಡುಪಿನ್ನಿನೊಂದಿಗೆ ಸೇರಿಸಿ ಪುಟಸಂಖ್ಯೆಯನ್ನು ನೀಡುವುದು.

––––––––––––––––––––*****–––––––––––––––––

## ಅನುಬಂಧ–I

## ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಉದ್ಧರಣ

**ಪ್ರಕರಣ–7 ಮತದಾನದ ವಿಧಾನ ಮತ್ತು ಚುನಾವಣಾ ಕಾರ್ಯ ವಿಧಾನ (ಗ್ರಾಮ ಪಂಚಾಯತ್)**

(1) ಪ್ರತಿಯೊಬ್ಬ ಮತದಾರನು ಚುನಾವಣಾ ಕ್ಷೇತ್ರದಿಂದ ಎಷ್ಟು ಸದಸ್ಯರು ಚುನಾಯಿತರಾಗಬೇಕಾಗಿದೆಯೋ ಅಷ್ಟು ಮತಗಳನ್ನು ಹೊಂದಿರತಕ್ಕದ್ದು. ಯಾವನೇ ಮತದಾರನು ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತವನ್ನು ಕೊಡತಕ್ಕದ್ದಲ್ಲ.

(2) ಈ ಅಧಿನಿಯಮದ ಉಪ ಬಂಧಗಳಿಗೆ ಒಳಪಟ್ಟು ಗ್ರಾಮ ಪಂಚಾಯತಿಗೆ ಚುನಾವಣೆಗಳನ್ನು ಪಕ್ಷದ ಆಧಾರದ ಮೇಲಲ್ಲದೆ, ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಅನುಸಾರವಾಗಿ ಮತದಾನದ ಮೂಲಕ ನಡೆಸತಕ್ಕದ್ದು.

**ಪ್ರಕರಣ–26 ಮತದಾನ ಕೇಂದ್ರದಲ್ಲಿ ಅಥವಾ ಬಳಿಯಲ್ಲಿ ಚುನಾವಣಾ ಪ್ರಚಾರಕ್ಕೆ ನಿಷೇಧ:–**

(1) ಯಾವನೇ ವ್ಯಕ್ತಿಯು, ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕದಂದು ಅಥವಾ ದಿನಾಂಕಗಳಲ್ಲಿ ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದಿಂದ ನೂರು ಮೀಟರುಗಳ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೆಳಕಂಡ ಯಾವುದೇ ಕಾರ್ಯಗಳನ್ನು ಮಾಡತಕ್ಕದ್ದಲ್ಲ.

(ಎ) ಮತಗಳಿಗಾಗಿ ಪ್ರಚಾರ ಮಾಡುವುದು; ಅಥವಾ

(ಬಿ) ಯಾವನೇ ಮತದಾರನ ಮತವನ್ನು ಕೋರುವುದು; ಅಥವಾ

(ಸಿ) ಯಾವನೇ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡಬಾರದೆಂದು ಯಾವನೇ ಮತದಾರನ ಮನ ಒಲಿಸುವುದು; ಅಥವಾ

(ಡಿ) ಚುನಾವಣೆಯಲ್ಲಿ ಮತ ನೀಡದಂತೆ ಯಾವನೇ ಮತದಾರನ ಮತ ಒಲಿಸುವುದು; ಅಥವಾ

(ಇ) ಯಾವುದೇ ನೋಟೀಸು (ಚುನಾವಣೆಗೆ ಸಂಬಂಧಿಸಿದ ಅಧಿಕೃತ ನೋಟೀಸಿನ ಹೊರತು) ಅಥವಾ ಚಿನ್ಹೆಯನ್ನು ಪ್ರದರ್ಶಿಸುವುದು.

(2) (1)ನೇ ಉಪ ಪ್ರಕರಣದ ಉಪ ಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**ಪ್ರಕರಣ-27 ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರ ಅನುಚಿತ ನಡತೆಗಾಗಿ ದಂಡನೆ:-**

(1) ಯಾವನೇ ವ್ಯಕ್ತಿಯು ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವಂಥ ದಿನಾಂಕದಂದು ಅಥವಾ ದಿನಾಂಕಗಳಂದು

(ಎ) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ದ್ವಾರದಲ್ಲಿ ಅಥವಾ ಅದರ ಅಕ್ಕಪಕ್ಕದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮನುಷ್ಯನ ಧ್ವನಿಯನ್ನು ವರ್ಧಿಸಲು ಅಥವಾ ಯಥಾವತ್ತಾಗಿ ನಿರೂಪಿಸುವುದಕ್ಕಾಗಿ ಮೆಗಾಫೋನ್ ಅಥವಾ ಧ್ವನಿವರ್ಧಕದಂಥ ಯಾವುದೇ ಸಲಕರಣೆಯನ್ನು ಉಪಯೋಗಿಸತಕ್ಕದ್ದಲ್ಲ ಅಥವಾ ಚಾಲನೆ ಮಾಡತಕ್ಕದ್ದಲ್ಲ.

(ಬಿ) ಮತದಾನ ಕೇಂದ್ರದಲ್ಲಿ ಅಥವಾ ಅದರ ದ್ವಾರದಲ್ಲಿ ಅಥವಾ ಅದರ ಅಕ್ಕಪಕ್ಕದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮತದಾನಕ್ಕಾಗಿ ಮತದಾನ ಕೇಂದ್ರಕ್ಕೆ ಭೇಟಿ ಕೊಡುವ ಯಾವನೇ ವ್ಯಕ್ತಿಗೆ ಕಿರುಕುಳ ಉಂಟು ಮಾಡುವ ಹಾಗೆ ಅಥವಾ ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ಇತರ ವ್ಯಕ್ತಿಗಳ ಕೆಲಸಕ್ಕೆ ಅಡ್ಡಿಯುಂಟು ಮಾಡುವ ಹಾಗೆ ಗಟ್ಟಿಯಾಗಿ ಕೂಗಾಡತಕ್ಕದ್ದಲ್ಲ ಅಥವಾ ಅನ್ಯಥಾ ಅನುಚಿತ ರೀತಿಯಲ್ಲಿ ನಡೆದುಕೊಳ್ಳತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸಲು ಉದ್ದೇಶ ಪೂರ್ವಕವಾಗಿ ಸಹಾಯ ಮಾಡುವ ಅಥವಾ ದುಷ್ಪ್ರೇರಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರೆಡರಿಂದಲೂ ದಂಡಿತನಾಗತಕ್ಕದ್ದು.

(3) ಮತದಾನ ಕೇಂದ್ರದ ಪ್ರಿಸೈಡಿಂಗ್ ಆಫೀಸರ್ ಅವರು, ಯಾವನೇ ವ್ಯಕ್ತಿಯು ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡುತ್ತಿರುವನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣವಿದ್ದರೆ, ಅವರು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡುವಂತೆ ಯಾವನೇ ಪೋಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಆ ತರುವಾಯ ಪೋಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕದ್ದು.

(4) ಯಾವನೇ ಪೋಲೀಸ್ ಅಧಿಕಾರಿಯು (1)ನೇ ಉಪ ಪ್ರಕರಣದ ಉಪ ಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಂಥ ಬಲವನ್ನು ಪ್ರಯೋಗಿಸಬಹುದು ಮತ್ತು ಅಂಥ ಉಲ್ಲಂಘನೆಗಾಗಿ ಉಪಯೋಗಿಸಿದ ಯಾವುದೇ ಸಲಕರಣೆಯನ್ನು ವಶಪಡಿಸಿಕೊಳ್ಳಬಹುದು.

**ಪ್ರಕರಣ–28 ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡನೆ:–**

(1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕಾಗಿ ನಿಗದಿಪಡಿಸಿದ ವೇಳೆಗಳಲ್ಲಿ ಯಾವನೇ ವ್ಯಕ್ತಿಯು ದುರ್ವರ್ತಿಸಿದರೆ ಅಥವಾ ಪ್ರಿಸೈಡಿಂಗ್ ಆಫೀಸರ್ ಅವರ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪಿದರೆ ಪ್ರಿಸೈಡಿಂಗ್ ಆಫೀಸರ್ ಅವರು ಅಥವಾ ಕರ್ತವ್ಯ ನಿರ್ವಹಿಸುತ್ತಿರುವ ಯಾವನೇ ಪೊಲೀಸ್ ಅಧಿಕಾರಿಯು ಅಥವಾ ಆ ಬಗ್ಗೆ ಪ್ರಿಸೈಡಿಂಗ್ ಆಫೀಸರ್ ಅವರು ಅಧಿಕಾರ ನೀಡಿರುವಂಥ ಯಾವನೇ ವ್ಯಕ್ತಿಯು, ಅವನನ್ನು ಮತದಾನ ಕೇಂದ್ರದಿಂದ ಹೊರಹಾಕಬಹುದು.

(2) (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಮತದಾನ ಕೇಂದ್ರದಲ್ಲಿ ಮತ ನೀಡಲು ಅಥವಾ ಅನ್ಯಥಾ ಹಕ್ಕುಳ್ಳವನಾಗಿರುವ ಯಾವನೇ ಮತದಾರನನ್ನು ಆ ಕೇಂದ್ರದಲ್ಲಿ ಮತ ನೀಡುವ ಅವಕಾಶವನ್ನು ಹೊಂದಿರುವುದನ್ನು ಅಡ್ಡಿಪಡಿಸುವ ಹಾಗೆ ಚಲಾಯಿಸತಕ್ಕದ್ದಲ್ಲ.

(3) ಮತದಾನ ಕೇಂದ್ರದಿಂದ ಹಾಗೆ ಹೊರಹಾಕಲಾದ ಯಾವನೇ ವ್ಯಕ್ತಿಯು ಪ್ರಿಸೈಡಿಂಗ್ ಅಧಿಕಾರಿಯ ಅನುಮತಿ ಇಲ್ಲದೆ ಮತದಾನ ಕೇಂದ್ರವನ್ನು ಪುನ: ಪ್ರವೇಶಿಸಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) (3)ನೇ ಉಪ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**ಪ್ರಕರಣ–29 ಮತದಾನ ರಹಸ್ಯವನ್ನು ಕಾಪಾಡುವುದು:–**

(1) ಯಾವುದೇ ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಮತ್ತು ಎಣಿಸುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು, ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಕಾಪಾಡಲು ಸಹಾಯ ಮಾಡತಕ್ಕದ್ದು (ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಅಧಿಕೃತಗೊಳಿಸಿದ ಯಾವುದೇ ಉದ್ದೇಶಕ್ಕಾಗಿ ಹೊರತು) ಮತ್ತು ಅಂಥ ರಹಸ್ಯವನ್ನು ಭಂಗಗೊಳಿಸುವುದೆಂದು ಪರಿಗಣಿಸುವಂಥ ಯಾವುದೇ ಮಾಹಿತಿಯನ್ನು ಯಾವನೇ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ.

(2) (1) ನೇ ಉಪ ಪ್ರಕರಣದ ಉಪ ಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**ಪ್ರಕರಣ–30 ಚುನಾವಣೆಯಲ್ಲಿ ಅಧಿಕಾರಿಗಳು ಮೊದಲಾದವರು ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡತಕ್ಕದಲ್ಲ ಅಥವಾ ಮತದಾನದ ಮೇಲೆ ಪ್ರಭಾವ ಬೀರತಕ್ಕದ್ದಲ್ಲ:–**

(1) ಯಾವುದೇ ಚುನಾವಣೆಯಲ್ಲಿ ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿ ಆಗಿರುವ ಅಥವಾ ಪೋಲಿಂಗ್ ಅಧಿಕಾರಿ ಆಗಿರುವ ಯಾವನೇ ವ್ಯಕ್ತಿಯು ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿ ನೇಮಕ ಮಾಡಿದ ಯಾವನೇ ಅಧಿಕಾರಿ ಅಥವಾ ಗುಮಾಸ್ತನು (ಮತ ಕೊಡುವುದನ್ನು ಹೊರತುಪಡಿಸಿ) ಅಭ್ಯರ್ಥಿಯು ಚುನಾವಣೆಯಲ್ಲಿ ಗೆಲ್ಲುವ ಸಂಭವವನ್ನು ಹೆಚ್ಚಿಸುವುದಕ್ಕಾಗಿ ಆ ಚುನಾವಣೆಯನ್ನು ನಡೆಸುವಲ್ಲಿ ಅದರ ಮೇಲ್ವಿಚಾರಣೆಯಲ್ಲಿ ಯಾವುದೇ ಕಾರ್ಯವನ್ನು ಮಾಡತಕ್ಕದ್ದಲ್ಲ.

(2) ಹಿಂದೆ ಹೇಳಿದಂಥ ಯಾವನೇ ಅಂಥ ವ್ಯಕ್ತಿಯು ಮತ್ತು ಪೊಲೀಸು ದಳದ ಯಾವನೇ ಸದಸ್ಯನು,–

(ಎ) ಚುನಾವಣೆಯಲ್ಲಿ ಅವನ ಮತವನ್ನು ಕೊಡಲು ಯಾವನೇ ವ್ಯಕ್ತಿಯ ಮನವೊಲಿಸಲು ಅಥವಾ

(ಬಿ) ಚುನಾವಣೆಯಲ್ಲಿ ಅವನ ಮತ ನೀಡದಂತೆ ಯಾವನೇ ವ್ಯಕ್ತಿಯನ್ನು ವಿಮುಖಗೊಳಿಸಲು ಅಥವಾ

(ಸಿ) ಯಾವುದೇ ರೀತಿಯಲ್ಲಿ ಚುನಾವಣೆಯಲ್ಲಿ ಯಾವನೇ ವ್ಯಕ್ತಿಯ ಮತದಾನದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸತಕ್ಕದ್ದಲ್ಲ.

(3) (1) ನೇ ಉಪ ಪ್ರಕರಣದ ಅಥವಾ (2) ನೇ ಉಪ ಪ್ರಕರಣದ ಉಪ ಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) (2) ನೇ ಉಪ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**ಪ್ರಕರಣ–31 ಚುನಾವಣೆಗಳಿಗೆ ಸಂಬಂಧಿಸಿದ ಸರ್ಕಾರಿ ಕರ್ತವ್ಯದ ಭಂಗ:–**

(1) ಈ ಪ್ರಕರಣವು ಅನ್ವಯವಾಗುವ ಯಾವನೇ ವ್ಯಕ್ತಿಯು, ಯುಕ್ತ ಕಾರಣವಿಲ್ಲದೆ ತನ್ನ ಸರಕಾರಿ ಕರ್ತವ್ಯವನ್ನು ಭಂಗ ಮಾಡಿ, ಯಾವುದೇ ಕಾರ್ಯದ ಅಥವಾ ಲೋಪದ ತಪ್ಪಿತಸ್ಥನಾಗಿದ್ದರೆ ಅವನು ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿನ ಅಪರಾಧವು ಸಂಜ್ಞೇಯವಾಗಿರತಕ್ಕದ್ದು

(3) ಹಿಂದೆ ಹೇಳಿದಂಥ ಯಾವುದೇ ಕಾರ್ಯಕ್ಕೆ ಅಥವಾ ಲೋಪಕ್ಕೆ ಸಂಬಂಧಿಸಿದಂತೆ ಹಾನಿ ಪರಿಹಾರಕ್ಕಾಗಿ ಯಾವನೇ ಅಂಥ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(4) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳು ಯಾರೆಂದರೆ, ರಿಟರ್ನಿಂಗ್ ಅಧಿಕಾರಿಗಳು, ಪ್ರಿಸೈಡಿಂಗ್ ಅಧಿಕಾರಿಗಳು ಮತ್ತು ನಾಮಪತ್ರಗಳನ್ನು ಸ್ವೀಕರಿಸುವ ಅಥವಾ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಅಥವಾ ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವ ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಪಟ್ಟ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ನಿಯೋಜಿತನಾದ ಯಾವನೇ ವ್ಯಕ್ತಿ ಮತ್ತು ಈ ಪ್ರಕರಣದ ಉದ್ದೇಶಕ್ಕಾಗಿ "ಸರ್ಕಾರಿ ಕರ್ತವ್ಯ" ಎಂಬ ಪದಾವಳಿಯನ್ನು ಈ ಪ್ರಕರಣದ ಉದ್ದೇಶಕ್ಕಾಗಿ ತದನುಸಾರವಾಗಿ ಅರ್ಥೈಸತಕ್ಕದ್ದು. ಆದರೆ ಅದು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಲ್ಲದೆ ಬೇರೆ ರೀತಿಯಲ್ಲಿ ವಿಧಿಸಿದ ಕರ್ತವ್ಯಗಳನ್ನು ಒಳಗೊಳ್ಳತಕ್ಕದ್ದಲ್ಲ.

**ಪ್ರಕರಣ-32 ಮತದಾನ ಕೇಂದ್ರಗಳಿಂದ ಮತಪತ್ರಗಳನ್ನು ತೆಗೆದುಕೊಂಡು ಹೋಗುವುದು ಅಪರಾಧ:-**

(1) ಯಾವುದೇ ಚುನಾವಣೆಯಲ್ಲಿ ಯಾವನೇ ವ್ಯಕ್ತಿಯು ಮತದಾನ ಕೇಂದ್ರದಿಂದ ಮತಪತ್ರವನ್ನು ಮೋಸದಿಂದ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯವನ್ನು ಮಾಡಲು ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ, ಅವನು ನಿರ್ಣಯವಾದ ಮೇಲೆ ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿ ಅವರಿಗೆ, ಯಾವನೇ ವ್ಯಕ್ತಿಯು, (1) ನೇ ಉಪ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡುತ್ತಿರುವನೆಂದು ನಂಬಲು ಕಾರಣವಿದ್ದರೆ, ಅಂಥ ಅಧಿಕಾರಿಯು ಅಂಥ ವ್ಯಕ್ತಿಯು ಮತದಾನ ಕೇಂದ್ರವನ್ನು ಬಿಡುವುದಕ್ಕೆ ಮುಂಚೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡಲು ಪೋಲಿಸು ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಅಥವಾ ಪೋಲೀಸು ಅಧಿಕಾರಿಯು ಅವನನ್ನು ಶೋಧಿಸುವಂತೆ ಮಾಡಬಹುದು ;

ಪರಂತು ಮಹಿಳೆಯ ಶೋಧನೆಯನ್ನು ಮಾಡಿಸುವ ಅವಶ್ಯಕತೆಯುಂಟಾದಾಗ ಶೋಧನೆಯನ್ನು ಬೇರೊಬ್ಬ ಮಹಿಳೆಯಿಂದ ಸಭ್ಯತೆಗೆ ಕಟ್ಟುನಿಟ್ಟಾಗಿ ಗಮನಕೊಟ್ಟು ಮಾಡತಕ್ಕದ್ದು

(3) ಶೋಧನೆಯ ತರುವಾಯ ದಸ್ತಗಿರಿಯ ವ್ಯಕ್ತಿಯ ಬಳಿ ಸಿಕ್ಕಿದ ಯಾವುದೇ ಮತಪತ್ರವನ್ನು ಪ್ರಿಸೈಡಿಂಗ್ ಅಧಿಕಾರಿ ಅವರು ಪೋಲೀಸು ಅಧಿಕಾರಿಯ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೋಲೀಸ್ ಅಧಿಕಾರಿಯೇ ಶೋಧನೆ ಮಾಡಿದಾಗ ಅಂಥ ಅಧಿಕಾರಿಯು ಅದನ್ನು ಸುರಕ್ಷಿತ ಅಭಿರಕ್ಷೆಯಲ್ಲಿಟ್ಟುಕೊಳ್ಳತಕ್ಕದ್ದು.

(4) (1) ನೇ ಉಪ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**ಪ್ರಕರಣ–33 ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡನೆಗಳು:–**

(1) ಯಾವುದೇ ಚುನಾವಣೆಯಲ್ಲಿ ವ್ಯಕ್ತಿಯು, ಅವನು

(ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ ಅಥವಾ

(ಬಿ) ರಿಟರ್ನಿಂಗ್ ಆಫೀಸರನು ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಅಂಟಿಸಿದ ಯಾವುದೇ ಪಟ್ಟಿಯನ್ನು, ನೋಟೀಸನ್ನು ಅಥವಾ ಇತರೆ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ ; ಅಥವಾ

(ಸಿ) ಯಾವುದೇ ಮತ ಪತ್ರವನ್ನು ಅಥವಾ ಯಾವುದೇ ಮತ ಪತ್ರದ ಮೇಲಿನ ಅಧಿಕೃತ ಚಿನ್ಹೆಯನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೊಸದಿಂದ ನಾಶಪಡಿಸಿದರೆ ;ಅಥವಾ

(ಡಿ) ಕ್ರಮಬದ್ಧವಾದ ಅಧಿಕಾರವಿಲ್ಲದ ಯಾವುದೇ ಮತಪತ್ರವನ್ನು ಯಾವನೇ ವ್ಯಕ್ತಿಗೆ ಸರಬರಾಜು ಮಾಡಿದರೆ ಅಥವಾ ಯಾವನೇ ವ್ಯಕ್ತಿಯಿಂದ ಯಾವುದೇ ಮತಪತ್ರವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರದ ಸ್ವಾಧೀನವನ್ನು ಹೊಂದಿದ್ದರೆ; ಅಥವಾ

(ಇ) ಕಾನೂನು ಮೂಲಕ ತಾನು ಹಾಕಲು ಅಧಿಕೃತನಾಗಿರುವ ಮತಪತ್ರದ ಹೊರತು ಬೇರೆ ಯಾವುದನ್ನಾದರೂ ಮತಪೆಟ್ಟಿಗೆಯೊಳಗೆ ಮೋಸದಿಂದ ಹಾಕಿದರೆ; ಅಥವಾ

(ಎಫ್) ಕ್ರಮಬದ್ಧವಾದ ಅಧಿಕಾರವಿಲ್ಲದೆ, ಚುನಾವಣೆ ಉದ್ದೇಶಗಳಿಗಾಗಿ ಆಗ ಉಪಯೋಗದಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು ನಾಶಪಡಿಸಿದರೆ, ತೆಗದುಕೊಂಡರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪ ಮಾಡಿದರೆ; ಅಥವಾ

(ಜಿ) ಸಂದರ್ಭಾನುಸಾರ, ಮೋಸದಿಂದ ಅಥವಾ ಕ್ರಮಬದ್ಧವಾದ ಅಧಿಕಾರವಿಲ್ಲದೆ ಹಿಂದೆ ಹೇಳಿದ ಯಾವುದೇ ಕಾರ್ಯವನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಯಾವುದೇ ಅಂಥ ಕಾರ್ಯಗಳನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ, ಅಪರಾಧ ತಪ್ಪಿತಸ್ಥನಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ಅಪರಾಧದ ತಪ್ಪಿತಸ್ಥನಾದ ಯಾವನೇ ವ್ಯಕ್ತಿಯು,

(ಎ) ಅವನು ಮತದಾನ ಕೇಂದ್ರದ ರಿಟರ್ನಿಂಗ್ ಆಫೀಸರ್ ಅಥವಾ ಪ್ರಿಸ್ಯೆಡಿಂಗ್ ಆಫೀಸರ್ ಆಗಿದ್ದರೆ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ಸರ್ಕಾರಿ ಕರ್ತವ್ಯದ ಮೇಲೆ ನಿಯೋಜನೆಗೊಂಡ ಇತರ ಯಾವುದೇ ಅಧಿಕಾರಿಯಾಗಿದ್ದರೆ ಅಥವಾ ಗುಮಾಸ್ತನಾಗಿದ್ದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಎರಡು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಅವನು ಇತರೆ ಯಾವನೇ ವ್ಯಕ್ತಿಯಾಗಿದ್ದರೆ, ಅಪರಾಧ ನಿರ್ಣಯವಾದ ಮೇಲೆ, ಆರು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(3) ಈ ಪ್ರಕರಣದ ಉದ್ದೇಶಕ್ಕಾಗಿ, ಚುನಾವಣೆಯನ್ನು ನಡೆಸುವುದರಲ್ಲಿ ಅಥವಾ ಮತಗಳ ಎಣಿಕೆಯು ಸೇರಿದಂತೆ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಪಾಲ್ಗೊಳ್ಳುವುದೆ ಅಥವಾ ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಉಪಯೋಗಿಸಿದ ಮತ ಪತ್ರಗಳಿಗೆ ಅಥವಾ ಇತರ ದಸ್ತಾವೇಜುಗಳಿಗೆ ಚುನಾವಣೆ ನಡೆದ ತರುವಾಯ ಜವಾಬ್ದಾರನಾಗಿರುವುದು ಅವನ ಕರ್ತವ್ಯವಾಗಿದ್ದರೆ “ಸರ್ಕಾರಿ ಕರ್ತವ್ಯ” ದಲ್ಲಿ ನಿರತನಾಗಿರುವುದಾಗಿ ಭಾವಿಸತಕ್ಕದ್ದು. ಆದರೆ “ಸರ್ಕಾರಿ ಕರ್ತವ್ಯ ಎಂಬ ಪದಾವಳಿಯು, ಅಂಥ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ” ಅದರ ಅಡಿಯಲ್ಲಿ ಅಲ್ಲದೆ ಅನ್ಯಥಾ ವಿಧಿಸಿದ ಯಾವುದೇ ಕರ್ತವ್ಯವನ್ನು ಒಳಗೊಳ್ಳತಕ್ಕದ್ದಲ್ಲ.

(4) (2)ನೇ ಉಪ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು

## ಅನುಬಂಧ II

### ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ನಿಯಮಾವಳಿ, 1993ರ ಉದ್ಧರಣ

**ನಿಯಮ 9. ಮತದಾನ ಕೇಂದ್ರಗಳಿಗಾಗಿ ಪ್ರಿಸೈಡಿಂಗ್ ಅಧಿಕಾರಿಗಳ ನೇಮಕ:–**

(1) ಡೆಪ್ಯುಟಿ ಕಮೀಷನರರು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಒಬ್ಬ ಪ್ರಿಸೈಡಿಂಗ್ ಅಧಿಕಾರಿಯನ್ನು ಮತ್ತು ತಾನು ಅವಶ್ಯವೆಂದು ಯೋಚಿಸುವಂತ ಪೋಲಿಂಗ್ ಅಧಿಕಾರಿ ಅಥವಾ ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

(2) ಪೋಲಿಂಗ್ ಅಧಿಕಾರಿಯು ಈ ನಿಯಮಗಳ ಅಡಿಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯ ಎಲ್ಲಾ ಅಥವಾ ಯಾವುದೇ ಪ್ರಕಾರ್ಯವನ್ನು ನೆರವೇರಿಸಬೇಕೆಂದು ಪ್ರಿಸೈಡಿಂಗ್ ಅಧಿಕಾರಿಯು ನಿರ್ದೇಶಿಸುವಂತೆ ಅವನು ಹಾಗೆ ಮಾಡತಕ್ಕದ್ದು.

(3) ಪ್ರಿಸೈಡಿಂಗ್ ಅಧಿಕಾರಿಯು ಅನಾರೋಗ್ಯದಿಂದ ಅಥವಾ ಇತರ ಅನಿವಾರ್ಯ ಕಾರಣದಿಂದಾಗಿ ಮತದಾನ ಕೇಂದ್ರದಿಂದ ಗೈರುಹಾಜರಾಗಲೇಬೇಕಾದರೆ ಅವನ ಪ್ರಕಾರ್ಯಗಳನ್ನು ಯಾವುದೇ ಅಂಥ ಗೈರು ಹಾಜರಿಯ ಕಾಲದಲ್ಲಿ ಅಂಥ ಪ್ರಕಾರ್ಯಗಳನ್ನು ನೆರವೇರಿಸಲು ಡೆಪ್ಯುಟಿ ಕಮೀಷನರು ಈ ಹಿಂದೆಯೇ ಅಧಿಕೃತಗೊಳಿಸಿದಂಥ ಪೋಲಿಂಗ್ ಅಧಿಕಾರಿಯು ನೆರವೇರಿಸತಕ್ಕದ್ದು.

**ನಿಯಮ 10 ಪ್ರಿಸೈಡಿಂಗ್ ಅಧಿಕಾರಿಯ ಕರ್ತವ್ಯಗಳು:–**

ಮತದಾನ ಕೇಂದ್ರದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದು ಮತ್ತು ಮತದಾನವು ನ್ಯಾಯಯುತವಾಗಿ ನಡೆಯುವುದನ್ನು ನೋಡಿಕೊಳ್ಳುವುದು ಪ್ರಿಸೈಡಿಂಗ್ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕದ್ದು.

**ನಿಯಮ 11 ಪೋಲಿಂಗ್ ಅಧಿಕಾರಿಯ ಕರ್ತವ್ಯಗಳು:– (ಅನುಬಂಧ–111ರಲ್ಲಿ ವಿವರವಾಗಿ ನೀಡಲಾಗಿದೆ)**

ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಗೆ ಅವನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಸಹಾಯ ಮಾಡುವುದು ಆ ಮತದಾನ ಕೇಂದ್ರದ ಪೋಲಿಂಗ್ ಅಧಿಕಾರಿಗಳ ಕರ್ತವ್ಯವಾಗಿರತಕ್ಕದ್ದು.

**ನಿಯಮ 25 ಮತದಾನ ಏಜೆಂಟರ್ ನೇಮಕ:–**

(1) ಸ್ಪರ್ಧಿಸುವ ಒಬ್ಬ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಅವನ ಪರವಾಗಿ ಆ ರೀತಿ ಕಾರ್ಯನಿರ್ವಹಿಸಲು ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಒಬ್ಬ ಮತದಾನ ಏಜೆಂಟನ ಮತ್ತು ಇಬ್ಬರು ಬದಲಿ ಏಜೆಂಟರನ್ನು ನೇಮಿಸಬಹುದು.

(2) ಅಂಥ ಪ್ರತಿಯೊಂದು ನೇಮಕವನ್ನು 13ನೇ ಪ್ರಪತ್ರದಲ್ಲಿ ಮಾಡತಕ್ಕದ್ದು ಮತ್ತು ಚುನಾವಣಾ ಕೇಂದ್ರದಲ್ಲಿ ಹಾಜರುಪಡಿಸಲು ಅದನ್ನು ಮತದಾನ ಏಜೆಂಟನ ವಶಕ್ಕೆ ಒಪ್ಪಿಸತಕ್ಕದ್ದು.

(3) ಯಾವನೇ ಮತದಾನ ಏಜೆಂಟನಿಗೆ ಅವನು (2)ನೇ ಉಪನಿಯಮದ ಮೇರೆಗೆ ಮಾಡಲಾದ ಅವನ ನೇಮಕಾತಿಯ ಅದರಲ್ಲಿ ಒಳಗೊಂಡಿರುವ ಘೋಷಣೆಗೆ ಪ್ರಿಸೈಡಿಂಗ್ ಅಧಿಕಾರಿಯ ಮುಂದೆ ರುಜು ಹಾಕಿದ ತರುವಾಯ ಅದನ್ನು ಪ್ರಿಸೈಡಿಂಗ್ ಅಧಿಕಾರಿಗೆ ನೀಡಿದ ಹೊರತು, ಯಾವುದೇ ಮತದಾನ ಕೇಂದ್ರದೊಳಗೆ ಪ್ರವೇಶ ನೀಡತಕ್ಕದ್ದಲ್ಲ.

(4) ಮತದಾನ ಏಜೆಂಟನ ನೇಮಕಾತಿಯ ರದ್ದಿಯಾತಿಯ 14ನೇ ಪ್ರಪತ್ರದಲ್ಲಿ ಇರತಕ್ಕದ್ದು.

(5) ಮತದಾನ ಏಜೆಂಟನ ಯಾವುದೇ ಅಂಥ ರದ್ದಿಯಾತಿ ಅಥವಾ ಮರಣದ ಸಂದರ್ಭದಲ್ಲಿ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು, ಮತದಾನ ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ (2)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಹೊಸ ನೇಮಕಾತಿಯನ್ನು ಮಾಡಬಹುದು.

**ನಿಯಮ 30. ತುರ್ತು ಪರಿಸ್ಥಿತಿಯಲ್ಲಿ ಮತದಾನವನ್ನು ಮುಂದೂಡುವುದು:–**

(1) ಚುನಾವಣೆಯಲ್ಲಿ ಯಾವುದೇ ಮತದಾನ ಕೇಂದ್ರದಲ್ಲಿನ ವ್ಯವಹರಣೆಗಳಿಗೆ ಯಾವುದೇ ದೊಂಬಿ ಅಥವಾ ಬಹಿರಂಗ ಹಿಂಸೆಯಿಂದಾಗಿ ತಡೆ ಅಥವಾ ಅಡ್ಡಿಯುಂಟಾದರೆ ಅಥವಾ ಚುನಾವಣೆಯಲ್ಲಿ ಯಾವುದೇ ಮತದಾನ ಕೇಂದ್ರದಲ್ಲಿ ನೈಸರ್ಗಿಕ ವಿಪತ್ತಿನಿಂದಾಗಿ ಅಥವಾ ಇತರೆ ಯಾವುದೇ ಸಾಕಷ್ಟು ಕಾರಣದಿಂದಾಗಿ ಮತದಾನವನ್ನು ನಡೆಸುವುದು ಸಾಧ್ಯವಾಗದಿದ್ದರೆ, ಅಂಥ ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿ, ರಿಟರ್ನಿಂಗ್ ಅಧಿಕಾರಿಯು ಮುಂದೆ ಸೂಚಿಸತಕ್ಕಂಥ ದಿನಾಂಕದವರೆಗೆ ಮತದಾನದ

ಮುಂದೂಡುವಿಕೆಯನ್ನು ಪ್ರಕಟಿಸತಕ್ಕದ್ದು ಮತ್ತು ಮತದಾನವನ್ನು ಪ್ರಿಸೈಡಿಂಗ್ ಅಧಿಕಾರಿಯು ಮುಂದಕ್ಕೆ ಹಾಕಿದಲ್ಲಿ ಅವನು ರಿಟರ್ನಿಂಗ್ ಅಧಿಕಾರಿಗೆ ತತ್‌ಕ್ಷಣವೇ ತಿಳಿಸತಕ್ಕದ್ದು.

(2) ಮತದಾನವನ್ನು (1) ನೇ ಉಪನಿಯಮದ ಮೇರೆಗೆ ಮುಂದೂಡಿದಾಗಲೆಲ್ಲಾ ರಿಟರ್ನಿಂಗ್ ಅಧಿಕಾರಿಯು ಕೂಡಲೇ ಜಿಲ್ಲಾಧಿಕಾರಿರವರಿಗೆ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ಪರಿಸ್ಥಿತಿಗಳ ಬಗ್ಗೆ ವರದಿ ಮಾಡತಕ್ಕದ್ದು ಮತ್ತು ರಾಜ್ಯ ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆದು ಸಾಧ್ಯವಾದಷ್ಟು ಬೇಗ ಮತದಾನವನ್ನು ಮುಂದೂಡುವುದಕ್ಕೆ ನಿಕಟಪೂರ್ವದಲ್ಲಿದ್ದಂಥ ಹಂತದಿಂದ ಮತದಾನ ಪುನ: ಪ್ರಾರಂಭವಾಗತಕ್ಕ ದಿನವನ್ನು ಗೊತ್ತುಪಡಿಸಿ ನೋಟೀಸನ್ನು ಪ್ರಕಟಿಸತಕ್ಕದ್ದು ಮತ್ತು ಮುಂದೆ ಹಾಕಿದ ಅಂಥ ಮತದಾನವನ್ನು ಪೂರ್ಣಗೊಳಿಸುವುದರೊಳಗೆ ಅಂಥ ಚುನಾವಣಾ ಕ್ಷೇತ್ರದ ಚುನಾವಣೆಯಲ್ಲಿ ಚಲಾಯಿಸಲಾದ ಮತಗಳ ಎಣಿಕೆಯನ್ನು ಮಾಡತಕ್ಕದ್ದಲ್ಲ.

(3) ಹಿಂದೆ ಹೇಳಿದಂತೆ, ಪ್ರತಿಯೊಂದು ಅಂಥ ಸಂದರ್ಭದಲ್ಲಿ, ರಿಟರ್ನಿಂಗ್ ಅಧಿಕಾರಿಯು (2)ನೇ ಉಪನಿಯಮ ದಡಿಯಲ್ಲಿ ನಿಗದಿಪಡಿಸಿದ ಮತದಾನದ ದಿನಾಂಕ, ಸ್ಥಳ ಮತ್ತು ವೇಳೆಯನ್ನು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕದ್ದು.

**ನಿಯಮ 31. ಮುಂದೂಡಿದ ಮತದಾನವನ್ನು ನಡೆಸುವ ವಿಧಾನ:–**

(1) ಯಾವುದೇ ಮತದಾನ ಕೇಂದ್ರದಲ್ಲಿನ ಮತದಾನವನ್ನು 30ನೇ ನಿಯಮದಡಿಯಲ್ಲಿ ಮುಂದೂಡಿದರೆ 58, 59, 61 ಮತ್ತು 62ನೇ ನಿಯಮಗಳ ಉಪಬಂಧಗಳು ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ 12ನೇ ನಿಯಮದಡಿಯಲ್ಲಿ ಆ ಬಗ್ಗೆ ಗೊತ್ತುಪಡಿಸಿದ ವೇಳೆಯಲ್ಲಿ ಮತದಾನವು ಮುಕ್ತಾಯಗೊಂಡಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(2) ಮುಂದೂಡಿದ ಮತದಾನವನ್ನು 30ನೇ ನಿಯಮದ (2)ನೇ ಪ್ರಕರಣದಡಿಯಲ್ಲಿ **ಶಿಫಾರಸ್ಸು ಮಾಡಿದಾಗ,** ಹಾಗೆ ಮುಂದೂಡಿದ ಮತದಾನದಲ್ಲಿ ಈಗಾಗಲೇ ಮತ ಚಲಾಯಿಸಿರುವ ಮತದಾರರನ್ನು ಪುನ: ಮತ ಚಲಾಯಿಸಲು ಅನುಮತಿಸತಕ್ಕದ್ದಲ್ಲ.

(3) ರಿಟರ್ನಿಂಗ್ ಅಧಿಕಾರಿಯು ಅಂಥ ಮುಂದೂಡಿದ ಮತದಾನವು ನಡೆದಂಥ ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಗೆ ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯನ್ನು ಮೊಹರು ಮಾಡಿದ ಪ್ಯಾಕೆಟ್ಟಿನಲ್ಲಿ ಮತ್ತು ಒಂದು ಹೊಸ ಮತಪೆಟ್ಟಿಗೆಯನ್ನು ಒದಗಿಸತಕ್ಕದ್ದು.

(4) ಪ್ರಿಸೈಡಿಂಗ್ ಅಧಿಕಾರಿಯು ಹಾಜರಿರುವ ಮತದಾನ ಏಜೆಂಟರುಗಳ ಸಮ್ಮುಖದಲ್ಲಿ ಮೊಹರು ಪ್ಯಾಕೆಟ್ಟನ್ನು ತೆರೆಯತಕ್ಕದ್ದು ಮತ್ತು ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯನ್ನು, ಮುಂದೂಡಿದ ಮತದಾನದಲ್ಲಿ ಯಾರಿಗೆ ಮತ ಪತ್ರಗಳನ್ನು ನೀಡಲಾಗುತ್ತದೆಯೋ ಆ ಮತದಾರರ

ಹೆಸರುಗಳನ್ನು ಗುರುತು ಮಾಡಿಕೊಳ್ಳುವುದಕ್ಕಾಗಿ **ಉಪಯೋಗಿಸತಕ್ಕದ್ದು** ಆದಾಗ್ಯೂ ಅದರ ಕ್ರಮ ಸಂಖ್ಯೆಯನ್ನು ಅದರಲ್ಲಿ ದಾಖಲು ಮಾಡಿಕೊಳ್ಳಬಾರದು.

(5) 35 ರಿಂದ 11ರವರೆಗೆ ಮತ್ತು 49 ರಿಂದ 42 ರವರೆಗೆ ನಿಯಮಗಳ ಉಪಬಂಧಗಳು ಮುಂದೂಡಿದ ಮತದಾನವನ್ನು ನಡೆಸುವ ಸಂಬಂಧದಲ್ಲಿ ಅದನ್ನು ಹಾಗೆ ಮುಂದೂಡುವ ಮೊದಲು ಮತದಾನದ ಸಂಬಂಧದಲ್ಲಿ ಅವು ಹೇಗೆ ಅನ್ವಯವಾಗುತ್ತಿದ್ದವೋ ಹಾಗೆ ಅನ್ವಯವಾಗತಕ್ಕದ್ದು.

**32.ಮತದಾನ ಮುಂದೂಡುವಿಕೆ ಅಥವಾ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡುದರ ಆಧಾರದ ಮೇಲೆ ಚುನಾವಣೆಯನ್ನು ರದ್ದುಪಡಿಸುವುದು:–**

(1) ಯಾವುದೇ ಚುನಾವಣೆಯಲ್ಲಿ (ಎ) ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ (ಇದರಲ್ಲಿ ಇನ್ನು ಮುಂದೆ ಈ ನಿಯಮದಲ್ಲಿ ಒಂದು ಸ್ಥಳವೆಂದು ಉಲ್ಲೇಖಿತವಾದ) ಆ ಮತದಾನ ಕೇಂದ್ರದಲ್ಲಿ ಅಥವಾ ಸ್ಥಳದಲ್ಲಿ ಮತದಾನದ ಫಲಿತಾಂಶವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲದೇ ಇರುವಂಥ ರೀತಿಯಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡರೆ ಅಥವಾ (ಎ) ಮತಗಳ ಎಣಿಕೆ ಮಾಡುವ ರೀತಿಯಲ್ಲಿ ಯಾವುದೇ ಸ್ಥಳದಲ್ಲಿ ಎಣಿಕೆಯಾಗುತ್ತಿರುವುದರ ಫಲಿತಾಂಶ ತಿಳಿದುಕೊಳ್ಳಲು ಸಾಧ್ಯವಿಲ್ಲದೆ ಇರುವಂಥ ರೀತಿಯಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡರೆ, ರಿಟರ್ನಿಂಗ್ ಅಧಿಕಾರಿಯು, ವಿಷಯವನ್ನು ಕೂಡಲೇ ರಾಜ್ಯ ಚುನಾವಣಾ ಆಯೋಗ ಮತ್ತು ಜಿಲ್ಲಾಧಿಕಾರಿಯವರಿಗೆ ವರದಿ ಮಾಡತಕ್ಕದ್ದು.

(2) ರಾಜ್ಯ ಚುನಾವಣಾ ಆಯೋಗ (1)ನೇ ಉಪನಿಯಮದಡಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಂದ ವರದಿ ಸ್ವೀಕರಿಸಿದ ಮೇಲೆ ಮತ್ತು ಎಲ್ಲ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ.

(ಎ) ಆ ಮತದಾನ ಕೇಂದ್ರದಲ್ಲಿ ಅಥವಾ ಸ್ಥಳದಲ್ಲಿ ನಡೆದ ಮತದಾನವು ಕಾನೂನು ಮಾನ್ಯವಲ್ಲವೆಂದು ಘೋಷಿಸತಕ್ಕದ್ದು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸ ಮತದಾನವನ್ನು ನಡೆಸುವುದಕ್ಕಾಗಿ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಹಾಗೆ ಗೊತ್ತುಪಡಿಸಿದ ಮತ್ತು ನಿಗದಿಪಡಿಸಿದ ವೇಳೆಯನ್ನು ಅಧಿಸೂಚಿಸತಕ್ಕದ್ದು.

(ಬಿ) ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡಾಗ ಹೆಚ್ಚಿನ ಸಂಖ್ಯೆಯ ಮತದಾನ ಕೇಂದ್ರಗಳು ಅಥವಾ ಸ್ಥಳಗಳು ಸೇರಿವೆಯೆಂದು ಯಾವುದೇ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದೆಂದು ಅಥವಾ ಮತಗಟ್ಟೆಯ ಸ್ವಾಧೀನತೆಯ ಚುನಾವಣಾ ಫಲಿತಾಂಶವನ್ನು ಬಾಧಿಸುವಂಥ ರೀತಿಯಲ್ಲಿ ಮತಗಳ ಎಣಿಕೆಯನ್ನು ಬಾಧಿಸುವುದೆಂದು ಅಭಿಪ್ರಾಯಪಟ್ಟರೆ ಆ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಯನ್ನು ರದ್ದುಪಡಿಸತಕ್ಕದ್ದು.

**ವಿವರಣೆ:–** ಈ ನಿಯಮದ ಉದ್ದೇಶಗಳಿಗಾಗಿ "ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು" ಎಂಬುದು ಇತರೆ ವಿಷಯಗಳೊಂದಿಗೆ ಈ ಮುಂದಿನ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ ಎಂದರೆ–

(ಎ) ಯಾವನೇ ವ್ಯಕ್ತಿಯು ಅಥವಾ ವ್ಯಕ್ತಿಗಳು ಮತದಾನ ಕೇಂದ್ರವನ್ನು ಅಥವಾ ಮತದಾನಕ್ಕಾಗಿ ಗೊತ್ತುಪಡಿಸಿರುವ ಸ್ಥಳವನ್ನು ಬಲತ್ಕಾರವಾಗಿ ಹಿಡಿದಿಟ್ಟುಕೊಳ್ಳುವುದು, ಮತದಾನ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಲವಂತವಾಗಿ ವಶಕ್ಕೆ ಒಪ್ಪಿಸುವಂತೆ ಮಾಡುವುದು ಮತ್ತು ಚುನಾವಣೆಗಳು ಶಾಂತಿಯುತವಾಗಿ ನಡೆಯುವುದಕ್ಕೆ ಬಾಧಕವನ್ನುಂಟು ಮಾಡುವಂಥ ಇತರೆ ಯಾವುದೇ ಕೃತ್ಯಗಳನ್ನು ಮಾಡುವುದು.

(ಬಿ) ಯಾವನೇ ವ್ಯಕ್ತಿಯು ಅಥವಾ ವ್ಯಕ್ತಿಗಳು ಒಂದು ಮತದಾನ ಕೇಂದ್ರ ಅಥವಾ ಮತದಾನಕ್ಕೆ ಗೊತ್ತುಪಡಿಸಿರುವ ಸ್ಥಳವನ್ನು ಬಲವಂತವಾಗಿ ವಶಕ್ಕೆ ತೆಗೆದುಕೊಳ್ಳುವುದು ಮತ್ತು ಅವನ ಅಥವಾ ಅವರ ಬೆಂಬಲಿಗರು ಮಾತ್ರ ತಮ್ಮ ಮತದಾನ ಹಕ್ಕನ್ನು ಚಲಾಯಿಸಲು ಅವಕಾಶ ಮಾಡಿಕೊಟ್ಟು ಇತರರು ಮತ ಚಲಾಯಿಸದಂತೆ ತಡೆಯುವುದು.

(ಸಿ) ಯಾವನೇ ಮತದಾರನಿಗೆ ಬೆದರಿಕೆ ಹಾಕಿ ಅವನು ತನ್ನ ಮತ ಚಲಾಯಿಸಲು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕೆ ಗೊತ್ತುಪಡಿಸಿರುವ ಸ್ಥಳಕ್ಕೆ ಹೋಗದಂತೆ ತಡೆಯುವುದು;

(ಡಿ) ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆ ಮಾಡುವ ಸ್ಥಳವನ್ನು ಬಲತ್ಕಾರವಾಗಿ ಹಿಡಿದಿಟ್ಟುಕೊಳ್ಳುವುದು, ಎಣಿಕೆ ಮಾಡುವ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಲವಂತವಾಗಿ ಒಪ್ಪಿಸುವಂತೆ ಮಾಡುವುದು ಮತ್ತು ಮತಗಳನ್ನು ಶಾಂತಿಯುತವಾಗಿ ಎಣಿಸುವ ಕಾರ್ಯಕ್ಕೆ ಬಾಧಕವನ್ನುಂಟು ಮಾಡುವಂಥ ಯಾವುದೇ ಕೃತ್ಯ ಮಾಡುವುದು.

(ಇ) ಸರ್ಕಾರಿ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು ಮೇಲೆ ಹೇಳಲಾದ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಮಾಡುವುದು ಅಥವಾ ಒಬ್ಬ ಅಭ್ಯರ್ಥಿಯು ಚುನಾವಣೆಯ ಸಂಭಾವ್ಯತೆಯ ಮುಂದುವರಿಕೆಯಲ್ಲಿ ಅಂಥ ಯಾವುದೇ ಚಟುವಟಿಕೆಗೆ ಸಹಾಯ ಮಾಡುವುದು ಅಥವಾ ಪರೋಕ್ಷ ಸಮ್ಮತಿ ನೀಡುವುದು.

**ನಿಯಮ 33. ಮತಪೆಟ್ಟಿಗೆಗಳ ನಾಶ ಇತ್ಯಾದಿ ಸಂದರ್ಭಗಳಲ್ಲಿ ಹೊಸ ಮತದಾನ:–**

(1) ಯಾವುದೇ ಚುನಾವಣೆಯಲ್ಲಿ:–

(ಎ) ಮತದಾನ ಕೇಂದ್ರದಲ್ಲಿ ಉಪಯೋಗಿಸಿದ ಯಾವುದೇ ಮತಪೆಟ್ಟಿಗೆಯನ್ನು ಪ್ರಿಸೈಡಿಂಗ್ ಅಧಿಕಾರಿ ಅಥವಾ ರಿಟರ್ನಿಂಗ್ ಅಧಿಕಾರಿಯ ಅಭಿರಕ್ಷೆಯಿಂದ ಕಾನೂನು ಬಾಹಿರವಾಗಿ ತೆಗೆದುಕೊಂಡು ಹೋದರೆ ಅಥವಾ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಿದ್ದರೆ ಅಥವಾ ಅದು ಕಳೆದು ಹೋದರೆ ಅಥವಾ ಆ

ಮತದಾನ ಕೇಂದ್ರ ಅಥವಾ ಆ ಚುನಾವಣಾ ಕ್ಷೇತ್ರದಲ್ಲಿ ಮತದಾನ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗದಷ್ಟು ಮಟ್ಟಿಗೆ ಅದನ್ನು ನಾಶಗೊಳಿಸಿದ್ದರೆ ಅಥವಾ ಕೆಡಿಸಿದ್ದರೆ, ಅಥವಾ

(ಬಿ) ಮತದಾನ ಕೇಂದ್ರದಲ್ಲಿನ ಮತದಾನವನ್ನು ನಿರರ್ಥಗೊಳಿಸುವ ಸಂಭವವಿರುವ ಪ್ರಕ್ರಿಯೆಯಲ್ಲಿ ಯಾವುದೇ ತಪ್ಪು ಅಥವಾ ಅಕ್ರಮತೆಯನ್ನು ಮಾಡಿದ್ದರೆ ರಿಟರ್ನಿಂಗ್ ಅಧಿಕಾರಿಯು ಆ ವಿಷಯವನ್ನು ತಕ್ಷಣವೇ ರಾಜ್ಯ ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು.

(2) ರಾಜ್ಯ ಚುನಾವಣಾ ಆಯೋಗ ಎಲ್ಲ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡು ತರುವಾಯ;

(ಎ) ಆ ಮತದಾನ ಕೇಂದ್ರದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕದ್ದು. ಆ ಮತದಾನ ಕೇಂದ್ರದಲ್ಲಿ ಹೊಸದಾಗಿ ಮತದಾನವನ್ನು ನಡೆಸಲು ದಿವಸವನ್ನು ಗೊತ್ತುಪಡಿಸತಕ್ಕದ್ದು ಮತ್ತು ವೇಳೆಯನ್ನು ನಿಗಧಿಪಡಿಸತಕ್ಕದ್ದು ಮತ್ತು ಹಾಗೆ ಗೊತ್ತುಮಾಡಿದ ದಿನ ಮತ್ತು ಹಾಗೆ ನಿಗಧಿಪಡಿಸಿದ ವೇಳೆಯನ್ನು ತಾನು ಉಚಿತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕದ್ದು ಅಥವಾ

(ಬಿ) ಆ ಮತದಾನ ಕೇಂದ್ರದಲ್ಲಿನ ಹೊಸ ಮತದಾನವು ಯಾವುದೇ ರೀತಿಯಲ್ಲಿ ಆ ಚುನಾವಣಾ ಕ್ಷೇತ್ರದ ಚುನಾವಣೆಯ ಫಲಿತಾಂಶಗಳಿಗೆ ಬಾಧಿತವಾಗುವುದಿಲ್ಲವೆಂದು ಅಥವಾ ಪ್ರಕ್ರಿಯೆಯಲ್ಲಿನ ತಪ್ಪು ಅಥವಾ ಅಕ್ರಮತೆಯು ಮುಖ್ಯವಾದುದಲ್ಲವೆಂದು ಅಭಿಪ್ರಾಯಪಟ್ಟರೆ ಚುನಾವಣೆ ನಡೆಸುವುದನ್ನು ಮುಂದುವರಿಸುವುದಕ್ಕಾಗಿ ಮತ್ತು ಪೂರ್ತಿಗೊಳಿಸುವುದಕ್ಕಾಗಿ ತಾನು ಉಚಿತವೆಂದು ಭಾವಿಸಬಹುದಾದಂಥ ನಿರ್ದೇಶನವನ್ನು ರಿಟರ್ನಿಂಗ್ ಅಧಿಕಾರಿಗೆ ನೀಡತಕ್ಕದ್ದು.

(3) ಅಧಿನಿಯಮದ ಮತ್ತು ಅದರ ಮೇರೆಗೆ ರಚಿತವಾದ ನಿಯಮಗಳು ಮೂಲ ಮತದಾನಕ್ಕೆ ಅವು ಅನ್ವಯವಾಗುವಂತೆಯೇ (2)ನೇ ಉಪ ನಿಯಮದ ಮೇರೆಗಿನ ಪ್ರತಿಯೊಂದು ಹೊಸ ಮತದಾನಕ್ಕೂ ಅನ್ವಯವಾಗತಕ್ಕದ್ದು.

**ನಿಯಮ 34. ಮತದಾನದ ವಿಧಾನ:–**

ಮತದಾನವನ್ನು ನಡೆಸುವ ಪ್ರತಿಯೊಂದು ಚುನಾವಣೆಯಲ್ಲಿ ಮತಗಳನ್ನು ಮತಪತ್ರಗಳ ಮೂಲಕ ನೀಡತಕ್ಕದ್ದು ಮತ್ತು ಚುನಾವಣೆಯಲ್ಲಿ ಮತ ನೀಡುವ ಎಲ್ಲ ಮತದಾರರು ಮತದಾನ ಕೇಂದ್ರದಲ್ಲಿ ಖುದ್ದಾಗಿ ಹಾಗೆ ಮಾಡತಕ್ಕದ್ದು ಮತ್ತು ಯಾವ ಮತವನ್ನು ಪ್ರತಿನಿಧಿಯ ಮೂಲಕ ಸ್ವೀಕರಿಸತಕ್ಕದ್ದಲ್ಲ.

**ನಿಯಮ 35. ಮತಪತ್ರದ ಪ್ರಪತ್ರ:–**

(1) ಪ್ರತಿಯೊಂದು ಮತಪತ್ರಕ್ಕೆ ಅದಕ್ಕೆ ಲಗತ್ತಿಸಿದ ಒಂದು ಪಕ್ಕಪ್ರತಿ ಇರತಕ್ಕದ್ದು ಮತ್ತು ಸದರಿ ಮತಪತ್ರವು ಮತ್ತು ಪಕ್ಕಪ್ರತಿಯು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು ಮತ್ತು ಅದರಲ್ಲಿಯ ವಿವರಗಳು ಅಂಥ ಭಾಷೆಯಲ್ಲಿ ಅಥವಾ ಭಾಷೆಗಳಲ್ಲಿರತಕ್ಕದ್ದು.

(2) ಅಭ್ಯರ್ಥಿಗಳ ಹೆಸರುಗಳನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಕಾಣಿಸಿರುವಂಥ ಕ್ರಮದಲ್ಲಿಯೇ ಮತಪತ್ರದ ಮೇಲೆ ವ್ಯವಸ್ಥೆಗೊಳಿಸತಕ್ಕದ್ದು

(3) ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳ ಹೆಸರು ಒಂದೇ ಆಗಿದ್ದರೆ, ಅವರ ಉದ್ಯೋಗ ಅಥವಾ ವಾಸಸ್ಥಳವನ್ನು ಸೇರಿಸುವ ಮೂಲಕ ಅಥವಾ ಇತರೆ ಯಾವುದೇ ರೀತಿಯಲ್ಲಿ ಅವರನ್ನು ಗುರುತಿಸತಕ್ಕದ್ದು.

**ನಿಯಮ 36. ಮತಪೆಟ್ಟಿಗೆಗಳ ವಿನ್ಯಾಸ:–** ಪ್ರತಿಯೊಂದು ಮತಪೆಟ್ಟಿಗೆಯು ರಾಜ್ಯ ಚುನಾವಣಾ ಆಯೋಗವು ಅನುಮೋದಿಸಬಹುದಾದಂಥ ವಿನ್ಯಾಸದ್ದಾಗಿರತಕ್ಕದ್ದು.

**37. ಮತದಾನ ಕೇಂದ್ರಗಳಲ್ಲಿ ವ್ಯವಸ್ಥೆ :–**

1. ಪ್ರತಿಯೊಂದು ಮತದಾನ ಕೇಂದ್ರದ ಹೊರಗೆ

(ಎ) ಮತದಾನ ಕೇಂದ್ರದಲ್ಲಿ ಮತ ನೀಡಲು ಹಕ್ಕುಳ್ಳ ಮತದಾರರ ಮತದಾನ ಪ್ರದೇಶವನ್ನು ಮತ್ತು ಮತದಾನ ಪ್ರದೇಶಕ್ಕೆ ಒಂದಕ್ಕಿಂತ ಹೆಚ್ಚು ಮತದಾನ ಕೇಂದ್ರಗಳಿದ್ದರೆ ಹಾಗೆ ಹಕ್ಕುಳ್ಳ ಮತದಾರರ ವಿವರಗಳನ್ನು ನಿರ್ದಿಷ್ಟಪಡಿಸುವ ನೋಟೀಸನ್ನು ಮತ್ತು

(ಬಿ) ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯ ಒಂದು ಪ್ರತಿಯನ್ನು ಎದ್ದು ಕಾಣುವಂತೆ ಪ್ರದರ್ಶಿಸತಕ್ಕದ್ದು.

2. ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಮತದಾರರು ಬೇರೆಯವರಿಗೆ ಕಾಣದಂತೆ ತಮ್ಮ ಮತಗಳನ್ನು ಚಲಾಯಿಸಬಹುದಾದಂಥ ಒಂದು ಅಥವಾ ಹೆಚ್ಚು ಮತದಾನದ ಅಂಕಣಗಳನ್ನು ಸ್ಥಾಪಿಸತಕ್ಕದ್ದು.

3. ರಿಟರ್ನಿಂಗ್ ಅಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಸಾಕಷ್ಟು ಸಂಖ್ಯೆಯ ಮತ ಪೆಟ್ಟಿಗೆಗಳು, ಮತದಾರರ ಪೆಟ್ಟಿಗೆಗೆ ಸಂಬಂಧಿಸಿದ ಭಾಗದ ಪ್ರತಿಗಳು, ಮತ ಪತ್ರಗಳು, ಮತಪತ್ರಗಳ ಮೇಲೆ ವಿಭಿನ್ನ ಗುರುತನ್ನು ಮುದ್ರಿಸುವ ಸಲುವಾಗಿರುವ ಉಪಕರಣಗಳು ಮತ್ತು ಮತ ಪತ್ರಗಳಿಗೆ ಗುರುತು ಮಾಡುವುದಕ್ಕಾಗಿ ಮತದಾರರಿಗೆ ಅಗತ್ಯ ಇರುವ ವಸ್ತುಗಳು ಮತ್ತು ಮತದಾನ ನಡೆಸುವುದಕ್ಕೆ ಅಗತ್ಯವಿರುವಂತ ಇತರೆ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

**ನಿಯಮ 38. ಮತದಾನ ಕೇಂದ್ರಗಳಿಗೆ ಪ್ರವೇಶ:–**

ಪ್ರಿಸೈಡಿಂಗ್ ಅಧಿಕಾರಿಯು ಮತದಾನ ಕೇಂದ್ರದ ಒಳಗೆ ಯಾವುದೇ ಒಂದು ಕಾಲದಲ್ಲಿ ಪ್ರವೇಶ ಮಾಡತಕ್ಕ ಮತದಾರರ ಸಂಖ್ಯೆಯನ್ನು ನಿಯಂತ್ರಿಸತಕ್ಕದ್ದು ಮತ್ತು

ಎ. ಪೋಲಿಂಗ್ ಅಧಿಕಾರಿಗಳನ್ನು

ಬಿ. ಚುನಾವಣೆ ಸಂಬಂಧಿಸಿದಂತೆ ಕರ್ತವ್ಯದ ಮೇಲಿರುವಂಥ ಲೋಕ ನೌಕರರನ್ನು

ಸಿ. ಡೆಪ್ಯುಟಿ ಕಮೀಷನರ್‌ನಿಂದ ಮತ್ತು ಚುನಾವಣಾ ಆಯೋಗದಿಂದ ಪ್ರಾಧಿಕೃತರಾದ ವ್ಯಕ್ತಿಗಳನ್ನು

ಡಿ. ಅಭ್ಯರ್ಥಿಗಳು ಮತ್ತು ಅವರ ಚುನಾವಣಾ ಏಜೆಂಟರು ಮತ್ತು ಪ್ರತಿಯೊಬ್ಬ ಅಭ್ಯರ್ಥಿಯ ಒಬ್ಬ ಮತದಾನ ಏಜೆಂಟರನ್ನು;

ಇ. ಮತದಾರರ ಸಂಗಡ ಇರುವ ಕೈಕೂಸನ್ನು;

ಎಫ್. ಸಹಾಯವಿಲ್ಲದೆ ಚಲಿಸಲು ಸಾಧ್ಯವಿಲ್ಲದಂಥ ಕುರುಡ ಅಥವಾ ದುರ್ಬಲ ಮತದಾರನ ಜೊತೆಗೆ ಬರುವ ವ್ಯಕ್ತಿಯನ್ನು;

ಜಿ. ಚುನಾವಣೆಯ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯು ನಿಯೋಜಿಸಬಹುದಾದಂತ ಇತರ ವ್ಯಕ್ತಿಗಳನ್ನು, ಹೊರತುಪಡಿಸಿ ಇತರ ಎಲ್ಲ ವ್ಯಕ್ತಿಗಳನ್ನು ಹೊರ ಹಾಕತಕ್ಕದ್ದು.

**ನಿಯಮ 39. ಮಹಿಳಾ ಮತದಾರರಿಗೆ ಸೌಲಭ್ಯಗಳು:–**

1. ಮತದಾನ ಕೇಂದ್ರವು ಪುರುಷರು ಮತ್ತು ಮಹಿಳಾ ಮತದಾರರಿಬ್ಬರಿಗೂ ಇದ್ದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಇವರನ್ನು ಮತದಾನ ಕೇಂದ್ರದ ಒಳಕ್ಕೆ ಒಬ್ಬರಾದ ತರುವಾಯ ಒಬ್ಬರಂತೆ ಪ್ರತ್ಯೇಕ ತಂಡಗಳಲ್ಲಿ ಪ್ರವೇಶಿಸತಕ್ಕದ್ದೆಂದು ನಿರ್ದೇಶಿಸಬಹುದು.

2. ಮಹಿಳಾ ಮತದಾರರಿಗೆ ಸಹಾಯ ಮಾಡುವ ಸಲುವಾಗಿ ಮತ್ತು ಮಹಿಳಾ ಮತದಾರರಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಮತವನ್ನು ತೆಗೆದುಕೊಳ್ಳುವಲ್ಲಿ ಪ್ರಿಸೈಡಿಂಗ್ ಅಧಿಕಾರಿಗೆ ಸಹಾಯ ಮಾಡುವ ಸಲುವಾಗಿ ಮತ್ತು ವಿಶೇಷವಾಗಿ ಅವಶ್ಯವೆನಿಸಿದಾಗ ಯಾರೇ ಮಹಿಳಾ ಮತದಾರಳ ಶೋಧನೆಗೆ ಸಹಾಯ ಮಾಡುವ ಸಲುವಾಗಿ ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯು ಸಹಾಯಕ್ಕಾಗಿ ಸೇವೆ ಸಲ್ಲಿಸಲು ಒಬ್ಬ ಮಹಿಳೆಯನ್ನು ನೇಮಕ ಮಾಡಬಹುದು.

**ನಿಯಮ 40. ಮತದಾರರನ್ನು ಗುರುತಿಸುವುದು:–**

1. ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯು ಮತದಾರರನ್ನು ಗುರುತಿಸುವುದಕ್ಕೆ ಸಹಾಯ ಮಾಡಲು ಅಥವಾ ಮತ ತೆಗೆದುಕೊಳ್ಳುವಲ್ಲಿ ಪ್ರಿಸೈಡಿಂಗ್ ಅಧಿಕಾರಿಗೆ ಅನ್ಯಥಾ ಸಹಾಯ ಮಾಡಲು ತಾವು ಸೂಕ್ತವೆಂದು ನಿಯೋಜಿಸುವಂಥ ವ್ಯಕ್ತಿಯನ್ನು ಮತದಾನ ಕೇಂದ್ರದಲ್ಲಿ ನಿಯೋಜಿಸಬಹುದು.

2. ಪ್ರತಿಯೊಬ್ಬ ಮತದಾರನು ಮತದಾನ ಕೇಂದ್ರವನ್ನು ಪ್ರವೇಶಿಸದಂತೆ ಪ್ರಿಸೈಡಿಂಗ್ ಅಧಿಕಾರಿ ಅಥವಾ ಈ ಬಗ್ಗೆ ಅವನಿಂದ ಅಧಿಕೃತವಾದ ಪೋಲಿಂಗ್ ಅಧಿಕಾರಿಯು ಮತದಾರರ ಪಟ್ಟಿಯಲ್ಲಿರುವ ಸುಸಂಗತ ನಮೂದುಗಳೊಂದಿಗೆ ಮತದಾರನ ಹೆಸರು ಮತ್ತು ಇತರ ವಿವರಗಳನ್ನು ಇವೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಆ ಮೇಲೆ ಕ್ರಮ ಸಂಖ್ಯೆಯ ಹೆಸರು ಮತ್ತು ಇತರ ವಿವರಗಳನ್ನು ಕೂಗತಕ್ಕದ್ದು.

3. ಮತ ಪತ್ರವನ್ನು ಪಡೆಯಲು ವ್ಯಕ್ತಿಯ ಹಕ್ಕನ್ನು ತೀರ್ಮಾನಿಸುವಲ್ಲಿ ಸಂದರ್ಭಾನುಸಾರ, ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿಯು ಅಂಥ ವ್ಯಕ್ತಿಯ ಗುರುತು ಅಂಥ ನಮೂದು ಸಂಬಂಧಪಡುವ ಮತದಾರನೊಂದಿಗೆ ಹೋಲುತ್ತದೆಂದು ಅವನಿಗೆ ಮನದಟ್ಟಾದರೆ ಮತದಾರರ ಪಟ್ಟಿಯಲ್ಲಿನ ನಮೂದಿನಲ್ಲಿರುವ ಕೇವಲ ಲಿಪಿಕ ಅಥವಾ ಮುದ್ರಣ ದೋಷಗಳನ್ನು ಕಡೆಗಣಿಸತಕ್ಕದ್ದು.

**ನಿಯಮ 41. ಚುನಾವಣಾ ಕರ್ತವ್ಯದ ಮೇಲಿರುವ ಲೋಕ ನೌಕರನಿಗೆ ಸೌಲಭ್ಯಗಳು:–**

1. ಚುನಾವಣಾ ಕರ್ತವ್ಯದ ಮೇಲಿರುವ ಚುನಾವಣೆಯಲ್ಲಿ ಅಂಚೆ ಮೂಲಕ ಮತ ನೀಡಲು ಇಚ್ಛಿಸುವ ಮತದಾರರು ಮತದಾನದ ದಿನಾಂಕಕ್ಕೆ ಮುಂಚೆ ಕನಿಷ್ಟ ಏಳು ದಿನಗಳ ಅಥವಾ ರಿಟರ್ನಿಂಗ್ ಅಧಿಕಾರಿಯು ಅವಕಾಶ ನೀಡಬಹುದಾದ ಅದಕ್ಕೂ ಕಡಿಮೆ ಅವಧಿಯಲ್ಲಿ ಪ್ರಪತ್ರ 19ರಲ್ಲಿ ರಿಟರ್ನಿಂಗ್ ಅಧಿಕಾರಿಗೆ ತಲುಪುವಂತೆ ಅರ್ಜಿಯನ್ನು ಕಳುಹಿಸತಕ್ಕದ್ದು ಮತ್ತು ರಿಟರ್ನಿಂಗ್ **ಅಧಿಕಾರಿಗೆ** ಅರ್ಜಿದಾರನು ತಾನು ಮತದಾರನಾಗಿರುವ ಮತದಾನ ಕೇಂದ್ರವಲ್ಲದ ಇತರೆ ಮತದಾನ ಕೇಂದ್ರದಲ್ಲಿ ಚುನಾವಣಾ ಕರ್ತವ್ಯದ ಮೇಲಿರುವನೆಂದು ಮನದಟ್ಟಾದರೆ ಅವನು ಆಂಥ ಚುನಾವಣಾ ಕ್ಷೇತ್ರದ ಅಂಚೆ ಮತಪತ್ರವನ್ನು ಅವನಿಗೆ ನೀಡತಕ್ಕದ್ದು.

2. ಅಂಥ ಮತದಾರನು, ಅವನು ಮತ ಕೊಡಲು ಹಕ್ಕುಳ್ಳ ಮತದಾನ ಕೇಂದ್ರವಲ್ಲದ ಬೇರೊಂದು ಮತದಾನ ಕೇಂದ್ರದಲ್ಲಿ ಚುನಾವಣಾ ಕರ್ತವ್ಯದ ಮೇಲಿರುವ ಪ್ರಿಸೈಡಿಂಗ್ ಅಧಿಕಾರಿ, ಪೋಲಿಂಗ್ ಅಧಿಕಾರಿ ಅಥವಾ ಇತರೆ ಲೋಕ ನೌಕರನಾಗಿದ್ದು, ಅವನು ಚುನಾವಣಾ ಕರ್ತವ್ಯದಲ್ಲಿರುವ ಮತದಾನ ಕೇಂದ್ರದಲ್ಲಿ ಮತ ಹಾಕಲು ಇಚ್ಛಿಸಿದಲ್ಲಿ ಅವನು ಮತದಾನದ ದಿನಾಂಕಕ್ಕೆ ಮುಂಚೆ ಕನಿಷ್ಟ ನಾಲ್ಕು ದಿನಗಳು ಅಥವಾ ರಿಟರ್ನಿಂಗ್ ಅಧಿಕಾರಿಯು ಅವಕಾಶ ನೀಡಬಹುದಾದಂಥ ಅದಕ್ಕೂ ಕಡಿಮೆಯೆ ಅವಧಿಯಲ್ಲಿ ಪ್ರಪತ್ರ 19ರಲ್ಲಿ ರಿಟರ್ನಿಂಗ್ ಅಧಿಕಾರಿಗೆ ತಲುಪುವಂತೆ ಅರ್ಜಿಯನ್ನು ಕಳಿಸತಕ್ಕದ್ದು ಮತ್ತು

ಅರ್ಜಿದಾರನು ಲೋಕ ನೌಕರನೆಂದು ಮತ್ತು ಚುನಾವಣಾ ಕರ್ತವ್ಯದ ಮೇಲಿರುವ ಮತದಾರನೆಂದು ರಿಟರ್ನಿಂಗ್ ಅಧಿಕಾರಿಗೆ ಮನದಟ್ಟಾದರೆ ಅವನು,

ಎ. **ಪ್ರಪತ್ರ–20**ರಲ್ಲಿ ಅರ್ಜಿದಾರನಿಗೆ ಚುನಾವಣಾ ಕರ್ತವ್ಯದ ಪ್ರಮಾಣ ಪತ್ರವನ್ನು ಕೊಡತಕ್ಕದ್ದು;

ಬಿ. ಅವನಿಗೆ ಚುನಾವಣಾ ಕರ್ತವ್ಯದ ಪ್ರಮಾಣ ಪತ್ರ ಕೊಡಲಾಗಿದೆ ಎಂಬುದನ್ನು ಸೂಚಿಸಲು ಮತದಾರರ ಪಟ್ಟಿಯಲ್ಲಿ ಗುರುತುಮಾಡಿದ ಪ್ರತಿಯನ್ನು ಅವನ ಹೆಸರಿನ ಎದುರಿಗೆ **ಚು.ಕ.ಪ್ರ.** ಎಂದು ಗುರುತು ಮಾಡತಕ್ಕದ್ದು, ಮತ್ತು

ಸಿ. ಅವನು ಮತ ನೀಡಲು ಅನ್ಯಥಾ ಹಕ್ಕು ಪಡೆದಿರುವಂಥ ಮತದಾನ ಕೇಂದ್ರದಲ್ಲಿ ಮತ ನೀಡಲು ಅವನಿಗೆ ಅವಕಾಶ ಕೊಟ್ಟಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

3. (ಎ) ಮತದಾನ ಕೇಂದ್ರದಲ್ಲಿ **ಪ್ರಪತ್ರ–20** ರಲ್ಲಿ ಚುನಾವಣಾ ಕರ್ತವ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಅವನಿಗೆ ಮತದಾನ ಪತ್ರವನ್ನು ಕೊಡುವಂತೆ ಕೇಳುವ ಯಾವನೇ ವ್ಯಕ್ತಿಗೆ ಅವನು ಮತ ನೀಡಲು ಹಕ್ಕು ಪಡೆದಿರುವ ಮತದಾನ ಕೇಂದ್ರವು ಬೇರೆಯಾಗಿದ್ದರೂ ಕೂಡ 47ನೇ ನಿಯಮದ ಉಪಬಂಧಗಳು ಅನ್ವಯವಾಗತಕದ್ದಲ್ಲ.

(ಬಿ) ಅಂಥ ಪ್ರಮಾಣ ಪತ್ರವನ್ನು ಹಾಜರುಪಡಿಸಿದ ಮೇಲೆ ಪ್ರಿಸೈಡಿಂಗ್ ಅಧಿಕಾರಿಯು

(1) ಅದನ್ನು ಹಾಜರುಪಡಿಸಿದ ವ್ಯಕ್ತಿಯ ಸಹಿಯನ್ನು ಅದರ ಮೇಲೆ ಪಡೆಯತಕ್ಕದ್ದು.

(2) ಪ್ರಮಾಣ ಪತ್ರದಲ್ಲಿ ನಮೂದಿಸಿದ ವ್ಯಕ್ತಿಯ ಹೆಸರು ಮತ್ತು ಮತದಾರರ ಪಟ್ಟಿಯ ಸಂಖ್ಯೆಯನ್ನು ಮತದಾರರ ಗುರುತಿಸಲಾದ ಪ್ರತಿಯ ಕೊನೆಯಲ್ಲಿ ನಮೂದಿಸುವಂತೆ ಮಾಡತಕ್ಕದ್ದು, ಮತ್ತು

(3) ಅವನಿಗೆ ಮತ ಪತ್ರವನ್ನು ನೀಡಿ ಒಬ್ಬ ಮತದಾರನಿಗೆ ಆ ಮತದಾನ ಕೇಂದ್ರದಲ್ಲಿ ಮತ ಚಲಾಯಿಸುವುದಕ್ಕೆ ಹಕ್ಕಿರುವ ರೀತಿಯಲ್ಲಿಯೇ ಮತ ಚಲಾಯಿಸಲು ಅನುಮತಿಸತಕ್ಕದ್ದು.

**48. ಮತದಾರನ ಹಕ್ಕು:–**

(1) ಯಾವುದೇ ಚುನಾವಣಾ ಕ್ಷೇತ್ರದ ಮತದಾರನ ಪಟ್ಟಿಯಲ್ಲಿ ತನ್ನ ಹೆಸರು ನಮೂದಾಗಿರದ ಯಾವನೇ ವ್ಯಕ್ತಿಯು ಆ ಚುನಾವಣಾ ಕ್ಷೇತ್ರದಲ್ಲಿ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ 16ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಅನರ್ಹತೆಗೆ ಒಳಪಟ್ಟಿರುವ ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಮತ **ನೀಡತಕ್ಕದ್ದಲ್ಲ.**

(3) ಯಾವನೇ ವ್ಯಕ್ತಿಯು ತನ್ನ ಹೆಸರು ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿರಬಹುದಾಗಿದ್ದರೂ ಅವನು ಒಂದಕ್ಕಿಂತ ಹೆಚ್ಚಿನ ಚುನಾವಣಾ ಕ್ಷೇತ್ರದಲ್ಲಿ

ಮತ ಚಲಾಯಿಸತಕ್ಕದ್ದಲ್ಲ. ಮತ್ತು ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರದಲ್ಲಿ ಮತ ನೀಡಿದ್ದರೆ, ಅಂಥ ಎಲ್ಲಾ ಕ್ಷೇತ್ರಗಳಲ್ಲಿನ ಅವನ ಮತಗಳು ಶೂನ್ಯವಾಗತಕ್ಕದ್ದು.

(4) ಯಾವನೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ ತನ್ನ ಹೆಸರು ಆ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ನೋಂದಾಯಿಸಿರಬಹುದಾಗಿದ್ದರೂ ಒಂದೇ ಚುನಾವಣಾ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮತ **ನೀಡತಕ್ಕದ್ದಲ್ಲ**. ಮತ್ತು ಅವನು ಹಾಗೆ ಮತ ನೀಡಿದರೆ ಆ ಚುನಾವಣಾ ಕ್ಷೇತ್ರದಲ್ಲಿ ಅವನ ಎಲ್ಲಾ ಮತಗಳು ಶೂನ್ಯವಾಗತಕ್ಕದ್ದು.

(5) ಯಾವನೇ ವ್ಯಕ್ತಿಯು ಕಾರಾವಾಸದ ಶಿಕ್ಷೆಯ ಮೇರೆಗಾಗಲೀ ಅಥವಾ ಅನ್ಯಥಾ ಅಗಲಿ ಜೈಲಿನಲ್ಲಿ ಬಂಧನದಲ್ಲಿದ್ದಂತೆ ಅಥವಾ ಪೋಲೀಸರ ಕಾನೂನುಬದ್ಧ ಅಭಿರಕ್ಷೆಯಲ್ಲಿದ್ದರೆ ಅವನು ಯಾವುದೇ ಚುನಾವಣೆಯಲ್ಲಿ ಮತ **ನೀಡತಕ್ಕದ್ದಲ್ಲ**.

ಪರಂತು, ಈ ಉಪನಿಯಮದಲ್ಲಿರುವುದಾವುದೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

**ನಿಯಮ 49 ಮತದಾನಕ್ಕಾಗಿ ಮತಪೆಟ್ಟಿಗೆಗಳ ಸಿದ್ಧತೆ:–**

(1) ಮತದಾನವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಪೆಟ್ಟಿಗೆಯು ಖಾಲಿಯಿದೆ ಮತ್ತು (7)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ಲೇಬಲುಗಳನ್ನು ಹೊಂದಿರುತ್ತದೆಯೆಂಬುದನ್ನು ಪೋಲಿಂಗ್ ಏಜೆಂಟರಿಗೆ ಪ್ರದರ್ಶಿಸತಕ್ಕದ್ದು.

(2) ಆ ಮೇಲೆ ಮತ ಪೆಟ್ಟಿಗೆಯನ್ನು ಮುಚ್ಚಿ ಮೊಹರು ಮಾಡಿ ಮತ್ತು ಭದ್ರಪಿಡಿಸಿ, ಪ್ರಿಸೈಡಿಂಗ್ **ಅಧಿಕಾರಿ** ಮತ್ತು ಮತದಾನ ಏಜೆಂಟರುಗಳಿಗೆ ಪೂರ್ಣ ಕಾಣುವಂತೆ ಇಡತಕ್ಕದ್ದು.

(3) ಮತಪೆಟ್ಟಿಗೆಯನ್ನು ಭದ್ರಪಡಿಸುವುದಕ್ಕಾಗಿ ಕಾಗದದ ಮೊಹರನ್ನು ಉಪಯೋಗಿಸಿದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಕಾಗದ ಮೊಹರಿನ ಮೇಲೆ ತನ್ನ ರುಜುವನ್ನು ಹಾಕತಕ್ಕದ್ದು ಮತ್ತು ಅದರ ಮೇಲೆ ಅಲ್ಲಿ ಹಾಜರಿರುವ ಮತ್ತು ಅವರ ಸಹಿಯನ್ನು ಹಾಕಲು ಇಚ್ಛಿಸುವಂಥ ಮತದಾನ ಏಜೆಂಟರ ಸಹಿಯನ್ನು ಪಡೆಯತಕ್ಕದ್ದು.

(4) ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು ಹಾಗೆ ರುಜು ಮಾಡಿದ ಕಾಗದದ ಮೊಹರನ್ನು ಮತಪೆಟ್ಟಿಗೆ ಯಲ್ಲಿ ಅದಕ್ಕಾಗಿ ಇರುವ ಸ್ಥಳದಲ್ಲಿ ಅಂಟಿಸತಕ್ಕುದು ಮತ್ತು ಆ ತರುವಾಯ ಆ ಪೆಟ್ಟಿಗೆಯನ್ನು

ಮತಪತ್ರಗಳನ್ನು ಅದರಲ್ಲಿ ಒಳಸೇರಿಸುವುದಕ್ಕಾಗಿ ಇರುವ ಸೀಳು ಜಾಗವು ತೆರೆದಿರುವಂಥ ರೀತಿಯಲ್ಲಿ ಭದ್ರಪಡಿಸತಕ್ಕುದು ಮತ್ತು ಮೊಹರು ಮಾಡತಕ್ಕದ್ದು.

(5) ಮತಪೆಟ್ಟಿಗೆಯನ್ನು ಭದ್ರಪಡಿಸುವುದಕ್ಕಾಗಿ ಉಪಯೋಗಿಸಿದ ಮೊಹರುಗಳನ್ನು ಆ ಪೆಟ್ಟಿಗೆಯನ್ನು ಮುಚ್ಚಿದ ತರುವಾಯ ಆ ಮೊಹರನ್ನು ಒಡೆಯದೆ ಅದನ್ನು ತೆರೆಯಲು ಸಾಧ್ಯವಾಗದಂಥ ರೀತಿಯಲ್ಲಿ **ಅಂಟಿಸತಕ್ಕದ್ದು.**

(6) ಮತಪೆಟ್ಟಿಗೆಗಳನ್ನು ಭದ್ರಪಡಿಸುವುದಕ್ಕಾಗಿ ಕಾಗದದ ಮೊಹರುಗಳನ್ನು ಉಪಯೋಗಿಸುವುದು ಅವಶ್ಯವಿಲ್ಲದಿರುವುದರಿಂದ ಪ್ರಿಸೈಡಿಂಗ್ ಅಧಿಕಾರಿಯು ಆ ಮತಪತ್ರಗಳನ್ನು ಒಳಸೇರಿಸುವುದಕ್ಕಾಗಿ ಇರುವ ಸೀಳು ಜಾಗವು ತೆಗೆದಿರುವಂಥ ರೀತಿಯಲ್ಲಿ ಮತಪೆಟ್ಟಿಗೆಗಳನ್ನು ಭದ್ರಪಡಿಸತಕ್ಕದ್ದು ಮತ್ತು ಮೊಹರು ಮಾಡತಕ್ಕದ್ದು ಮತ್ತು ಹಾಜರಿರುವ ಮತದಾನ ಏಜೆಂಟರಿಗೆ ಅವರು ಹಾಗೆ ಇಚ್ಛಿಸಿದರೆ ಅವರ ಮೊಹರುಗಳನ್ನು ಅಂಟಿಸಲು ಅವಕಾಶವನ್ನು ಕೊಡತಕ್ಕದ್ದು.

(7) ಮತದಾನ ಕೇಂದ್ರದಲ್ಲಿ ಉಪಯೋಗಿಸಿದ ಪ್ರತಿಯೊಂದು ಮತಪೆಟ್ಟಿಗೆಯ ಒಳಗೆ ಮತ್ತು ಹೊರಗೆ ಎರಡು ಕಡೆಯಲ್ಲಿ–

(ಎ) ಚುನಾವಣಾ ಕ್ಷೇತ್ರದ ಕ್ರಮ ಸಂಖ್ಯೆ ಯಾವುದಾದರೂ ಇದ್ದರೆ ಅದು ಮತ್ತು ಹೆಸರು,

(ಬಿ) ಮತದಾನ ಕೇಂದ್ರದ ಕ್ರಮ ಸಂಖ್ಯೆ ಮತ್ತು ಹೆಸರು

(ಸಿ) ಮತಪೆಟ್ಟಿಗೆಯ ಕ್ರಮಸಂಖ್ಯೆ (ಮತದಾನ ಕೊನೆಯಲ್ಲಿ ಮತಪೆಟ್ಟಿಗೆಯ ಹೊರಗಡೆ ಮಾತ್ರ ಲೇಬಲ್ಲಿನ ಮೇಲೆ ಭರ್ತಿ ಮಾಡಬೇಕು); ಮತ್ತು

(ಡಿ) ಮತದಾನದ ದಿನಾಂಕ, ಇವುಗಳನ್ನು ಗುರುತು ಮಾಡಿದ ಲೇಬಲ್ಲುಗಳನ್ನು ಹೊಂದಿರತಕ್ಕದ್ದು.

**ನಿಯಮ 50 ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿ:–**

ಮತದಾನವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಹಾಜರಿರುವ ಮತದಾನ ಏಜೆಂಟರು ಮತ್ತು ಇತರರಿಗೆ ಮತದಾನದಲ್ಲಿ ಉಪಯೋಗಿಸಬೇಕಾದ ಮತ್ತು ರಿಟರ್ನಿಂಗ್ ಅಧಿಕಾರಿಯು ಒದಗಿಸಿದ ಮತದಾನದ ಪಟ್ಟಿಯ ಗುರುತು ಮಾಡಿದ ಪ್ರತಿಯನ್ನು ಪರಿಶೀಲಿಸಿವುದಕ್ಕೆ ಅವಕಾಶ ಕೊಡತಕ್ಕದ್ದು.

**ನಿಯಮ 51 ಗುರುತನ್ನು ಪ್ರಶ್ನಿಸುವುದು:–**

(1) ಯಾವನೇ ಮತದಾನ ಏಜೆಂಟನು ಒಬ್ಬ ನಿರ್ದಿಷ್ಟ ಮತದಾರನೆಂಬುದಾಗಿ ಕ್ಲೇಮು ಮಾಡುವ ವ್ಯಕ್ತಿಯ ಗುರುತನ್ನು ಅಂಥ ಪ್ರತಿಯೊಂದು ಪ್ರಶ್ನಿಸುವಿಕೆಗಾಗಿ ಪ್ರಿಸೈಡಿಂಗ್ ಅಧಿಕಾರಿಯಲ್ಲಿ ನಗದಾಗಿ ಎರಡು ರೂಪಾಯಿಗಳನ್ನು ಮೊದಲು ಠೇವಣಿಯಿಡುವ ಮೂಲಕ ಪ್ರಶ್ನಿಸಬಹುದು.

(2) ಅಂಥ ಠೇವಣಿಯನ್ನು ಮಾಡಿದ ಮೇಲೆ ಪ್ರಿಸೈಡಿಂಗ್ ಅಧಿಕಾರಿಯು,

(ಎ) ಪ್ರಶ್ನಿತವಾದ ವ್ಯಕ್ತಿಯನ್ನು ಪರರೂಪಧಾರಣೆಗಾಗಿನ ದಂಡದ ಬಗ್ಗೆ ಎಚ್ಚರಿಕೆ ನೀಡತಕ್ಕದ್ದು.

(ಬಿ) ಮತದಾರರ ಪಟ್ಟಿಯಲ್ಲಿನ ಸಂಬಂಧಪಟ್ಟ ನಮೂದನೆಯನ್ನು ಪೂರ್ಣವಾಗಿ ಓದತಕ್ಕದ್ದು ಮತ್ತು ಅವನನ್ನು ಆ ನಮೂದಿನಲ್ಲಿ ಉಲ್ಲೇಖಿಸಿದ ವ್ಯಕ್ತಿ ಅವನೇ ಅಲ್ಲವೇ **ಎಂಬ** ಬಗ್ಗೆ ಕೇಳತಕ್ಕದ್ದು.

(ಸಿ) ಪ್ರಪತ್ರ 25 ರಲ್ಲಿ ಆಕ್ಷೇಪಿತ ಮತಗಳ ಪಟ್ಟಿಯಲ್ಲಿ ಅವನ ಹೆಸರು ಮತ್ತು ವಿಳಾಸವನ್ನು ನಮೂದಿಸತಕ್ಕದ್ದು.

(ಡಿ) ಸದರಿ ಪಟ್ಟಿಯಲ್ಲಿ ಅವರ ರುಜು ಅಥವಾ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಲು ಅವನನ್ನು ಅಗತ್ಯಪಡಿಸತಕ್ಕದ್ದು.

(3) ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು ಆಕ್ಷೇಪಣೆಯ ಬಗ್ಗೆ ಸಂಕ್ಷಿಪ್ತ ವಿಚಾರಣೆಯನ್ನು **ನಡೆಸತಕ್ಕದ್ದು** ಮತ್ತು ಆ ಉದ್ದೇಶಕ್ಕಾಗಿ

(ಎ) ಪ್ರಶ್ನಿಸುವವನನ್ನು ಆಕ್ಷೇಪಣೆಯ ಬಗ್ಗೆ ರುಜುವಾತು ಪಡಿಸಲು ಸಾಕ್ಷ್ಯವನ್ನು ಒದಗಿಸಲು ಮತ್ತು ಪ್ರಶ್ನಿತ ವ್ಯಕ್ತಿಯನ್ನು ಅವನ ಗುರುತನ್ನು ರುಜುವಾತುಪಡಿಸಲು ಸಾಕ್ಷ್ಯವನ್ನು ಒದಗಿಸಲು ಅಗತ್ಯಪಡಿಸಬಹುದು.

(ಬಿ) ಪ್ರಶ್ನಿತ ವ್ಯಕ್ತಿಗೆ ಅವನ ಗುರುತನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಯಾವುದೇ ಪ್ರಶ್ನೆಯನ್ನು ಕೇಳಬಹುದು ಮತ್ತು ಅವುಗಳಿಗೆ ಪ್ರಮಾಣದ ಮೇಲೆ ಉತ್ತರಿಸಲು ಅವನನ್ನು ಅಗತ್ಯಪಡಿಸಬಹುದು; ಮತ್ತು

(ಸಿ) ಪ್ರಶ್ನಿತ ವ್ಯಕ್ತಿಯಿಂದ ಪ್ರಮಾಣವಚನವನ್ನು ಮಾಡಿಸಬಹುದು ಮತ್ತು **ಸಾಕ್ಷ್ಯವನ್ನು** ಕೊಡಲು ಮುಂದೆ ಬರುವ ಇತರ ಯಾವುದೇ ವ್ಯಕ್ತಿಯಿಂದ ಪ್ರಮಾಣವಚನವನ್ನು ಮಾಡಿಸಬಹುದು.

(4) ವಿಚಾರಣೆಯನ್ನು ಮಾಡಿದ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು ಆಕ್ಷೇಪಣೆಯನ್ನು ಸ್ಥಾಪಿಸಿಲ್ಲವೆಂದು ಪರ್ಯಾಲೋಚಿಸಿದರೆ ಪ್ರಶ್ನಿತ ವ್ಯಕ್ತಿಗೆ ಮತ ಚಲಾಯಿಸಲು ಅವಕಾಶ ನೀಡತಕ್ಕದ್ದು ಮತ್ತು ಆಕ್ಷೇಪಣೆಯನ್ನು ಸ್ಥಾಪಿಸಲಾಗಿದೆಯೆಂದು ಅವನು ಪರ್ಯಾಲೋಚಿಸಿದರೆ ಪ್ರಶ್ನಿತ ವ್ಯಕ್ತಿಯನ್ನು ಮತ ಚಲಾಯಿಸಲು ಅನರ್ಹಗೊಳಿಸತಕ್ಕದ್ದು.

(5) ಪ್ರಿಸೈಡಿಂಗ್ ಅಧಿಕಾರಿಯು ಆಕ್ಷೇಪಣೆಯು ಕ್ಷುಲ್ಲಕವಾದದ್ದು ಅಥವಾ ಅದು ಸದ್ಭಾವನೆಯಿಂದ ಕೂಡಿಲ್ಲವೆಂದು ಅಭಿಪ್ರಾಯಪಟ್ಟರೆ, ಅವನು (1)ನೇ ಉಪ ನಿಯಮದ ಮೇರೆಗೆ ಮಾಡಿದ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು ಅವನು ನಿರ್ದೇಶಿಸತಕ್ಕದ್ದು ಮತ್ತು ಯಾವುದೇ ಇತರೆ ಸಂದರ್ಭದಲ್ಲಿ ಆ ವಿಚಾರಣೆಯು ಮುಕ್ತಾಯವಾದ ಮೇಲೆ ಪ್ರಶ್ನಿಸುವವನಿಗೆ ಅದನ್ನು ಹಿಂದಿರುಗಿಸತಕ್ಕದ್ದು.

**52. ಪರ ರೂಪ ಧಾರಣೆ ವಿರುದ್ಧ ರಕ್ಷಣೆಗಳು:-**

(1) ಯಾರ ಗುರುತಿನ ಬಗ್ಗೆ ಸಂದರ್ಭಾನುಸಾರ ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿಗಳು ಮನದಟ್ಟು ಮಾಡಿಕೊಂಡಿರುವುದೋ ಆ ಪ್ರತಿಯೊಬ್ಬ ಮತದಾರರನ್ನು ಅವನ ಎಡತೋರು ಬೆರಳನ್ನು ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿಯು ಪರಿಶೀಲಿಸಲು ಮತ್ತು ಅದರ ಮೇಲೆ ಅಳಿಸಲಾಗದ ಮಸಿಯನ್ನು ಸಾಧ್ಯವಾದಷ್ಟು ಉಗುರಿನ ಬುಡದಲ್ಲಿ ಕೆಳಗೆ ಚರ್ಮ ಮತ್ತು ಉಗುರಿನ ಬುಡದ ನಡುವಣ ಅಂಚಿನ ಮೇಲೆ ಮಸಿಯು ಹರಡಿಕೊಳ್ಳುವ ಹಾಗೆ ಹಾಕಲು ಸಹ ಅವಕಾಶಕೊಡತಕ್ಕದ್ದು.

(2) ಯಾವನೇ ಮತದಾರನು (1)ನೇ ಉಪ ನಿಯಮಾನುಸಾರವಾಗಿ ತನ್ನ ಎಡತೋರು ಬೆರಳನ್ನು ಪರಿಶೀಲಿಸುವುದಕ್ಕೆ ಅಥವಾ ಗುರುತು ಮಾಡುವುದಕ್ಕೆ ಅವಕಾಶ ಕೊಡಲು ನಿರಾಕರಿಸಿದರೆ ಅಥವಾ ಅವನ ಎಡತೋರು ಬೆರಳಿನ ಮೇಲೆ ಈಗಾಗಲೇ ಅಂಥ ಗುರುತನ್ನು ಹೊಂದಿದ್ದರೆ ಅಥವಾ ಮಸಿಗುರುತನ್ನು ತೊಡೆದು ಹಾಕುವ ದೃಷ್ಟಿಯಿಂದ ಯಾವುದೇ ಕಾರ್ಯವನ್ನು ಮಾಡಿದರೆ ಅವನಿಗೆ ಯಾವುದೇ ಮತಪತ್ರಗಳನ್ನು ಒಗದಿಸತಕ್ಕದ್ದಲ್ಲ ಅಥವಾ ಮತದಾನ ಮಾಡಲು ಅವಕಾಶ ನೀಡತಕ್ಕದ್ದಲ್ಲ.

(3) ಈ ನಿಯಮದಲ್ಲಿ ಮತದಾರನ ಎಡತೋರು ಬೆರಳಿಗೆ ಮಾಡಿದ ಯಾವುದೇ ಉಲ್ಲೇಖವನ್ನು ಮತದಾರನ ಎಡತೋರು ಬೆರಳು ಇಲ್ಲದಿರುವ ಸಂದರ್ಭದಲ್ಲಿ ಅವನ ಎಡ ಅಂಗೈಯ ಯಾವುದೇ ಇತರೆ ಬೆರಳಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು ಮತ್ತು ಅವನ ಎಡಗೈನ ಎಲ್ಲ ಬೆರಳುಗಳು ಇಲ್ಲದಿರುವ ಸಂದರ್ಭದಲ್ಲಿ ಅದನ್ನು ಅವನ ಬಲಗೈನ ತೋರು ಬೆರಳು ಅಥವಾ ಯಾವುದೇ ಇತರ ಬೆರಳುಗಳಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು ಮತ್ತು ಅದನ್ನು ಅವನ ಎರಡು ಕೈಗಳ ಎಲ್ಲ ಬೆರಳುಗಳು ಇಲ್ಲದಿರುವ ಸಂದರ್ಭದಲ್ಲಿ ಅವನು ಹೊಂದಿರುವ ಎಡ ಅಥವಾ ಬಲ ತೋಳಿನ ತುದಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**ನಿಯಮ 53 ಮತದಾರರಿಗೆ ಮತಪತ್ರಗಳನ್ನು ಕೊಡುವುದು:-**

(1) ಮತದಾರನಿಗೆ ಅದನ್ನು ಕೊಡುವುದಕ್ಕೆ ಮುಂಚೆ ಪ್ರತಿಯೊಂದು ಮತಪತ್ರ ಅದಕ್ಕೆ ಲಗತ್ತಾದ ಪಕ್ಕಪ್ರತಿಗೆ ಹಿಂಭಾಗದಲ್ಲಿ ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ವಿಭಿನ್ನತಾ ಗುರುತುಗಳನ್ನು ಮುದ್ರೆ ಹಾಕತಕ್ಕದ್ದು ಮತ್ತು ಪ್ರತಿಯೊಂದು ಮತಪತ್ರಕ್ಕೆ ಅದನ್ನು ಕೊಡುವುದಕ್ಕೆ ಮುಂಚೆ ಅದರ ಹಿಂಭಾಗದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಪೂರ್ಣ ರುಜು ಮಾಡತಕ್ಕದ್ದು.

(2) ಮತದಾರನಿಗೆ ಮತಪತ್ರವನ್ನು ಕೊಡುವ ಕಾಲದಲ್ಲಿ ಪೋಲಿಂಗ್ ಅಧಿಕಾರಿಯು :-

(ಎ) ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯಲ್ಲಿ ನಮೂದಿಸಿರುವಂತೆ ಮತದಾರನ ಮತದಾರ ಪಟ್ಟಿಯ ಸಂಖ್ಯೆಯನ್ನು ಅದರ ಪಕ್ಕ ಪ್ರತಿಯ ಮೇಲೆ ದಾಖಲು **ಮಾಡತಕ್ಕದ್ದು**. ಮತ್ತು ಮತದಾರನ ರುಜು ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆಯತಕ್ಕದ್ದು.

(ಬಿ) ಆ ಮತದಾರನ ರುಜು ಅಥವಾ ಹೆಬ್ಬೆಟ್ಟಿನ ಗುರುತನ್ನು ಸದರಿ ಪಕ್ಕ ಪ್ರತಿಯ ಮೇಲೆ ಪಡೆದುಕೊಳ್ಳತಕ್ಕದ್ದು; ಮತ್ತು

(ಸಿ) ಆ ಮತದಾರನಿಗೆ ಕೊಟ್ಟ ಮತಪತ್ರದ ಕ್ರಮ ಸಂಖ್ಯೆಯನ್ನು ಅದರಲ್ಲಿ ದಾಖಲು ಮಾಡದೆ ಅವನಿಗೆ ಮತ ಪತ್ರವನ್ನು ಕೊಡಲಾಗಿದೆಯೆಂಬುದನ್ನು ತೋರಿಸಲು ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯಲ್ಲಿ ಆ ಮತದಾರನ ಹೆಸರಿಗೆ ಗುರುತು ಮಾಡತಕ್ಕದ್ದು.

ಪರಂತು ಮತದಾರನಿಗೆ ಅವನು ಪಕ್ಕಪ್ರತಿಯ ಮೇಲೆ ತನ್ನ ರುಜು ಮಾಡಿದ ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕದ ಹೊರತು ಮತಪತ್ರವನ್ನು ಕೊಡತಕ್ಕದ್ದಲ್ಲ.

(3) ಮತದಾರನು ಪಕ್ಕದ ಪ್ರತಿಯ ಮೇಲೆ ಮಾಡಿದ ಹೆಬ್ಬೆಟ್ಟಿನ ಗುರುತನ್ನು ಯಾವನೇ ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿ ಅಥವಾ ಯಾವನೇ ಇತರ ಅಧಿಕಾರಿಯು ಅಧಿಪ್ರಮಾಣಿಸುವುದು ಅವಶ್ಯಕವಾಗಿರತಕ್ಕದ್ದಲ್ಲ.

(4) ಮತದಾನ ಕೇಂದ್ರದಲ್ಲಿ ಯಾವನೇ ವ್ಯಕ್ತಿಯು, ನಿರ್ದಿಷ್ಟ ಮತದಾರರಿಗೆ ಕೊಟ್ಟ ಮತಪತ್ರಗಳ ಕ್ರಮಸಂಖ್ಯೆಗಳನ್ನು ಬರೆದುಕೊಳ್ಳತಕ್ಕದ್ದಲ್ಲ.

**ನಿಯಮ 54 ಮತದಾನ ಕೇಂದ್ರದೊಳಗೆ ಮತದಾರರು ಮತದಾನದ ಬಗ್ಗೆ ರಹಸ್ಯವನ್ನು ಕಾಪಾಡುವುದು ಮತ್ತು ಮತದಾನ ಪ್ರಕ್ರಿಯೆ:–**

(1) 53ನೇ ನಿಯಮದ ಮೇರೆಗೆ ಅಥವಾ ಈ ನಿಯಮಗಳ ಯಾವುದೇ ಇತರ ಉಪ ಬಂಧದ ಮೇರೆಗೆ ಮತಪತ್ರವನ್ನು ಕೊಡಲಾದ ಪ್ರತಿಯೊಬ್ಬ ಮತದಾರನು ಮತದಾನ ಕೇಂದ್ರದೊಳಗೆ ಮತದಾನ ಮಾಡಿದ ಬಗ್ಗೆ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಇದರಲ್ಲಿ ಇನ್ನು ಮುಂದೆ ವಿಧಿಸಲಾದ ಮತದಾರರ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(2) ಮತಪತ್ರವನ್ನು ಸ್ವೀಕರಿಸಿದ ಮೇಲೆ ಮತದಾರನು ತಕ್ಷಣ;–

(ಎ) ಒಂದು ಮತದಾನ ಅಂಕಣಕ್ಕೆ ಹೋಗತಕ್ಕದ್ದು.

(ಬಿ) ಅಲ್ಲಿ ಅವನು ಯಾರಿಗೆ ಮತ ನೀಡಲು ಉದ್ದೇಶಿಸಿರುವನೋ ಆ ಅಭ್ಯರ್ಥಿಯ ಚಿನ್ಹೆಯ ಮೇಲೆ ಅಥವಾ ಅದರ ಸಮೀಪದಲ್ಲಿ ಆ ಉದ್ದೇಶಕ್ಕಾಗಿಯೇ ಒದಗಿಸಿದ ಉಪಕರಣದಿಂದ ಆ ಮತಪತ್ರದ ಮೇಲೆ ಗುರುತು ಮಾಡತಕ್ಕದ್ದು.

(ಸಿ) ತಾನು ಹಾಕಿದ ಮತವನ್ನು ಮುಚ್ಚಿಡುವ ಹಾಗೆ ಮತಪತ್ರವನ್ನು ಮಡಿಚತಕ್ಕದ್ದು.

(ಡಿ) ಅಗತ್ಯಪಡಿಸಿದರೆ ಪ್ರಿಸ್ಯೆಡಿಂಗ್ ಅಧಿಕಾರಿಗೆ ಮತ ಪತ್ರದ ಮೇಲಿನ ವಿಭಿನ್ನತಾ ಗುರುತನ್ನು ತೋರಿಸತಕ್ಕದ್ದು.

(ಇ) ಮಡಿಚಿದ ಮತಪತ್ರವನ್ನು ಮತಪೆಟ್ಟಿಗೆ ಯೊಳಗೆ ಹಾಕತಕ್ಕದ್ದು, ಮತ್ತು

(ಎಫ್) ಮತದಾನ ಕೇಂದ್ರದಿಂದ ನಿರ್ಗಮಿಸತಕ್ಕದ್ದು.

(3) ಪ್ರತಿಯೊಬ್ಬ ಮತದಾರನು ಅನುಚಿತ ವಿಳಂಬವಿಲ್ಲದೆ ಮತದಾನ ಮಾಡತಕ್ಕದ್ದು.

(4) ಯಾವನೇ ಮತದಾರನನ್ನು ಮತದಾನ ಅಂಕಣದೊಳಗೆ ಇನ್ನೊಬ್ಬ ಮತದಾರನು ಅದರೊಳಗಿರುವಾಗ ಪ್ರವೇಶಿಸಲು ಅವಕಾಶ ಕೊಡತಕ್ಕದ್ದಲ್ಲ .

(5) ಮತಪತ್ರವನ್ನು ಕೊಡಲಾಗಿರುವ ಮತದಾರನು(2)ನೇ ಉಪ ನಿಯಮದಲ್ಲಿ ವಿಧಿಸಲಾದ ಮತದಾನ ಪ್ರಕ್ರಿಯೆಯನ್ನು ಅನುಸರಿಸುವುದಕ್ಕಾಗಿ ಪ್ರಿಸ್ಯೆಡಿಂಗ್ ಅಧಿಕಾರಿಯು ನೀಡಿದ ಎಚ್ಚರಿಕೆ ತರುವಾಯ ಅವನಿಗೆ ಕೊಟ್ಟ ಮತಪತ್ರವನ್ನು ನಿರಾಕರಿಸಿದರೆ, ಅವನು ಅದರ ಮೇಲೆ ಅವನ ಮತವನ್ನು ದಾಖಲು ಮಾಡಿರಲಿ ಅಥವಾ ಇಲ್ಲದಿರಲಿ ಅದನ್ನು ಅವನಿಂದ ಪ್ರಿಸ್ಯೆಡಿಂಗ್ ಅಧಿಕಾರಿ ಅಥವಾ ಪ್ರಿಸ್ಯೆಡಿಂಗ್ ಅಧಿಕಾರಿಯ ನಿರ್ದೇಶನದ ಮೇರೆಗೆ ಪೋಲಿಂಗ್ **ಅಧಿಕಾರಿಯು** ಹಿಂದಕ್ಕೆ ಪಡೆಯತಕ್ಕದ್ದು.

(6) ಮತಪತ್ರಗಳನ್ನು ಹಿಂದಕ್ಕೆ ಪಡೆದುಕೊಂಡ ತರುವಾಯ ಪ್ರಿಸ್ಯೆಡಿಂಗ್ ಅಧಿಕಾರಿಯು ಅದರ ಹಿಂಭಾಗದಲ್ಲಿ 'ರದ್ದುಪಡಿಸಲಾಗಿದೆ, ಮತದಾನ ಪ್ರಕ್ರಿಯೆಯನ್ನು ಉಲ್ಲಂಘಿಸಲಾಗಿದೆ' ಎಂಬ ಪದಗಳನ್ನು ಬರೆದು, ಈ ಪದಗಳ ಕೆಳಗೆ ತನ್ನ ರುಜುವನ್ನು ಹಾಕತಕ್ಕದ್ದು.

(7) **"ರದ್ದುಪಡಿಸಲಾಗಿದೆ,** ಮತದಾನ ಪ್ರಕ್ರಿಯೆಯನ್ನು ಉಲ್ಲಂಘಿಸಲಾಗಿದೆ" ಎಂಬ ಪದಗಳನ್ನು ಬರೆದ ಎಲ್ಲ ಮತಪತ್ರಗಳನ್ನು ಪ್ರತ್ಯೇಕ ಲಕೋಟೆಯಲ್ಲಿಡತಕ್ಕದ್ದು, ಮತ್ತು ಅದು ಅದರ ಮೇಲೆ 'ಮತಪತ್ರಗಳು, ಮತದಾನ ಪ್ರಕ್ರಿಯೆಯನ್ನು **ಉಲ್ಲಂಘಿಸಲಾಗಿದೆ'** ಎಂಬ ಪದಗಳನ್ನು ಹೊಂದಿರತಕ್ಕದ್ದು.

(8) (5)ನೇ ಉಪ ನಿಯಮದ ಮೇರೆಗೆ ಮತಪತ್ರವನ್ನು ಯಾರಿಂದ ಹಿಂದಕ್ಕೆ ಪಡೆಯಲಾಗಿದೆಯೋ ಆ ಮತದಾರನು ಗುರಿಯಾಗಬಹುದಾದಂಥ ಯಾವುದೇ ಇತರ ದಂಡನೆಗೆ ಬಾಧಕವಾಗದಂತೆ ಅಂಥ ಮತಪತ್ರದ ಮೇಲೆ ದಾಖಲ್ಮಾಡಿದ ಮತವು, ಯಾವುದಾದರೂ ಇದ್ದರೆ, ಅದನ್ನು ಎಣಿಕೆ ಮಾಡತಕ್ಕದ್ದಲ್ಲ.

**ನಿಯಮ 55 ಕುರುಡ ಅಥವಾ ದುರ್ಬಲ ಮತದಾರರ ಮತಗಳನ್ನು ದಾಖಲು ಮಾಡುವುದು:–**

(1) ಕುರುಡುತನ ಅಥವಾ ಇತರ ದೈಹಿಕ ದುರ್ಬಲತೆಯಿಂದಾಗಿ ಮತದಾರನು ಮತ ಪತ್ರದ ಮೇಲಿನ ಚಿನ್ಹೆಗಳನ್ನು ಗುರುತಿಸಲು ಅಥವಾ ಸಹಾಯವಿಲ್ಲದೆ ಅದರ ಮೇಲೆ ಗುರುತು ಮಾಡಲು ಅಸಮರ್ಥನೆಂದು ಪ್ರಿಸ್ಯೆಡಿಂಗ್ ಅಧಿಕಾರಿಗೆ ಮತದಟ್ಟಾದರೆ ಪ್ರಿಸ್ಯೆಡಿಂಗ್ ಅಧಿಕಾರಿಯು ಅವನ ಪರವಾಗಿ ಮತ್ತು ಅವನ ಇಚ್ಛೆಗೆ ಅನುಸಾರವಾಗಿ ಮತ ಪತ್ರದ ಮೇಲೆ ಮತವನ್ನು ದಾಖಲು ಮಾಡುವುದಕ್ಕಾಗಿ ಮತ್ತು ಅವಶ್ಯವಾದರೆ ಮತವನ್ನು ಮುಚ್ಚುವ ಹಾಗೆ ಮತಪತ್ರವನ್ನು ಮಡಿಚುವುದಕ್ಕಾಗಿ ಮತ್ತು ಅದನ್ನು ಮತಪೆಟ್ಟಿಗೆಯೊಳಗೆ

ಹಾಕುವುದಕ್ಕಾಗಿ ಮತದಾನ ಅಂಕಣಕ್ಕೆ ಹದಿನೆಂಟು ವರ್ಷಗಳ ವಯಸ್ಸಿಗೆ ಕಡಿಮೆಯಿಲ್ಲದ ಒಬ್ಬ ಜೊತೆಗಾರರನ್ನು ಅವನೊಂದಿಗೆ ಕರೆದುಕೊಂಡು ಹೋಗಲು ಅನುಮತಿ ನೀಡತಕ್ಕದ್ದು.

ಪರಂತು ಯಾವನೇ ವ್ಯಕ್ತಿಗೆ ಅದೇ ದಿನದಂದು ಯಾವುದೇ ಮತದಾನ ಕೇಂದ್ರದಲ್ಲಿ ಒಬ್ಬ ಮತದಾರನಿಗಿಂತ ಹೆಚ್ಚಿನವರಿಗೆ ಜೊತೆಗಾರನಾಗಿ ಕಾರ್ಯನಿರ್ವಹಿಸಲು ಅನುಮತಿ ನೀಡತಕ್ಕದ್ದಲ್ಲ.

ಪರಂತು ಈ ನಿಯಮದ ಮೇರೆಗೆ ಯಾವುದೇ ದಿನದಂದು ಮತದಾರನ ಜೊತೆಗಾರನಾಗಿ ಕಾರ್ಯ ನಿರ್ವಹಿಸಲು ಯಾವನೇ ವ್ಯಕ್ತಿಗೆ ಅನುಮತಿ ನೀಡುವುದಕ್ಕೆ ಮುಂಚೆ ಆ ವ್ಯಕ್ತಿಯನ್ನು ಮತದಾರನ ಪರವಾಗಿ ಅವನು ದಾಖಲು ಮಾಡಿದ ಮತವನ್ನು ರಹಸ್ಯವಾಗಿ ಇಡುತ್ತೇನೆಂದು ಮತ್ತು ಆ ದಿನ ಯಾವುದೇ ಮತದಾನ ಕೇಂದ್ರದಲ್ಲಿ ಯಾವನೇ ಇತರ ಮತದಾರನ ಜೊತೆಗಾರನಾಗಿ ಈಗಾಗಲೇ ಅವನು ಕಾರ್ಯ ನಿರ್ವಹಿಸಿಲ್ಲ ಎಂದು ಘೋಷಿಸಲು ಅಗತ್ಯಪಡಿಸತಕ್ಕದ್ದು.

(2) ಪ್ರಿಸೈಡಿಂಗ್ ಅಧಿಕಾರಿಯು **ಪ್ರಪತ್ರ–26** ರಲ್ಲಿ ಈ ನಿಯಮದಡಿಯಲ್ಲಿ ಎಲ್ಲ ಪ್ರಕರಣಗಳ ದಾಖಲೆಯಿಡತಕ್ಕದ್ದು.

**ನಿಯಮ 56 ನೀಡಿದ ಮತಗಳು:–**

(1) ತಾನೇ ವಿಶಿಷ್ಟ ಮತದಾರ ಆಗಿರುವೆನೆಂದು ಹೇಳಿಕೊಳ್ಳುವ ವ್ಯಕ್ತಿಯು ಅಂಥ ಮತದಾರನೆಂದು ಈಗಾಗಲೇ ಇನ್ನೊಬ್ಬ ವ್ಯಕ್ತಿಯು ಮತ ನೀಡಿದ ತರುವಾಯ ಮತಪತ್ರಕ್ಕಾಗಿ ಕೇಳಿಕೊಂಡರೆ ಅವನು ಪ್ರಿಸೈಡಿಂಗ್ ಅಧಿಕಾರಿಯು ಅವರು ಗುರುತಿನ ಬಗ್ಗೆ ಕೇಳಬಹುದಾದಂಥ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟ ಮೇಲೆ ಈ ನಿಯಮದ ಕೆಳಕಂಡ ಉಪ ಬಂಧಗಳಿಗೊಳಪಟ್ಟು ಯಾವನೇ ಇತರ ಮತದಾರನ ರೀತಿಯಲ್ಲಿ ಮತಪತ್ರದ ಮೇಲೆ (ಇದರಲ್ಲಿ ಇನ್ನು ಮುಂದೆ ಈ ನಿಯಮಗಳಲ್ಲಿ "ನೀಡಿದ ಮತಪತ್ರ" ಎಂದು ಉಲ್ಲೇಖಿಸಲಾಗಿದೆ) ಗುರುತು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

(2) ಅಂಥ ಪ್ರತಿಯೊಬ್ಬ ವ್ಯಕ್ತಿಯು ನೀಡಿದ ಮತಪತ್ರವನ್ನು ಅವನಿಗೆ ಒದಗಿಸುವುದಕ್ಕೆ ಮುಂಚೆ ಪ್ರಪತ್ರ 27 ರಲ್ಲಿನ ಪಟ್ಟಿಯಲ್ಲಿ ಅವನಿಗೆ ಸಂಬಂಧಪಟ್ಟ ನಮೂದಿನ ಎದುರು ಆತನ ಹೆಸರಿನ ರುಜು ಮಾಡತಕ್ಕದ್ದು.

(3) ನೀಡಿದ ಮತಪತ್ರವು

(ಎ) ಅಂಥ ನೀಡಿದ ಮತಪತ್ರವು ಆ ಮತದಾನ ಕೇಂದ್ರದಲ್ಲಿ ಉಪಯೋಗಿಸುವುದಕ್ಕಾಗಿ ಕೊಟ್ಟ ಮತಪತ್ರಗಳ ಕಟ್ಟಿನಲ್ಲಿ ಕ್ರಮವಾಗಿ ಕೊನೆಯದಾಗಿರುವುದನ್ನು ಹೊರತುಪಡಿಸಿ ಮತ್ತು

(ಬಿ) ಅಂಥ ನೀಡಿದ ಮತಪತ್ರ ಮತ್ತು ಅದರ ಪಕ್ಕಾ ಪ್ರತಿಯ ಹಿಂಭಾಗದಲ್ಲಿ ಪ್ರಿಸೈಡಿಂಗ್ ಅಧಿಕಾರಿ ಯು "ನೀಡಿದ ಮತಪತ್ರ" ಎಂಬ ಪದಗಳನ್ನು ಬರೆದು ರುಜುವಿನೊಂದಿಗೆ ಹಿಂಬರಹ ಮಾಡಿರುವುದನ್ನು ಹೊರತುಪಡಿಸಿ ಮತದಾನದಲ್ಲಿ ಉಪಯೋಗಿಸಿದ ಇತರ ಮತಪತ್ರಗಳಂತೆಯೇ ಇರತಕ್ಕದ್ದು.

(4) ಮತದಾರನು ನೀಡಿದ ಮತಪತ್ರದ ಮೇಲೆ ಮತದಾನ ಅಂಕಣಗಳಲ್ಲಿ ಗುರುತು ಮಾಡಿದ ಮತ್ತು ಅದನ್ನು ಮಡಚಿದ ತರುವಾಯ ಅದನ್ನು ಮತಪೆಟ್ಟಿಗೆಯಲ್ಲಿ ಹಾಕುವುದಕ್ಕೆ ಬದಲಾಗಿ ಪ್ರಿಸೈಡಿಂಗ್ ಅಧಿಕಾರಿಗೆ

ಅದನ್ನು ಕೊಡತಕ್ಕದ್ದು. ಅವರು ಅದನ್ನು ಆ ಉದ್ದೇಶಕ್ಕಾಗಿ ವಿಶೇಷವಾಗಿ ಇಡಲಾದ ಲಕೋಟೆಯಲ್ಲಿ ಇರಿಸತಕ್ಕದ್ದು.

**ನಿಯಮ 57 ಮತದಾನದ ಮುಕ್ತಾಯ:**

(1) ಪ್ರಿಸೈಡಿಂಗ್ ಅಧಿಕಾರಿಯು ಆ ಬಗ್ಗೆ ನಿಗದಿಪಡಿಸಿದ ವೇಳೆಗೆ ಮತದಾನವನ್ನು **ಮುಕ್ತಾಯಗೊಳಿಸತಕ್ಕದ್ದು,** ಮತ್ತು ಆ ತರುವಾಯ ಯಾವನೇ ಮತದಾರನನ್ನು ಮತದಾನ ಕೇಂದ್ರದೊಳಗೆ ಬಿಡತಕ್ಕದ್ದಲ್ಲ.

ಪರಂತು ಮತದಾನ ಕೇಂದ್ರವನ್ನು ಮುಚ್ಚುವುದಕ್ಕೆ ಮುಂಚೆ ಅಲ್ಲಿ ಹಾಜರಿರುವ ಎಲ್ಲ ಮತದಾರರಿಗೆ ಅವರ ಮತಗಳನ್ನು ಚಲಾಯಿಸಲು ಅವಕಾಶ ಕೊಡತಕ್ಕದ್ದು.

(2) ಯಾವನೇ ಮತದಾರನು ಮತದಾನದ ಕೇಂದ್ರವನ್ನು ಮುಚ್ಚುವುದಕ್ಕೆ ಮುಂಚೆ ಅಲ್ಲಿ ಹಾಜರಿದ್ದನೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಅದನ್ನು ಪ್ರಿಸೈಡಿಂಗ್ ಅಧಿಕಾರಿಯು ತೀರ್ಮಾನಿಸತಕ್ಕುದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

**ನಿಯಮ 58 ಮತದಾನದ ತರುವಾಯ ಮತಪೆಟ್ಟಿಗೆಗಳನ್ನು ಮೊಹರು ಮಾಡುವುದು:–**

(1) ಮತದಾನವು ಮುಕ್ತಾಯವಾದ ತರುವಾಯ ಸಾಧ್ಯವಾದಷ್ಟು ಬೇಗನೆ ಪ್ರಿಸೈಡಿಂಗ್ ಅಧಿಕಾರಿಯು ಮತಪೆಟ್ಟಿಗೆಗಳ ಸೀಳು ಜಾಗವನ್ನು ಮುಚ್ಚತಕ್ಕದ್ದು ಮತ್ತು ಸೀಳು ಜಾಗವನ್ನು ಮುಚ್ಚುವುದಕ್ಕಾಗಿ ಮತಪೆಟ್ಟಿಗೆಗಳಲ್ಲಿ ಯಾವುದೇ ಯಾಂತ್ರಿಕ ಸಾಧನವು ಇಲ್ಲದಿರುವಲ್ಲಿ ಅವನು ಆ ಸೀಳು ಜಾಗವನ್ನು ಮೊಹರು ಮಾಡತಕ್ಕದ್ದು ಮತ್ತು ಯಾವನೇ ಮತದಾರನ ಏಜೆಂಟನಿಗೆ ಅವನ ಮೊಹರನ್ನು ಹಾಕಲು ಸಹ ಅವಕಾಶ ಕೊಡತಕ್ಕದ್ದು.

(2) ಆ ತರುವಾಯ ಮತಪೆಟ್ಟಿಗೆ ಯನ್ನು ಮೊಹರು ಮಾಡತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು.

(3) ಮೊದಲನೆಯ ಪೆಟ್ಟಿಗೆಯು ಭರ್ತಿಯಾದ ಕಾರಣದಿಂದ ಎರಡನೆಯ ಪೆಟ್ಟಿಗೆಯನ್ನು ಉಪಯೋಗಿಸುವುದೇ ಅವಶ್ಯವಾಗಿರುವಲ್ಲಿ ಮೊದಲನೆಯ ಪೆಟ್ಟಿಗೆಯನ್ನು ಯಾವುದೇ ಇತರೆ ಮತ ಪೆಟ್ಟಿಗೆಯನ್ನು ಉಪಯೋಗಿಸುವುದಕ್ಕೆ ಮುಂಚೆ (1) ಮತ್ತು (2)ನೇ ಉಪನಿಯಮಗಳಲ್ಲಿ ಉಪಬಂಧಿಸಲಾದಂತೆ ಮುಚ್ಚತಕ್ಕದ್ದು, ಮೊಹರು ಮಾಡತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು.

**ನಿಯಮ 59 ಮತಪತ್ರಗಳ ಲೆಕ್ಕ:–**

(1) ಪ್ರಿಸೈಡಿಂಗ್ ಅಧಿಕಾರಿಯು ಮತದಾನವು ಮುಕ್ತಾಯವಾದ ಮೇಲೆ **ಪ್ರಪತ್ರ–28** ರಲ್ಲಿ ಮತಪತ್ರಗಳ ಲೆಕ್ಕವನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಪ್ರತ್ಯೇಕ ಲಕೋಟೆಯಲ್ಲಿಟ್ಟು ಅದರ ಮೇಲೆ ಮತಪತ್ರದ ಲೆಕ್ಕ ಎಂಬ ಪದಗಳಿಂದ ಮೇಲು ಬರಹ ಮಾಡತಕ್ಕದ್ದು.

(2) ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ಮುಕ್ತಾಯದಲ್ಲಿ ಹಾಜರಿರುವ ಪ್ರತಿಯೊಬ್ಬ ಮತದಾನ ಏಜೆಂಟನಿಗೆ ಅದಕ್ಕಾಗಿ ಸದರಿ ಮತದಾನ ಏಜೆಂಟನಿಂದ ಸ್ವೀಕೃತಿಯನ್ನು ಪಡೆದ ತರುವಾಯ ಮತಪತ್ರಗಳ ಲೆಕ್ಕದಲ್ಲಿ ಮಾಡಲಾದ ನಮೂದುಗಳ ನಿಜಪ್ರತಿಯನ್ನು ಒದಗಿಸತಕ್ಕದ್ದು ಮತ್ತು ಅದನ್ನು ನಿಜಪ್ರತಿಯೆಂದು ಕೂಡ ಅನುಪ್ರಮಾಣಿಸತಕ್ಕದ್ದು.

**ನಿಯಮ 60 ಹಾಳಾದ ಮತ್ತು ಹಿಂದುರುಗಿಸಿದ ಮತಪತ್ರಗಳು:-**

(1) ಮತಪತ್ರವೆಂದು ಸುಲಭವಾಗಿ ಅದನ್ನು ಉಪಯೋಗಿಸಿಕೊಳ್ಳಲಾಗದಂಥ ರೀತಿಯಲ್ಲಿ ಅವನ ಮತಪತ್ರದೊಂದಿಗೆ ಅಜಾಗರೂಕತೆಯಿಂದ ವ್ಯವಹರಿಸಿರುವ ಮತದಾರನು ಪ್ರಿಸೈಡಿಂಗ್ ಅಧಿಕಾರಿಗೆ ಅದನ್ನು ಹಿಂದಿರುಗಿಸಿದ ಮೇಲೆ ಮತ್ತು ಆ ಅಜಾಗರೂಕತೆಯ ಬಗ್ಗೆ ಅವನಿಗೆ ಮನದಟ್ಟು ಮಾಡಿಕೊಟ್ಟ ಮೇಲೆ ಅವನಿಗೆ ಇನ್ನೊಂದು ಮತಪತ್ರವನ್ನು ಕೊಡಬಹುದು ಮತ್ತು ಹಾಗೆ ಹಿಂದಿರುಗಿಸಿದ ಮತಪತ್ರ ಮತ್ತು ಅಂಥ ಪಕ್ಕಾಪ್ರತಿಯ ಮೇಲೆ ಪ್ರಿಸೈಡಿಂಗ್ ಅಧಿಕಾರಿಯು "ಹಾಳಾಗಿದೆ, ರದ್ದುಪಡಿಸಲಾಗಿದೆ" ಎಂದು ಗುರುತು ಮಾಡತಕ್ಕದ್ದು.

(2) ಮತದಾರನು ಮತಪತ್ರವನ್ನು ಪಡೆದ ತರುವಾಯ ಅದನ್ನು ಉಪಯೋಗಿಸಕೂಡದೆಂದು ತೀರ್ಮಾನಿಸಿದರೆ ಅವನು ಅದನ್ನು ಪ್ರಿಸೈಡಿಂಗ್ ಅಧಿಕಾರಿಗೆ ಹಿಂದಿರುಗಿಸತಕ್ಕದ್ದು ಮತ್ತು ಹಾಗೆ ಹಿಂದಿರುಗಿಸಿದ ಮತಪತ್ರ ಮತ್ತು ಅಂಥ ಮತಪತ್ರದ ಪಕ್ಕಾ ಪ್ರತಿಗಳ ಮೇಲೆ "ಹಿಂದಿರುಗಿಸಲಾಗಿದೆ, ರದ್ದುಪಡಿಸಲಾಗಿದೆ" ಎಂದು ಪ್ರಿಸೈಡಿಂಗ್ ಅಧಿಕಾರಿಯು ಗುರುತು ಮಾಡತಕ್ಕದ್ದು.

(3) (1)ನೇ ಉಪ ನಿಯಮ ಅಥವಾ (2)ನೇ ಉಪ ನಿಯಮದ ಮೇರೆಗೆ ರದ್ದುಪಡಿಸಿದ ಎಲ್ಲಾ ಮತಪತ್ರಗಳನ್ನು ಒಂದು ಪ್ರತ್ಯೇಕ ಲಕೋಟೆಯಲ್ಲಿಡತಕ್ಕದ್ದು.

**ನಿಯಮ 61. ಇತರ ಪ್ಯಾಕೆಟ್‌ಗಳನ್ನು ಮೊಹರು ಮಾಡುವುದು:-**

(1) ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು

(ಎ) ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿ

(ಬಿ) ಉಪಯೋಗಿಸಿದ ಮತಪತ್ರಗಳ ಪಕ್ಕಪ್ರತಿಗಳು

(ಸಿ) ಪ್ರಿಸೈಡಿಂಗ್ ಅಧಿಕಾರಿಯು ಪೂರ್ಣವಾಗಿ ರುಜು ಮಾಡಿದ ಆದರೆ ಮತದಾರರಿಗೆ ಕೊಡದಿರುವ ಮತಪತ್ರಗಳು

(ಡಿ) ಮತದಾರರಿಗೆ ಕೊಡದಿರುವ ಯಾವುದೇ ಇತರೆ ಮತಪತ್ರಗಳು

(ಇ) 54ನೇ ನಿಯಮದ ಮೇರೆಗೆ ಮತದಾನ ಪ್ರಕ್ರಿಯೆಯ ಉಲ್ಲಂಘನೆಗಾಗಿ ರದ್ದುಪಡಿಸಿದ ಮತಪತ್ರಗಳು;

(ಎಫ್) ಯಾವುದೇ ಇತರೆ ರದ್ದುಪಡಿಸಿದ ಮತಪತ್ರಗಳು;

(ಜಿ) ನೀಡಿದ ಮತಪತ್ರಗಳನ್ನು ಒಳಗೊಂಡಿರುವ ಲಕೋಟೆ ಮತ್ತು ಪ್ರಪತ್ರ 27ರಲ್ಲಿನ ಪಟ್ಟಿ;

(ಹೆಚ್) ಆಕ್ಷೇಪಿತ ಮತದಾರರ ಪಟ್ಟಿ ; ಮತ್ತು

(ಐ) ಮೊಹರು ಮಾಡಿದ ಲಕೋಟೆಯಲ್ಲಿಡತಕ್ಕದ್ದೆಂದು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಿದ ಯಾವುದೇ ಕಾಗದ ಪತ್ರಗಳು

**– ಇವುಗಳನ್ನು ಪ್ರತ್ಯೇಕ ಪ್ಯಾಕೆಟ್‌ಗಳನ್ನಾಗಿ ಮಾಡತಕ್ಕದ್ದು**

(2) ಅಂಥ ಪ್ರತಿಯೊಂದು ಪ್ಯಾಕೆಟ್‌ನ್ನು ಪ್ರಿಸೈಡಿಂಗ್ ಅಧಿಕಾರಿಯು ಮೊಹರುಗಳಿಂದ ಮತ್ತು ಅಭ್ಯರ್ಥಿಯ ಅಥವಾ ಮತದಾನ ಕೇಂದ್ರದಲ್ಲಿ ಹಾಜರಿರಬಹುದಾದ ಮತ್ತು ಅವುಗಳ ಮೇಲೆ ತನ್ನ ಮೊಹರನ್ನು ಹಾಕಲು ಇಚ್ಛಿಸುವ **ಅವನ** ಚುನಾವಣಾ ಏಜೆಂಟನ ಅಥವಾ ಅವನ ಮತದಾನ ಏಜೆಂಟನ ಮೊಹರುಗಳಿಂದ ಮೊಹರು ಮಾಡತಕ್ಕದ್ದು.

**ನಿಯಮ 62. ಮತಪೆಟ್ಟಿಗೆಗಳು ಇತ್ಯಾದಿಗಳನ್ನು ರಿಟರ್ನಿಂಗ್ ಅಧಿಕಾರಿಗಳಿಗೆ ರವಾನಿಸುವುದು:–**

(1) ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿ, ರಿಟರ್ನಿಂಗ್ ಅಧಿಕಾರಿಯು ನಿರ್ದೇಶಿಸಿದಂಥ ಸ್ಥಳದಲ್ಲಿ ರಿಟರ್ನಿಂಗ್ ಅಧಿಕಾರಿಗೆ,–

(ಎ) ಮತ ಪೆಟ್ಟಿಗೆಗಳು;

(ಬಿ) ಮತಪತ್ರಗಳ ಲೆಕ್ಕ;

(ಸಿ) 61ನೇ ನಿಯಮದಲ್ಲಿ ಉಲ್ಲೇಖಿಸಿದ ಮೊಹರು ಮಾಡಿದ ಪ್ಯಾಕೆಟುಗಳು;

(ಡಿ) ಮತದಾನದಲ್ಲಿ ಉಪಯೋಗಿಸಲಾದ ಇತರೆ ಎಲ್ಲ ಕಾಗದ ಪತ್ರಗಳು;

–ಇವುಗಳನ್ನು ಕೊಡತಕ್ಕದ್ದು ಅಥವಾ ವಶಾವಣೆ **ಮಾಡುವಂತೆ** ಮಾಡತಕ್ಕದ್ದು.

(2) ರಿಟರ್ನಿಂಗ್ ಅಧಿಕಾರಿಯು ಮತಗಳ ಎಣಿಕೆ ಪ್ರಾರಂಭವಾಗುವವರೆಗೆ ಎಲ್ಲ ಮತ ಪೆಟ್ಟಿಗೆಗಳು, ಪ್ಯಾಕೆಟ್‌ಗಳು ಮತ್ತು ಇತರ ಕಾಗದ ಪತ್ರಗಳ ಸುರಕ್ಷಿತ ಸಾಗಣಿಕೆ ಮತ್ತು ಅವುಗಳ ಸುರಕ್ಷಿತ ಅಭಿರಕ್ಷೆಗೆ ಸಾಕಷ್ಟು ವ್ಯವಸ್ಥೆಗಳನ್ನು ಮಾಡತಕ್ಕದ್ದು.

**ನಿಯಮ 81. ನಿಯಮಗಳ ಉಲ್ಲಂಘನೆಗಾಗಿ ದಂಡನೆ:–**

ಈ ನಿಯಮಗಳ ಪೈಕಿ ಯಾವುದನ್ನಾದರೂ ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧವು ನಿರ್ಣಯವಾದ ಮೇಲೆ, ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

## ಅನುಬಂಧ–III

## ಮತಗಟ್ಟೆ ಅಧಿಕಾರಿಯ ಕರ್ತವ್ಯಗಳು:

**ಮತಗಟ್ಟೆಯ ಮೊದಲನೆಯ ಪೋಲಿಂಗ್ ಅಧಿಕಾರಿ;–**

ಮೊದಲನೆಯ ಪೋಲಿಂಗ್ ಅಧಿಕಾರಿಯು ಗುರುತು ಮಾಡಿದ ಮತದಾರರ ಪಟ್ಟಿಯನ್ನು ಹೊಂದಿರುತ್ತಾರೆ ಮತ್ತು ಆ ಪಟ್ಟಿಯ ಪ್ರಕಾರ ಮತದಾರರನ್ನು ಗುರುತಿಸಲು ಜವಾಬ್ದಾರರಾಗಿರುತ್ತಾರೆ. ಮತದಾರರು ಮತಗಟ್ಟೆಯ ಒಳಗೆ ಬಂದನಂತರ ಅವರಲ್ಲಿಗೆ ಹೋಗುವಂತೆ ತಿಳಿಸಬೇಕು. ಸಾಮಾನ್ಯವಾಗಿ ಪ್ರತಿ ಮತದಾರರು ಮತಗಟ್ಟೆಯ ಒಳಗೆ ಬರುವ ಮೊದಲು ಗುರುತು ಚೀಟಿಯನ್ನು ಅಭ್ಯರ್ಥಿಯಿಂದ ಪಡೆದಿರುತ್ತಾರೆ. ಆ ಚೀಟಿಯು ಬಿಳಿಯ ಕಾಗದದಲ್ಲಿರುತ್ತದೆ ಮತ್ತು ಅದರಲ್ಲಿ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ಅವರ ಕ್ರಮಸಂಖ್ಯೆ ಮತದಾರರ ಪಟ್ಟಿಯ ವಿಭಾಗದ ಸಂಖ್ಯೆ ಮತ್ತು ಅವರು ಮತವನ್ನು ಚಲಾಯಿಸುವ ಮತಗಟ್ಟೆಯ ಹೆಸರುಗಳನ್ನು ಹೊಂದಿರುತ್ತದೆ. ಆ ಚೀಟಿಯಲ್ಲಿ ಅಭ್ಯರ್ಥಿಯ ಹೆಸರು ಅಥವಾ ಅವರ ಪಕ್ಷದ ಹೆಸರು ಅಥವಾ ಅವರಿಗೆ ಕೊಟ್ಟಿರುವ ಚುನಾವಣಾ ಚಿನ್ಹೆಯ ಚಿತ್ರ ಇರಕೂಡದು. ಒಂದು ವೇಳೆ ಮತದಾರನು ಯಾವುದೇ ಈ ತರಹ ಗುರುತು ಚೀಟಿಯನ್ನು ಹೊಂದಿಲ್ಲದಿದ್ದರೆ, ಮತಗಟ್ಟೆಯ ಅಧಿಕಾರಿಯು ಅವರ **ಹೆಸರು,** ಮನೆ ವಿಳಾಸವನ್ನು ತಿಳಿದು ನಂತರ ಮತದಾರರ ಪಟ್ಟಿಯಲ್ಲಿ ಅವರ ಹೆಸರನ್ನು ಕಂಡುಹಿಡಿಯತಕ್ಕದ್ದು. ಮತದಾರರನ್ನೇ ಗುರುತು ಚೀಟಿಯನ್ನು ತರುವಂತೆ ಒತ್ತಾಯ ಮಾಡಬಾರದು ಅಥವಾ ಆ ಗುರುತು ಚೀಟಿ ತರದಿದ್ದರಿಂದ ಅವರನ್ನು ಹೊರಗಡೆ ಕಳುಹಿಸಬಾರದು. ಮತಗಟ್ಟೆ ಅಧಿಕಾರಿಯು ಮತದಾರನು ತರುವ ಗುರುತು ಚೀಟಿಯನ್ನು ತಂದ ಮಾತ್ರಕ್ಕೆ ಅವರು ನಿಜವಾದ ಮತದಾರರೆಂದು ಭಾವಿಸತಕ್ಕದ್ದಲ್ಲ. ಆದ್ದರಿಂದ ಪ್ರತಿಯೊಂದು ಮತದಾರರಿಗೂ ಅವರ ಹೆಸರು ಮತ್ತು ಇನ್ನುಳಿದ ವಿವರಗಳನ್ನು ಕೇಳಿ ತಿಳಿದುಕೊಂಡಾದ ಮೇಲೆ ಹೆಸರನ್ನು ಮತದಾರರ ಪಟ್ಟಿಯಲ್ಲಿ ಕಂಡುಹಿಡಿಯತಕ್ಕದ್ದು.

ಮತದಾರರ ಪಟ್ಟಿಯಲ್ಲಿ ಮತದಾರರ ವಿವರಗಳನ್ನು ಕಂಡುಹಿಡಿದ ನಂತರ ಮೊದಲನೆಯ ಪೋಲಿಂಗ್ ಅಧಿಕಾರಿಯು ಮತದಾರನ ಹೆಸರು, ಮತದಾರರ ಪಟ್ಟಿಯಲ್ಲಿರುವ ಪುಟದ ಸಂಖ್ಯೆ, ವಿಭಾಗದ **ಸಂಖ್ಯೆ,** ಕ್ರಮ ಸಂಖ್ಯೆಯನ್ನು ಪೋಲಿಂಗ್ ಏಜೆಂಟರಿಗೆ ಮತ್ತು ಎರಡನೆಯ ಪೋಲಿಂಗ್ ಅಧಿಕಾರಿಗೆ ಕೇಳಿಸುವಂತೆ ಜೋರಾಗಿ ಹೇಳಬೇಕು.

ಮತದಾರನು ಅವರ ಗುರುತು ಚೀಟಿಗಳೇನಾದರೂ ತಂದಿದ್ದರೆ ಅವುಗಳನ್ನು ಹರಿದು ಚೂರು ಚೂರು ಮಾಡಿ ಕಸದ ಬುಟ್ಟಿಯಲ್ಲಿ ಹಾಕಬೇಕು. ಮತದಾರರ ಗುರುತಿನ ಬಗ್ಗೆ ಪೋಲಿಂಗ್ ಏಜೆಂಟರು **ಆಕ್ಷೇಪಿಸದಿದ್ದರೆ,** ಮತಗಟ್ಟೆಯ ಅಧಿಕಾರಿಯು ಗುರುತು ಮಾಡಿದ ಮತದಾರರ ಪಟ್ಟಿಯಲ್ಲಿ ಪ್ರತಿ ಮತದಾರರ ಹೆಸರಿನ ಕೆಳಗಡೆ ಒಂದು ಗೆರೆಯನ್ನು ಹಾಕಬೇಕು ಮತ್ತು ಮಹಿಳಾ ಮತದಾರರಿದ್ದರೆ ಅವರ ಹೆಸರಿನ ಎಡಭಾಗದಲ್ಲಿ ಟಿಕ್(√) ಗುರುತು ಮಾಡಬೇಕು. ಈ ತರಹದ ಒತ್ತಡದ ಗುರುತು ಮಹಿಳಾ ಮತದಾರರಿಗೆ ಪ್ರತ್ಯೇಕವಾದ ಮತಗಟ್ಟೆಯನ್ನೇ ಕಲ್ಪಿಸಿದರೆ ಬೇಕಾಗಿರುವುದಿಲ್ಲ.

(ಮತದಾನ ಮುಗಿದ ಮೇಲೆ ಮತ ಹಾಕಿದ ಒಟ್ಟು ಪುರುಷರು ಮತ್ತು ಮಹಿಳೆಯರ ಸಂಖ್ಯೆಯನ್ನು ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಯವರಿಗೆ ಅವರ ದಿನಚರಿಯಲ್ಲಿ ನಮೂದಿಸಲು ತಿಳಿಸತಕ್ಕದ್ದು. ಇದನ್ನು ಮಾಡುವ ಸುಲಭ ವಿಧಾನವೆಂದರೆ ಮತದಾನ ಪ್ರಾರಂಭವಾಗುವ ಮೊದಲು ಎರಡು ಪ್ರತೇಕ ಹಾಳೆಗಳ ಮೇಲೆ 1

ರಿಂದ 200 ಅಥವಾ 300 ರವರೆಗೆ ಕ್ರಮಸಂಖ್ಯೆಗಳನ್ನು ಬರೆದುಕೊಳ್ಳಬೇಕು. ಅಂತಹ ಒಂದು ಹಾಳೆಯನ್ನು ಪುರುಷ ಮತದಾರರ ಸಂಖ್ಯೆಯನ್ನು ಮತ್ತು ಇನ್ನೊಂದು ಹಾಳೆಯನ್ನು ಮಹಿಳಾ ಮತದಾರರ ಸಂಖ್ಯೆಯನ್ನು ನಮೂದಿಸುವುದಕ್ಕೆ ಉಪಯೋಗಿಸಬೇಕು. ಪುರುಷರು ಮತ್ತು ಮಹಿಳೆಯರು ಮತದಾನಕ್ಕೆ ಬಂದಂತೆ ಸಂದರ್ಭಾನುಸಾರ ಕ್ರಮಸಂಖ್ಯೆಯನ್ನು ಸಂಬಂಧಪಟ್ಟ ಹಾಳೆಯಲ್ಲಿ ಅನುಕ್ರಮವಾಗಿ ಹೊಡೆದುಹಾಕಬೇಕು. ಇದರಿಂದ ನಿರ್ದಿಷ್ಟ ಅವಧಿಗೆ ಮತದಾನ ಮಾಡಿದ ಪುರುಷರ ಮತ್ತು ಮಹಿಳೆಯರ ಒಟ್ಟು ಸಂಖ್ಯೆಯನ್ನು ತಕ್ಷಣ ತಿಳಿದುಕೊಳ್ಳಲು ಸಹಾಯಕವಾಗುತ್ತದೆ) ನಂತರ ಮತದಾರರು ಎರಡನೇ ಪೋಲಿಂಗ್ ಅಧಿಕಾರಿಯ ಬಳಿ ಹೋಗಬೇಕು.

**<u>ಮತಗಟ್ಟೆಯ ಎರಡನೆಯ ಪೋಲಿಂಗ್ ಅಧಿಕಾರಿ:–</u>**

ಎರಡನೆಯ ಪೋಲಿಂಗ್ ಅಧಿಕಾರಿಯು ಅಳಿಸಲಾಗದ ಶಾಯಿ ಮತ್ತು ಮತಪತ್ರಗಳ ಕಂತೆಗಳನ್ನು ಹೊಂದಿರುತ್ತಾರೆ. ಮೊದಲನೇ ಪೋಲಿಂಗ್ ಅಧಿಕಾರಿಯು ಮತದಾರರ ವಿಭಾಗದ ಸಂಖ್ಯೆ ಮತ್ತು ಕ್ರಮಸಂಖ್ಯೆಯನ್ನು ಓದಿದ ನಂತರ, ಎರಡನೆಯ ಮತಗಟ್ಟೆಯ ಅಧಿಕಾರಿಯು ಮತಪತ್ರದ ಪಕ್ಕ ಪ್ರತಿಯಲ್ಲಿ ಮತದಾರರ ಪಟ್ಟಿಯ ವಿಭಾಗದ ಸಂಖ್ಯೆ ಮತ್ತು ಕ್ರಮಸಂಖ್ಯೆಯನ್ನು ಗುರುತು ಮಾಡಿದ ಮತದಾರರ ಪಟ್ಟಿಯಲ್ಲಿದ್ದ ಹಾಗೆ ನಮೂದಿಸಬೇಕು.

ಅವರು ಮತದಾರರ ಎಡಗೈ ಹೆಬ್ಬೆಟ್ಟಿನ ಪಕ್ಕದಬೆರಳನ್ನು ಪರೀಕ್ಷಿಸಿ ಆ ಬೆರಳಿನ ಉಗುರಿನ ಮೇಲೆ ಅಳಿಸಲಾಗದ ಶಾಯಿಯ ಗುರುತು ಇಲ್ಲವೆಂದು ಖಚಿತಪಡಿಸಿಕೊಂಡ ನಂತರ ಅಳಿಸಲಾಗದ ಶಾಯಿಯ ಗುರುತನ್ನು ಆ ಬೆರಳಿನ ಉಗುರಿನ ಬುಡದ ಮತ್ತು ಅದಕ್ಕೆ ಅಂಟಿಕೊಂಡಿರುವ ಚರ್ಮದ ಮೇಲೆ ಸರಿಯಾಗಿ ಗುರುತು ಬೀಳುವಂತೆ ಹಾಕಬೇಕು. ಅಳಿಸದ ಮಸಿಯ ಗುರುತನ್ನು ಹಾಕುವಾಗ ಮತದಾರರನ್ನು ಮುಟ್ಟಬೇಕಿಲ್ಲ. ಗ್ಲಾಸಿನ ಇಲ್ಲವೆ ಪ್ಲಾಸ್ಟಿಕ್ಕಿನ ಕಡ್ಡಿಯನ್ನು ಮಸಿಯಲ್ಲಿ ಅದ್ದಿ ಅದನ್ನು ಮೇಲೆ ಹೇಳಿದಂತೆ ಬೆರಳಿನ ಮೇಲೆ ಸಾವಕಾಶವಾಗಿ **ಒತ್ತಿಹಿಡಿದು** ತಿರುವಬೇಕು. ಶಾಯಿಯಲ್ಲಿ ಅದ್ದಿದ ಕಡ್ಡಿಯನ್ನು ಬೆರಳಿನ ಮೇಲೆ ಲಘುವಾಗಿ ತಾಗಿಸಿದರೆ ಇಲ್ಲವೆ ಸವರಿದರೆ ಸಾಲದು. ಮಸಿಯ ಗುರುತನ್ನು ಅಳಿಸಿ ಹಾಕುವ ಉದ್ದೇಶದಿಂದ ಮತದಾರರು ಬೆರಳಿಗೆ ಎಣ್ಣೆ ಅಥವಾ ಬೇರೆ ಜಿಡ್ಡು ಪದಾರ್ಥ ಸವರಿಕೊಂಡಿದ್ದು ಗಮನಕ್ಕೆ ಬಂದಲ್ಲಿ ಮತಗಟ್ಟೆಗೆ ಸರಬರಾಜು ಮಾಡಿದ ಬಟ್ಟೆ ಚೂರಿನಿಂದ ಎಣ್ಣೆ / ಜಿಡ್ಡು ಪದಾರ್ಥವನ್ನು ಚೆನ್ನಾಗಿ ಒರೆಸಿ ಆ ಮೇಲೆ ಅಳಿಸಲಾಗದ ಮಸಿಯ ಗುರುತನ್ನು ಮೇಲೆ ಹೇಳಿದ ರೀತಿಯಲ್ಲಿ ಹಾಕಬೇಕು. ಈ ಗುರುತನ್ನು ಹಾಕಿದ ಮೇಲೆ ಕನಿಷ್ಟ ಅರ್ಧ ನಿಮಿಷದವರೆಗೆ ಮಸಿಯನ್ನು ಒರೆಸುವುದಕ್ಕೆ ಅವಕಾಶಕೊಡಬಾರದು. ನಂತರ ಮತಪತ್ರದ ಪಕ್ಕದ ಪ್ರತಿಯ ಮೇಲೆ ಮತದಾರರ ರುಜುವನ್ನು ತೆಗೆದುಕೊಳ್ಳುವುದು. ಒಂದುವೇಳೆ ಮತದಾರನು ರುಜುಮಾಡುವುದಕ್ಕೆ ಬರದಿದ್ದರೆ ಎಡಗೈ ಹೆಬ್ಬೆಟ್ಟಿನ ಗುರುತನ್ನು ತೆಗೆದುಕೊಳ್ಳುವುದು. ಎಡಗೈ ಹೆಬ್ಬೆಟ್ಟಿನ ಗುರುತನ್ನು ಹೆಬ್ಬೆಟ್ಟಿಗೆ ಹತ್ತಿದ ಶಾಯಿ ಒರಸಲು ಮತದಾರನಿಗೆ ಒಂದು ಚೂರು ಬಟ್ಟೆ ಕೊಡತಕ್ಕದ್ದು. ನಂತರ ಮತಪತ್ರವನ್ನು ಲೋಹದ ಪಟ್ಟಿಯಿಂದ ಮತಪತ್ರದ ಪಕ್ಕದ ಪ್ರತಿಯಿಂದ ಬೇರ್ಪಡಿಸಿ ಅದನ್ನು ಮತದಾರರಿಗೆ ಕೊಡುವುದು ಮತ್ತು ಅವರನ್ನು ಮೂರನೇ ಅಧಿಕಾರಿಯ ಬಳಿಗೆ ಕಳಿಸುವುದು. ಮತ ಪತ್ರದ ಪಕ್ಕದ ಪ್ರತಿಯ ಮೇಲೆ ಮತದಾರರ ರುಜುವಿಲ್ಲದೆಯೇ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿಸದೆಯೇ ಮತಪತ್ರವನ್ನು ಕೊಡಬಾರದು. ಪ್ರಿಸೈಡಿಂಗ್ ಅಧಿಕಾರಿಯಾಗಲಿ ಮತಗಟ್ಟೆಯ ಪೋಲಿಂಗ್ ಅಧಿಕಾರಿಯಾಗಲಿ, ಅಥವಾ ಬೇರೆ ಯಾವ ಅಧಿಕಾರಿಯಾಗಲಿ ಮತದಾರರ ಹೆಬ್ಬೆಟ್ಟಿನ ಗುರುತು ದೃಢೀಕರಿಸುವುದು ಬೇಕಾಗಿಲ್ಲ.

**ಮತಗಟ್ಟೆಯ ಮೂರನೇ ಪೋಲಿಂಗ್ ಅಧಿಕಾರಿ:-**

ಮೂರನೇ ಪೋಲಿಂಗ್ ಅಧಿಕಾರಿಯು ಮತಪತ್ರಗಳ ಮೇಲೆ ಗುರುತು ಮಾಡಲು ಬಾಣದ ಅಡ್ಡ ಗುರುತಿನ ರಬ್ಬರ್ ಮೊಹರುಗಳನ್ನು ಹೊಂದಿರುವನು. ಅವನು ಮತದಾರನಿಂದ ಮತಪತ್ರವನ್ನು ತೆಗೆದುಕೊಂಡು ಎರಡು ಸಾರಿ, ಅಂದರೆ ಮೊದಲು ಉದ್ದವಾಗಿ ಮತ್ತು ನಂತರ ಅಡ್ಡವಾಗಿ ಮತಪತ್ರದ ಹಿಂದುಗಡೆ ಹಾಕಿದ ವಿಭಿನ್ನ ಗುರುತು ಮತಪತ್ರದ ಹಿಂಭಾಗದ ಬಲಗಡೆಯ ತುದಿಯನ್ನು ಸ್ಪಷ್ಟವಾಗಿ ಕಾಣುವಂತೆ ಮತಪತ್ರದ ಮಡಿಕೆಯನ್ನು ಬಿಡಿಸಿ ಮತದಾರನಿಗೆ ಹಿಂದಿರುಗಿಸುವನು. ಅವನು ಮತದಾರರಿಗೆ ಶಾಯಿ ಹಚ್ಚಿದ ರಬ್ಬರ್ ಮೊಹರನ್ನು ಕೊಡುವನು ಮತ್ತು ಮತದಾರನು ನಿರ್ದಿಷ್ಟವಾಗಿ ಕೋರಿದರೆ, ಮತ ಗುರುತು ಮಾಡುವ ರೀತಿಯನ್ನು ಬಿಳಿ ಕಾಗದದ ಮೇಲೆ ಗುರುತು ಮಾಡಿ ತೋರಿಸುವನು. ತದನಂತರ ವೋಟಿಂಗ್ ಕಂಪಾರ್ಟ್‌ಮೆಂಟಿಗೆ ತೆರಳುವಂತೆ ಮತದಾರನಿಗೆ ಸೂಚಿಸುವುದು.

**ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಮತಗಟ್ಟೆಯ ಮೂರನೇ ಪೋಲಿಂಗ್ ಅಧಿಕಾರಿಯ ಹೆಚ್ಚಿನ ಕರ್ತವ್ಯಗಳು:-**

ಮೇಲಿನ ಕರ್ತವ್ಯಗಳ ಜೊತೆಗೆ ಮೂರನೇ ಪೋಲಿಂಗ್ **ಅಧಿಕಾರಿಯು** ಪ್ರತಿಯೊಬ್ಬ ಮತದಾರನಿಗೆ/ಳಿಗೆ ಏಕಸದಸ್ಯ ಅಥವಾ ದ್ವಿಸದಸ್ಯ ಅಥವಾ ತ್ರಿಸದಸ್ಯ ಕ್ಷೇತ್ರಗಳನ್ನು ಅವಲಂಬಿಸಿ, ಎಷ್ಟು ಮತಗಳಿವೆಯೆಂದು ತಿಳಿಸಬೇಕು. ಏಕ ಸದಸ್ಯ ಕ್ಷೇತ್ರವಾದರೆ ಮತದಾರನಿಗೆ/ಳಿಗೆ ಒಂದೇ ಮತವಿರುವುದರಿಂದ ಅವನು/ಅವಳು ಇಚ್ಛಿಸಿದ ಒಂದಕ್ಕಿಂತ ಹೆಚ್ಚಿನ ಅಭ್ಯರ್ಥಿಗೆ ಮತ ನೀಡದಂತೆ ತಿಳಿಸಬೇಕು. ದ್ವಿಸದಸ್ಯ ಕ್ಷೇತ್ರವಾದರೆ ಮತದಾರನಿಗೆ/ಳಿಗೆ ಎರಡು ಮತಗಳಿರುವುದರಿಂದ ಅವನು/ಅವಳು ಇಚ್ಛಿಸಿದ ಎರಡಕ್ಕಿಂತ ಹೆಚ್ಚಿಗೆ ಅಭ್ಯರ್ಥಿಗಳಿಗೆ ಮತ ನೀಡದಂತೆ ತಿಳಿಸಬೇಕು. ತ್ರಿಸದಸ್ಯ ಕ್ಷೇತ್ರವಾದಲ್ಲಿ ಮತದಾರನಿಗೆ/ಳಿಗೆ ಮೂರು ಮತಗಳಿರುವುದರಿಂದ ಅವನು/ಅವಳು ಇಚ್ಛಿಸಿದ ಮೂರಕ್ಕಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಮತ ನೀಡದಂತೆ ತಿಳಿಸಬೇಕು. ಮತದಾರರಿಗಿರುವ ಮತಗಳ ಸಂಖ್ಯೆಯನ್ನು ತಿಳಿಸದಿದ್ದಲ್ಲಿ ಅವರು ಮಾಡಬಹುದಾದ ತಪ್ಪಿನಿಂದ ಮತಗಳು ತಿರಸ್ಕೃತವಾಗುವ ಸಂಭವವಿದೆ. ಈ ಕಾರಣದಿಂದ ಮತಗಟ್ಟೆಯ ಪ್ರಿಸೈಡಿಂಗ್ ಅಧಿಕಾರಿಯು ಮತಗಟ್ಟೆಯ ಮೂರನೇ ಪೋಲಿಂಗ್ ಅಧಿಕಾರಿಯು ಮೇಲಿನ ಸೂಚನೆಗಳನ್ನು ಅತ್ಯಂತ ನಿಷ್ಠೆಯಿಂದ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ತನ್ನ ಮತವನ್ನು ಅಭಿಲೇಖಿಸಿದ ನಂತರ ಮತಪತ್ರವನ್ನು ಮೊದಲು ಮಡಿಸಿದ ರೀತಿಯಲ್ಲಿ ಮಡಿಸಿಕೊಂಡು ವೋಟಿಂಗ್ ಕಂಪಾರ್ಟ್‌ಮೆಂಟಿನಿಂದ ಹೊರಗೆ ಬಂದು ಮತಪತ್ರವನ್ನು ಮತಗಟ್ಟೆಯ ಅಧಿಕಾರಿಯ ಎದುರಿನಲ್ಲಿಡಲಾದ ಮತಪೆಟ್ಟಿಗೆಯಲ್ಲಿ ಹಾಕುವನು.

ಮತದಾರನು ಮತಗಟ್ಟೆಯನ್ನು ಬಿಡುವ ಮೊದಲು ಅವನ ತೋರುಬೆರಳಿನ ತ್ವಚೆಯ ಮೇಲೆ **ಅಳಿಸಲಾರದ** ಮಸಿಯು ಸರಿಯಾಗಿ ಮೂಡಿದ್ದನ್ನು 2ನೇ ಪೋಲಿಂಗ್ ಅಧಿಕಾರಿಯು ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳಬೇಕು. ಒಂದು ವೇಳೆ ಮತದಾರನು ಆ ಗುರುತನ್ನು ಅಳಿಸಿಕೊಂಡಿದ್ದರೆ ಅಥವಾ ಆ ಗುರುತು ಸರಿಯಾಗಿ ಕಾಣದಿದ್ದರೆ ಆ ಮತದಾರನಿಗೆ ಮತ್ತೊಮ್ಮೆ ಸ್ಪಷ್ಟವಾಗಿ ಮತ್ತು ಕೂಡಲೇ ಅಳಿಸಲಾಗದ ಹಾಗೆ ಗುರುತನ್ನು ಹಾಕಬೇಕು.

# ಅನುಬಂಧ–IV

**(1) ಮತಪೆಟ್ಟಿಗೆಗಳ ನಿರ್ವಹಣೆ:–**

(i) ಬಿರಡಿ (ಬಟನ್)ಮತ್ತು ಕಿಂಡಿಯ ಮುಚ್ಚಳವನ್ನು ಕೂಡಿಸಿ ಬಿಗಿದ ತಂತಿಯನ್ನು ಬಿಚ್ಚಿರಿ

(ii) ಕಿಂಡಿಯ ಮುಚ್ಚಳವನ್ನು **ಕಿಂಡಿಯು** ಪೂರ್ಣವಾಗಿ ತೆರೆಯುವಂತೆ ಬಲಗಡೆಗೆ ತಿರುಗಿಸಿರಿ.

(iii) ನಿಮ್ಮ ಅಂಗೈಯನ್ನು ಮೇಲೆ ಮಾಡಿ ಬೆರಳನ್ನು, ಕಿಂಡಿಯ ಮೂಲಕ ಒಳಗಿನ ಬ್ರ್ಯಾಕೆಟ್ಟಿಗೆ ತಾಗುವಂತೆ ಸೇರಿಸಿರಿ.

(iv) **ಬ್ರ್ಯಾಕೆಟ್ಟನ್ನು** ಕಿಂಡಿಯತ್ತ ಎಳೆದುಕೊಂಡು ಬಿರಡಿಯನ್ನು (ಬಟನ್) ಅದು ನಿಲ್ಲುವವರೆಗೆ ಒಂದು ನಾಲ್ಕಂಶದಷ್ಟು ಮೆಲ್ಲಗೆ ಎಡಕ್ಕೆ ತಿರುಗಿಸಿರಿ.(ಈಗ ಪೆಟ್ಟಿಗೆಯು ತೆಗೆದಿರುವುದರಿಂದ ಮುಚ್ಚಳವನ್ನು ತೆರೆಯಬಹುದು)

(v) ಅಭ್ಯರ್ಥಿಗಳಿಗೆ ಅಥವಾ ಅವರ ಏಜೆಂಟರಿಗೆ ಪೆಟ್ಟಿಗೆಯನ್ನು, ಅದರ ಯಂತ್ರಕ್ರಿಯೆಗೆ ಬಾಧೆಯಾಗದಂತೆ ಪರೀಕ್ಷಿಸಲು ಅನುಮತಿ ನೀಡಿರಿ.

**(2) ಮತದಾನಕ್ಕೆ ಮತಪೆಟ್ಟಿಗೆಯ ಸಿದ್ಧತೆ:–**

(i) ಹಸಿರು ಬಣ್ಣದ ಪೇಪರ್ ಸೀಲ್ ತೆಗೆದುಕೊಂಡು ಅಗಲವಾಗಿದ್ದ ಬಿಳಿ ಭಾಗದ ತುದಿಯಲ್ಲಿ ಅಭ್ಯರ್ಥಿಗಳ ಅಥವಾ ಅವರ ಏಜೆಂಟರ ಸಹಿಗಳನ್ನು ತೆಗೆದುಕೊಳ್ಳಿರಿ. ನೀವು ಸಹ ಅದರ ಮೇಲೆ ಸಹಿ ಮಾಡಿ ದಿನಾಂಕವನ್ನು ನಮೂದಿಸಬೇಕು.

(ii) ಪೇಪರ್ ಸೀಲುಗಳ ಅನುಕ್ರಮ ಸಂಖ್ಯೆಯನ್ನು ನಿಗದಿತ ನಮೂನೆಯಲ್ಲಿ ಟಿಪ್ಪಣಿ ಮಾಡಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಅಥವಾ **ಅವರ** ಏಜೆಂಟರುಗಳಿಗೆ ಅನುಕ್ರಮ ಸಂಖ್ಯೆಯನ್ನು ಟಿಪ್ಪಣಿ ಮಾಡಿಕೊಳ್ಳಲು ಅನುಮತಿ ಕೊಡಬೇಕು.

(iii) ಮುಚ್ಚಳದ ಕೆಳಭಾಗದಲ್ಲಿರುವ ಚೌಕಟ್ಟಿನ ಮಧ್ಯಭಾಗದ ಎರಡೂ ಕಡೆಗೆ ಇರುವ ಸಂದುಗಳ ಮೂಲಕ ಸಹಿಗಳಿದ್ದ ಪೇಪರ್ ಸೀಲ್‌ಗಳ ಬಿಳಿಭಾಗವು ಪೆಟ್ಟಿಗೆ ಮುಚ್ಚಳದ ಕೆಳಗಡೆ ಕಾಣುವಂತೆ ಸೇರಿಸತಕ್ಕದ್ದು.

(iv) ಪೇಪರ್ ಸೀಲ್ ಆಕಸ್ಮಿಕವಾಗಿ ಹಾಳಾಗುವುದನ್ನು ತಡೆಯಲು ಸಹಿಗಳಿದ್ದ ಕಡೆಗೆ ಉದ್ದ ಹೆಚ್ಚಿಗೆ ಬರುವಂತೆ ಪೇಪರ್ ಸೀಲನ್ನು ಸೇರಿಸಿರಿ, ಅದು ಸರಿದಾಡದಂತೆ ಮಧ್ಯಭಾಗದ ಚೌಕಟ್ಟಿನೊಳಗೆ ಪೇಪರ್ ಸೀಲ್‌ನ ಒಳಭಾಗದಲ್ಲಿ ಸ್ವಲ್ಪ ಅಂಟು ಹಚ್ಚಿ ರಟ್ಟಿನ ತುಂಡನ್ನು ಇಡಿರಿ. ಪೇಪರ್ ಸೀಲ್ ಸ್ಥಾನದಲ್ಲಿ ಗಟ್ಟಿಯಾಗಿ ಹಿಡಿದುಕೊಳ್ಳುವಷ್ಟು ದಪ್ಪವಾದ ಪ್ಯಾಡಿಂಗ್ ಇರತಕ್ಕದ್ದು. ಮೆಲ್ಲಗೆ ಎಳೆದು ಪರೀಕ್ಷಿಸಿರಿ, ಪೇಪರ್ ಸೀಲ್ ಸರಿದಾಡತಕ್ಕದ್ದಲ್ಲ.

(v) ಅರಗಿನಿಂದ ರಟ್ಟಿನ ಮೇಲಿನ ಎರಡೂ ಮೂಲೆಗಳನ್ನು ಪೇಪರ್ ಸೀಲಿಗೆ ಮತ್ತು ಮತಪೆಟ್ಟಿಗೆಯ ಮುಚ್ಚಳದ ಒಳಭಾಗಕ್ಕೆ ಭದ್ರಪಡಿಸಿರಿ.

(vi) ಅಭ್ಯರ್ಥಿಯು ಅಥವಾ ಆತನ/ಅವಳ ಏಜೆಂಟನು ತಡವಾಗಿ ಬಂದು ಮತ್ತು ಪೇಪರ್ ಸೀಲನ್ನು ಚೌಕಟ್ಟಿನೊಳಗೆ ಸೇರಿಸುವ ಮೊದಲು ಅದರ ಮೇಲೆ ಸಹಿ ಮಾಡಲು ಸಾಧ್ಯವಾಗದಿದ್ದರೆ, ಅವನು/ಅವಳು ಇಚ್ಛಿಸಿದರೆ ಈ ಹಂತದಲ್ಲಿ ಪೇಪರ್ ಸೀಲ್ ಉದ್ದ ಹೆಚ್ಚಿಗೆ ಇದ್ದ ಭಾಗದ ಮೇಲೆ ಸಹಿ ಅಥವಾ ಮೊಹರು ಹಾಕುವಂತೆ ಅನುಮತಿ ಕೊಡತಕ್ಕದ್ದು.

(vii) ನಂತರ ಪೆಟ್ಟಿಗೆಯ ಮುಚ್ಚಳವನ್ನು ಮೆಲ್ಲಗೆ ಮುಚ್ಚಿರಿ. ಬೇಕೆನಿಸಿದರೆ ಪೇಪರ್ ಸೀಲಿನ ತುದಿಯ ಭಾಗವನ್ನು ಮಡಿಸಿ ಪೆಟ್ಟಿಗೆಯೊಳಗೆ ಉಳಿಯುವಂತೆ ಎಚ್ಚರಿಕೆ ವಹಿಸಬೇಕು. ಬಿರಡೆಯನ್ನು ಅದು

ನಿಲ್ಲುವವರೆಗೆ ಸ್ವಲ್ಪ ಬಲಗಡೆಗೆ ತಿರುಗಿಸಿರಿ. ಈಗ ಮತದಾನಕ್ಕೆ ಸಂದು (ಸ್ಲಿಟ್) ಸರಿಯಾಗಿ ಪೂರ್ಣ **ತೆರೆದಿರತಕ್ಕದ್ದು**. ಬಿರಡಿಯನ್ನು ಮತ್ತಷ್ಟು ಮುಂದೆ ತಿರುಗಿಸಕೂಡುದು. ಹಾಗೆ ಮಾಡಿದಲ್ಲಿ ಸಂದು ಬಂದಾಗಿ ಮತಪತ್ರಗಳನ್ನು ಹಾಕಲಿಕ್ಕೆ ಬರದಂತೆ ಆಗುತ್ತದೆ. ಒಂದು ವೇಳೆ ಅಜಾಗರೂಕತೆಯಿಂದ ಹಾಗಾದರೆ ಪೇಪರ್ ಸೀಲನ್ನು ತೆಗೆದುಬಿಟ್ಟು ಪೆಟ್ಟಿಗೆಯನ್ನು ಪುನ: ತೆಗೆಯಬೇಕಾಗುವುದು ಮತ್ತು ಹೊಸ ಪೇಪರ್ ಸೀಲ್ ಉಪಯೋಗಿಸಿ, ಮತದಾನಕ್ಕಾಗಿ ಮತಪೆಟ್ಟಿಗೆಯನ್ನು ಸಿದ್ದಪಡಿಸಬೇಕಾಗುವುದು.

(viii) ಕಿಂಡಿಯ ಮುಚ್ಚಳವನ್ನು ಎಡಗಡೆಗೆ ತಿರುಗಿಸಿ ಕಿಂಡಿಯನ್ನು ಪೂರ್ಣ ಮುಚ್ಚಿರಿ, ಕಿಂಡಿಯ ಮುಚ್ಚಳ ಮತ್ತು ಬಿರಡೆಯ ರಂಧ್ರಗಳ ಮೂಲಕ ತಂತಿಯನ್ನು ಹಾಯಿಸಿ ಎರಡೂ ತುದಿಗಳನ್ನು ಕೂಡಿಸಿ ಬಿಗಿಯಾಗಿ ಮುರಗಿ ಸುತ್ತಿ ಭದ್ರಪಡಿಸಬೇಕು. ನಂತರ ಟ್ವಯಿನ್ ದಾರವನ್ನು ಕಿಂಡಿಯ ಮತ್ತು ಬಿರಡೆಯ ರಂಧ್ರಗಳ ಮೂಲಕ ಹಾಯಿಸಿ ಸಾಧ್ಯವಾದಷ್ಟು ಗಂಟುಗಳನ್ನು ಹಾಕಿ ಗಂಟಿನ ತುದಿಯನ್ನು ಒಂದು **ದಪ್ಪವಾದ** ಕಾಗದದ ತುಂಡಿನ ಮೇಲಿಟ್ಟು ಅರಗಿನ ಮೊಹರನ್ನು ಹಾಕಬೇಕು.

**(3) ಮತದಾನವು ಮುಕ್ತಾಯಗೊಂಡ ನಂತರ ಪೆಟ್ಟಿಗೆಯ ಸಂದನ್ನು ಮುಚ್ಚಿ ಮೊಹರು ಮಾಡುವುದು:–**

(i) ಕೊನೆಯ ಮತದಾರನು ಮತ ಹಾಕಿದ ನಂತರ ಕಿಂಡಿಯ ಮುಚ್ಚಳ ಮತ್ತು ಬಿರಡೆಯನ್ನು ಸೇರಿಸಿ ಬಿಗಿದ ತಂತಿಯನ್ನು ಮತ್ತು ಟ್ವಯಿನ್ ದಾರವನ್ನು ತೆಗೆಯಿರಿ.

(ii) ಕಿಂಡಿಯ ಮುಚ್ಚಳವನ್ನು ಬಲಗಡೆಗೆ ತಿರುಗಿಸಿ ಮತ್ತು ಸಂದು ಪೂರ್ಣವಾಗಿ ಮುಚ್ಚುವಂತೆ ಬಿರಡೆಯನ್ನು ಬಲಗಡೆಗೆ ತಿರುಗಿಸಿರಿ.

(iii) ಕಿಂಡಿಯ ಮುಚ್ಚಳವನ್ನು ಕಿಂಡಿಯು ಮುಚ್ಚುವಂತೆ ಎಡಗಡೆಗೆ ತಿರುಗಿಸಿರಿ ಕಿಂಡಿಯ ಮುಚ್ಚಳ ಮತ್ತು ಬಿರಡೆಯನ್ನು ಕೂಡಿಸಿ ಅವುಗಳ ರಂಧ್ರಗಳ ಮೂಲಕ ತಂತಿಯನ್ನು ಸೇರಿಸಿ, ಗಟ್ಟಿಯಾಗಿ ಮುರಿಗೆ ಹಾಕಿ ಭದ್ರಪಡಿಸಿರಿ.

(iv) ಮತಪೆಟ್ಟಿಗೆಯನ್ನು ಮುಚ್ಚಿ ಭದ್ರಪಡಿಸಿದ ನಂತರ ರಿಬ್ಬನ್ ಅಥವಾ ಟೇಪನ್ನು ಪೆಟ್ಟಿಗೆಯ ನಾಲ್ಕೂ ಕಡೆಗೆ ಒಂದಕ್ಕೊಂದು ಅಡ್ಡಬರುವಂತೆ ಮುಚ್ಚಳದ ಕೈಹಿಡಿಯು ಇದ್ದರೆ ಅದರ ಕೆಳಗಿನಿಂದ ಹಾಯಿಸಿ ಗಂಟು ಹಾಕಿ ಗಂಟಿನ ತುದಿಯನ್ನು ಒಂದು ದಪ್ಪ ಕಾಗದ ಅಥವಾ ರಟ್ಟಿನ ಮೇಲಿಟ್ಟು ಅರಗಿನ ಮೊಹರನ್ನು ಹಾಕಿರಿ. ಅಭ್ಯರ್ಥಿಗಳ ಪೋಲಿಂಗ್ ಏಜೆಂಟರನ್ನು ಸಹ ಇಚ್ಛಿಸಿದಲ್ಲಿ ಅವರ ಮೊಹರು ಅಥವಾ ಸಹಿಗಳನ್ನು ಹಾಕುವಂತೆ ಕೇಳತಕ್ಕದ್ದು. ನಂತರ ಪೆಟ್ಟಿಗೆಯನ್ನು ನಿಮಗೆ ಒದಗಿಸಲಾದ ಬಟ್ಟೆಯ ಚೀಲದಲ್ಲಿ ಹಾಕಿ ಹೊಲಿಯಬೇಕು. ಹೊಲಿಗೆಯ ಮೇಲೆ ಅಲ್ಲಲ್ಲಿ ಅರಗಿನ ಮೊಹರನ್ನು ಹಾಕತಕ್ಕದ್ದು. ಹಾಜರಿದ್ದ ಅಭ್ಯರ್ಥಿಗಳ ಪೋಲಿಂಗ್ ಏಜೆಂಟರು ಇಚ್ಛೆಪಟ್ಟರೆ, ಅವರ ಮೊಹರನ್ನು ಹಾಕುವಂತೆ ಕೇಳತಕ್ಕದ್ದು. ವಿಳಾಸ ಬರೆದ ಕಾರ್ಡನ್ನು (ಅಡ್ರೆಸ್ಡ್ ಟ್ಯಾಗ್) ಸರಿಯಾಗಿ ಅಂಟಿಸಿರಿ.

# ಅನುಬಂಧ– V

## ಮತಪೆಟ್ಟಿಗೆಳನ್ನು ಮಾದರಿ ಮತಗಟ್ಟೆಯ ರೂಪುರೇಷೆ




* * *

## ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

## ನಮೂನೆ–10

## ಪ್ರಿಸೈಡಿಂಗ್ ಅಧಿಕಾರಿ ದಿನಚರಿ

| | | |
|---|---|---|
| 1 | ಚುನಾವಣಾ ಕ್ಷೇತ್ರದ ಹೆಸರು (ಸ್ವಷ್ಟ ಅಕ್ಷರಗಳಲ್ಲಿ) | |
| 2 | ಮತದಾನದ ದಿನಾಂಕ | |
| 3 | ಮತದಾನ ಕೇಂದ್ರದ ಸಂಖ್ಯೆ:<br>ಈ ಮತಗಟ್ಟೆಯು<br>i. ಸರ್ಕಾರಿ ಅಥವಾ ಅರೆ ಸರ್ಕಾರಿ ಕಟ್ಟಡದಲ್ಲಿದೆಯೇ?<br>ii. ಖಾಸಗಿ ಕಟ್ಟಡದಲ್ಲಿದೆಯೇ ?<br>iii. ತಾತ್ಕಾಲಿಕ ಕಟ್ಟಡಗಳಲ್ಲಿ ವ್ಯವಸ್ಥೆ ಮಾಡಲಾಗಿದೆಯೇ ? | |
| 4 | ಸ್ಥಳೀಯವಾಗಿ ನೇಮಕ ಮಾಡಿಕೊಂಡ ಮತದಾನಾಧಿಕಾರಿ ಸಂಖ್ಯೆ | |
| 5 | ಕ್ರಮಬದ್ಧವಾಗಿ ನೇಮಿಸಿಕೊಂಡ ಪೋಲಿಂಗ್ ಅಧಿಕಾರಿ ಗೈರು ಹಾಜರಿ ಕಾರಣ ಬೇರೆ ಪೋಲಿಂಗ್ ಅಧಿಕಾರಿಯನ್ನು ನೇಮಿಸಿಕೊಂಡಿರುವುದು ಮತ್ತು ಅಂಥ ನೇಮಕಕ್ಕೆ ಕಾರಣಗಳನ್ನು ತಿಳಿಸುವುದು. | |
| 6 | ಬಳಸಲಾದ ಮತಪೆಟ್ಟಿಗೆಗಳ ಸಂಖ್ಯೆ | |
| 7 | ಬಳಸಲಾದ ಕಾಗದ ಮೊಹರುಗಳ (ಪೇಪರ್ ಸೀಲ್)ಸಂಖ್ಯೆ | |
| 8 | ಮತದಾನ ಏಜೆಂಟರುಗಳ ಸಂಖ್ಯೆ ಮತ್ತು ತಡವಾಗಿ ಬಂದವರ ಸಂಖ್ಯೆ | |
| 9 | ಮತದಾನ ಕೇಂದ್ರಗಳಲ್ಲಿ ಮತದಾನ ಏಜೆಂಟರುಗಳನ್ನು ನೇಮಿಸಿಕೊಂಡ ಅಭ್ಯರ್ಥಿಗಳ ಸಂಖ್ಯೆ | |
| 10 | ಮತದಾರ ಪಟ್ಟಿಯಲ್ಲಿ ಗುರುತು ಮಾಡಿದ ಪ್ರತಿಗನುಗುಣವಾಗಿ ನೀಡಲಾದ ಮತಪತ್ರಗಳ ಸಂಖ್ಯೆ, ಮತದಾನ ಕೇಂದ್ರದಲ್ಲಿ ವಾಸ್ತವವಾಗಿ ನೀಡಿದ ಮತಪತ್ರಗಳ ಸಂಖ್ಯೆ | |
| | | |
| | ಪ್ರಥಮ ಪೋಲಿಂಗ್ ಅಧಿಕಾರಿಯ ಸಹಿ | ಎರಡನೇ ಪೋಲಿಂಗ್ ಅಧಿಕಾರಿಯ ಸಹಿ |

| | | |
|---|---|---|
| 11 | ಮತ ಹಾಕಿದ ಮತದಾರರ ಸಂಖ್ಯೆ | ಪುರುಷರು........................................<br>ಮಹಿಳೆಯರು........................................<br>ಒಟ್ಟು........................................ |
| 12 | ಆಕ್ಷೇಪಿತ ಮತಗಳು | ಅನುಮತಿಸಲಾದ ಮತಗಳ ಸಂಖ್ಯೆ........................................<br>ತಿರಸ್ಕೃತ ಮತಗಳ ಸಂಖ್ಯೆ<br>ಮುಟ್ಟುಗೋಲು ಹಾಕಿಕೊಂಡ ಮೊತ್ತ ರೂ............. |
| 13 | ಚುನಾವಣಾ ಕರ್ತವ್ಯದ ಪ್ರಮಾಣ ಪತ್ರ ಹಾಜರುಪಡಿಸಿ ಮತ ಹಾಕಿದ ವ್ಯಕ್ತಿಗಳ ಸಂಖ್ಯೆ | |
| 14 | ಜೊತೆಗಾರರ ಸಹಾಯದಿಂದ ಮತ ಹಾಕಿದ ಮತದಾರರ ಸಂಖ್ಯೆ | |
| 15 | ನೀಡಿದ ಮತಗಳು (ಟೆಂಡರ್ಡ್) | |
| 16 | ಮತದಾನವನ್ನು ಮುಂದೂಡುವ ಅವಶ್ಯಕತೆ ಇತ್ತೇ ಹಾಗಾದರೆ ಅಂಥ ಮುಂದೂಡಿಕೆಗೆ ಕಾರಣ ನೀಡಿ. | |
| 17 | ಚಲಾಯಿಸಲಾದ ಮತಗಳ ಸಂಖ್ಯೆ<br>ಬೆಳಿಗ್ಗೆ 7.00 ರಿಂದ ಬೆಳಿಗ್ಗೆ 9.00 ವರೆಗೆ<br>ಬೆಳಿಗ್ಗೆ 9.00 ರಿಂದ ಬೆಳಿಗ್ಗೆ 11.00 ವರೆಗೆ<br>ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ವರೆಗೆ<br>ಮಧ್ಯಾಹ್ನ 1.00 ರಿಂದ ಮಧ್ಯಾಹ್ನ 3.00 ವರೆಗೆ<br>ಮಧ್ಯಾಹ್ನ 3.00 ರಿಂದ ಸಂಜೆ 5.00 ವರೆಗೆ | |

| | | |
|---|---|---|
| 18 | ಮತದಾನ ಮುಕ್ತಾಯವಾಗುವ ಸಮಯದಲ್ಲಿ ನೀಡಲಾದ ಚೀಟಿಗಳ ಸಂಖ್ಯೆ | |
| 19 | ವಿವರಗಳೊಂದಿಗೆ ಚುನಾವಣಾ ಅಪರಾಧಗಳು<br>(ಎ) ಮತದಾನ ಕೇಂದ್ರದ ನೂರು ಮೀಟರಿನೊಳಗೆ ಪ್ರಚಾರ ನಡೆಸಿರುವ ಪ್ರಕರಣಗಳು,<br>(ಬಿ)ಮತ್ತೊಬ್ಬನಂತೆ, ವರ್ತಿಸಿ ಮತ ಹಾಕಿರುವ ಪ್ರಕರಣಗಳು<br>(ಸಿ ಮತದಾನ ಕೇಂದ್ರದಲ್ಲಿ ಪಟ್ಟಿ ಅಥವಾ ನೋಟೀಸು ಅಥವಾ ಇತರ ದಾಖಲೆಗಳನ್ನು ನಾಶ ಮಾಡಿದ ಅಥವಾ ತೆಗೆದು ಹಾಕಿದ ಪ್ರಕರಣಗಳು.<br>(ಡಿ)ಮತದಾರರಿಗೆ ಲಂಚ ನೀಡಿರುವ ಪ್ರಕರಣಗಳು,<br>(ಇ) ಮತದಾರರ (ಮತ್ತಿತರಿಗೆ) ಬೆದರಿಕೆ ಹಾಕಿದ ಪ್ರಕರಣಗಳ ಸಂಖ್ಯೆ<br>(ಎಫ್) ಮತಗಟ್ಟೆ ವಶಪಡಿಸಿಕೊಂಡ ಪ್ರಕರಣಗಳು<br>*ಮೇಲಿನವುಗಳ ಬಗ್ಗೆ ವಿವರಗಳನ್ನು ಕೊಡಿ* | |
| 20 | ಮತದಾನಕ್ಕೆ ಈ ಮುಂದಿನ ಕಾರಣಗಳಿಂದ ಅಡ್ಡಿಯಾಯಿತೇ ಅಥವಾ ತೊಂದರೆಯಾಯಿತೇ<br>(1) ದೊಂಬಿ<br>(2) ಬಹಿರಂಗ ಹಿಂಸೆ<br>(3) ನೈಸರ್ಗಿಕ ವಿಪತ್ತು<br>(4)ಯಾವುದೇ ಇತರ ಕಾರಣಗಳು<br>*ಮೇಲಿನವುಗಳ ಬಗ್ಗೆ ವಿವರಗಳನ್ನು ಕೊಡಿ* | |
| 21 | ಈ ಮುಂದಿನ ಕಾರಣಗಳಿಂದ ಮತದಾನಕ್ಕೆ ಭಂಗ ಉಂಟಾಯಿತೇ<br>(1)ಮತದಾನ ಕೇಂದ್ರದಲ್ಲಿ ಬಳಸಿದ ಯಾವುದೇ ಮತ ಪೆಟ್ಟಿಗೆಯನ್ನು ಪ್ರಿಸೈಡಿಂಗ್ ಅಧಿಕಾರಿ ಅಭಿರಕ್ಷೆಯಿಂದ ಕಾನೂನು ಬಾಹಿರವಾಗಿ ಹೊರಗೆ ತೆಗೆದುಕೊಂಡು ಹೋಗುವುದು; ಎಂದರೆ<br>ಅಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಲಾಯಿತು ಅಥವಾ ಕಳೆಯಲಾಯಿತು. | |

| | | |
|---|---|---|
| (2) | (ಎ)ಹಾನಿಗೊಳಿಸುವುದು ಅಥವಾ ವ್ಯತ್ಯಾಸಗೊಳಿಸುವುದು<br>(ಬಿ) ಯಾವುದೇ ವ್ಯಕ್ತಿಯು ಮತಪತ್ರಗಳ ಮೇಲೆ ಕಾನೂನು ಬಾಹಿರವಾಗಿ ಗುರುತು ಮಾಡಿರುವುದು ಮತ್ತು ಮತ ಪೆಟ್ಟಿಗೆಯಲ್ಲಿ ಇಡುವುದು.ದಯವಿಟ್ಟು ವಿವರ ಕೊಡಿ. | |
| 22 | ಅಭ್ಯರ್ಥಿಗಳು ಮಾಡಿದ ಗಂಭೀರ ಅಪವಾದಗಳು | |
| 23 | ಕಾನೂನು ಮತ್ತು ಸುವ್ಯವಸ್ಥೆ ಭಂಗದ ಪ್ರಕರಣಗಳ ಸಂಖ್ಯೆ | |
| 24 | ಮತದಾನ ಕೇಂದ್ರದಲ್ಲಿ ಎಸಗಲಾದ ತಪ್ಪುಗಳ ಮತ್ತು ಅಕ್ರಮಗಳು ಯಾವುದಾದರೂ ಇದ್ದಲ್ಲಿ, ಅವುಗಳ ವರದಿ | |
| 25 | ಮತದಾನ ಪ್ರಾರಂಭವಾಗುವ ಮುನ್ನ ಘೋಷಣೆಗಳನ್ನು ಮಾಡಲಾಗಿದೆಯೇ ಮತ್ತು ಅಗತ್ಯವಾದರೆ ಹೊಸ ಮತ ಪೆಟ್ಟಿಗೆಯನ್ನು ಉಪಯೋಗಿಸುವ ಸಂದರ್ಭದಲ್ಲಿ ಘೋಷಣೆಗಳನ್ನು ಮಾಡಲಾಗಿದೆಯೇ ಮತ್ತು ಅಗತ್ಯವಾಗಬಹುದಾದಂತ ಮತದಾನದ ಕೊನೆಯಲ್ಲಿ ಘೋಷಣೆ ಮಾಡಲಾಗಿದೆಯೇ ? | |

ಸ್ಥಳ:

ದಿನಾಂಕ

ಪ್ರಿಸೈಡಿಂಗ್ ಅಧಿಕಾರಿ ಸಹಿ

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**ನಮೂನೆ- 12**

**ಪ್ರಿಸೈಡಿಂಗ್ ಅಧಿಕಾರಿಯವರ ಘೋಷಣೆ**

**ಭಾಗ- I**

**ಮತದಾನವು ಪ್ರಾರಂಭವಾಗುವುದಕ್ಕೆ ಮೊದಲು ಪ್ರಿಸೈಡಿಂಗ್ ಅಧಿಕಾರಿರವರಿಂದ ಘೋಷಣೆ**

**.................................ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಯ ಚುನಾವಣೆ ಕ್ಷೇತ್ರದ ..................................**
**ಮತದಾನ ಕೇಂದ್ರದಲ್ಲಿ (ಮತಗಟ್ಟೆ ಸಂಖ್ಯೆ ಮತ್ತು** ಹೆಸರು_____________________
ಮತಗಟ್ಟೆ ಸಂಖ್ಯೆ ಮತ್ತು ಹೆಸರು ______________________________________________
**ಚುನಾವಣಾ ದಿನಾಂಕ: ______________________ ನಾನು ಈ ಮೂಲಕ ಘೋಷಿಸುವುದೇನೆಂದರೆ.**

1. ಮತದಾನಕ್ಕೆ ಉಪಯೋಗಿಸುವ ಮತಪೆಟ್ಟಿಗೆಯು ಖಾಲಿಯಾಗಿದೆಯೆಂದು, ಪೋಲಿಂಗ್ ಏಜೆಂಟರುಗಳಿಗೆ ಮತ್ತು ಹಾಜರಿದ್ದ ಇತರ ವ್ಯಕ್ತಿಗಳ ಸಮ್ಮುಖದಲ್ಲಿ ಪ್ರದರ್ಶಿಸಿದ್ದೇನೆ.
2. ಮತಪೆಟ್ಟಿಗೆಯ ಭದ್ರತೆಗಾಗಿ ಉಪಯೋಗಿಸುವ ಪೇಪರ್ ಸೀಲಿನ ಮೇಲೆ, ನನ್ನ ಸಹಿಯನ್ನು ಹಾಕಿದ್ದೇನೆ ಮತ್ತು ಅಲ್ಲಿ ಹಾಜರಿದ್ದ ಮತ್ತು ಸಹಿ ಮಾಡಲು ಬಯಸುವ ಪೋಲಿಂಗ್ ಏಜೆಂಟರುಗಳಿಂದ ಅದರ ಮೇಲೆ ಸಹಿಯನ್ನು ಪಡೆದಿದ್ದೇನೆ(ಪೇಪರ್ ಸೀಲನ್ನು ಉಪಯೋಗಿಸದೆ ಇರುವ ಕಡೆ ಇದು ಅನ್ವಯವಾಗುವುದಿಲ್ಲ)
3. ಮತದಾನದ ಸಮಯದಲ್ಲಿ ಉಪಯೋಗಿಸಬೇಕಾದ ಗುರುತು ಮಾಡಿರುವ ಮತದಾರರ ಪಟ್ಟಿಯು, ಅಂಚೆ ಮತಪತ್ರಗಳಿಗೆ ಮತ್ತು ಚುನಾವಣಾ ಕರ್ತವ್ಯ ಪತ್ರಗಳಿಗೆ ನೀಡುವ ಗುರುತಿನ ಹೊರತಾಗಿ ಬೇರೆ ಯಾವುದೇ ಗುರುತುಗಳನ್ನು ಹೊಂದಿಲ್ಲವೆಂದು ಪೋಲಿಂಗ್ ಏಜೆಂಟರುಗಳಿಗೆ ಮತ್ತು ಹಾಜರಿರುವ ಇತರ ವ್ಯಕ್ತಿಗಳಿಗೆ ನಾನು ಪ್ರದರ್ಶಿಸಿದ್ದೇನೆ ಮತ್ತು
4. . ಮತದಾನದ ಕೇಂದ್ರದಲ್ಲಿ ಉಪಯೋಗಿಸುವ ಮತಪತ್ರಗಳ ಮೊದಲ ಮತ್ತು ಕೊನೆಯ ಕ್ರಮಸಂಖ್ಯೆಯನ್ನು ಗುರುತಿಸಿಕೊಳ್ಳಲು ಪೋಲಿಂಗ್ ಏಜೆಂಟರಿಗೆ ಅವಕಾಶ ನೀಡಿದ್ದೇನೆ.

ಸಹಿ/-
ಪ್ರಿಸೈಡಿಂಗ್ ಅಧಿಕಾರಿ

ಪೋಲಿಂಗ್ ಏಜೆಂಟರ ಸಹಿ:

1. ___________ (___________ ಉಮೇದುವಾರ) 2. ___________ (___________ ಉಮೇದುವಾರ)

3. ___________ (___________ ಉಮೇದುವಾರ) 4. ___________ (___________ ಉಮೇದುವಾರ)

5. ___________ (___________ ಉಮೇದುವಾರ) 6. ___________ (___________ ಉಮೇದುವಾರ)

7. ___________ (___________ ಉಮೇದುವಾರ) 8. ___________ (___________ ಉಮೇದುವಾರ)

ಈ ಮುಂದಿನ ಪೋಲಿಂಗ್ ಏಜೆಂಟರುಗಳು ಈ ಘೋಷಣಾ ಪತ್ರದ ಮೇಲೆ ತಮ್ಮ ಸಹಿ ಮಾಡಲು ನಿರಾಕರಿಸಿದ್ದಾರೆ.

1. ___________ (___________ ಉಮೇದುವಾರ) 2. ___________ (___________ ಉಮೇದುವಾರ)

3. ___________ (___________ ಉಮೇದುವಾರ) 4. ___________ (___________ ಉಮೇದುವಾರ)

ದಿನಾಂಕ:

ಸಹಿ/-
ಪ್ರಿಸೈಡಿಂಗ್ ಅಧಿಕಾರಿ

**ಭಾಗ– II**

**ತರುವಾಯದ ಮತಪೆಟ್ಟಿಗೆ /ಮತಪೆಟ್ಟಿಗೆಗಳನ್ನು ಉಪಯೋಗಿಸುವ ಸಮಯದಲ್ಲಿ**

**.................................ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಯ ಚುನಾವಣೆ ಕ್ಷೇತ್ರದ ....................................**
**ಮತದಾನ ಕೇಂದ್ರದಲ್ಲಿ (ಮತಗಟ್ಟೆ ಸಂಖ್ಯೆ ಮತ್ತು ಹೆಸರು**________________________
ಮತಗಟ್ಟೆ ಸಂಖ್ಯೆ ಮತ್ತು ಹೆಸರು ________________________________________________
**ಚುನಾವಣಾ ದಿನಾಂಕ: ________________________ ನಾನು ಈ ಮೂಲಕ ಘೋಷಿಸುವುದೇನೆಂದರೆ.**

(1) ಮತದಾನಕ್ಕೆ ಉಪಯೋಗಿಸುವ ಎರಡನೆಯ : ಮೂರನೆಯ ಮತಪೆಟ್ಟಿಗೆಯು ಇದೆಯೆಂದು ಪೋಲಿಂಗ್ ಏಜೆಂಟರುಗಳಿಗೆ ಮತ್ತು ಅಲ್ಲಿ ಹಾಜರಿದ್ದ ಇತರ ವ್ಯಕ್ತಿಗಳ ಸಮ್ಮುಖದಲ್ಲಿ ನಿರೂಪಿಸಿದ್ದೇನೆ ; ಮತ್ತು

(2) ಮತದಾನ ಪೆಟ್ಟಿಗೆಯ ಭದ್ರತೆಗಾಗಿ ಉಪಯೋಗಿಸಿರುವ ಪೇಪರ್ ಸೀಲಿನ ಮೇಲೆ, ನನ್ನ ಸಹಿಯನ್ನು ಹಾಕಿದ್ದೇನೆ. ಮತ್ತು ಅಲ್ಲಿ ಹಾಜರಿದ್ದ ಮತ್ತು ಸಹಿ ಮಾಡಲು ಬಯಸುವ ಪೋಲಿಂಗ್ ಏಜೆಂಟರುಗಳಿಂದ ಅದರ ಮೇಲೆ ಸಹಿಯನ್ನು ಪಡೆದಿದ್ದೇನೆ.

(ಪೇಪರ್ ಸೀಲನ್ನು ಉಪಯೋಗಿಸದೆ ಇರುವ ಕಡೆ ಇದು ಅನ್ವಯವಾಗುವುದಿಲ್ಲ)

ಸಹಿ/– ________________
ಪ್ರಿಸೈಡಿಂಗ್ ಅಧಿಕಾರಿ

ಪೋಲಿಂಗ್ ಏಜೆಂಟರುಗಳ ಸಹಿ:

1. ____________ ( ____________ ಅಭ್ಯರ್ಥಿ ) 2.____________ ( ____________ ಅಭ್ಯರ್ಥಿ)
3. ____________ ( ____________ ಅಭ್ಯರ್ಥಿ ) 4.____________ ( ____________ ಅಭ್ಯರ್ಥಿ)
5. ____________ ( ____________ ಅಭ್ಯರ್ಥಿ ) 6.____________ ( ____________ ಅಭ್ಯರ್ಥಿ)
7. ____________ ( ____________ ಅಭ್ಯರ್ಥಿ ) 8.____________ ( ____________ ಅಭ್ಯರ್ಥಿ)

ಈ ಮುಂದಿನ ಪೋಲಿಂಗ್ ಏಜೆಂಟರುಗಳು ಈ ಘೋಷಣಾ ಪತ್ರದ ಮೇಲೆ ತಮ್ಮ ಸಹಿ ಮಾಡಲು ನಿರಾಕರಿಸಿದ್ದಾರೆ.

1. _______________ ( _______________ ಅಭ್ಯರ್ಥಿ)
2. _______________ ( _______________ ಅಭ್ಯರ್ಥಿ)
3. _______________ ( _______________ ಅಭ್ಯರ್ಥಿ)
4. _______________ ( _______________ ಅಭ್ಯರ್ಥಿ ')

ದಿನಾಂಕ:

ಸಹಿ/– ________________
ಪ್ರಿಸೈಡಿಂಗ್ ಅಧಿಕಾರಿ

## ಭಾಗ– III
## ಮತದಾನದ ಕೊನೆಯಲ್ಲಿ ಮಾಡುವ ಘೋಷಣೆ

1993ನೇ ಇಸವಿಯಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ಚುನಾವಣಾ ನಿಯಮಗಳ 59(1) ನಿಯಮದ ಮೇರೆಗೆ ಅಗತ್ಯಪಡಿಸಲಾದಂತೆ, **ಪ್ರಪತ್ರ 28/28 'ಎ'** ರಲ್ಲಿ ಮತಪತ್ರಗಳ ಲೆಕ್ಕದಲ್ಲಿ ಇರುವ ಪ್ರತಿಯೊಂದು ನಮೂದಿನ ಒಂದು ದೃಢೀಕೃತ ನಕಲು ಪ್ರತಿಯನ್ನು ಮತದಾನ ಕೇಂದ್ರದಲ್ಲಿ ಮತದಾನದ ಕೊನೆಯವರೆಗೆ ಹಾಜರಿದ್ದ ಮತ್ತು ಈ ಕೆಳಗೆ ಸಹಿ ಹಾಕಿರುವ ಏಜೆಂಟರಿಗೆ ಒದಗಿಸಿದ್ದೇನೆ.

ದಿನಾಂಕ: ಸಹಿ/–
ಸಮಯ: ಪ್ರಿಸೈಡಿಂಗ್ ಅಧಿಕಾರಿ

"ಮತಪತ್ರದ ಲೆಕ್ಕದಲ್ಲಿ ದಾಖಲು ಮಾಡಿರುವ ನಮೂನೆಗಳ ದೃಢೀಕೃತ ನಕಲು ಪ್ರತಿಯನ್ನು ಸ್ವೀಕರಿಸಲಾಗಿದೆ"

ಪೋಲಿಂಗ್ ಏಜೆಂಟರ ಸಹಿ:

1. ________________ ( ________________ ಉಮೇದುವಾರ)
2. ________________ ( ________________ ಉಮೇದುವಾರ)
3. ________________ ( ________________ ಉಮೇದುವಾರ)
4. ________________ ( ________________ ಉಮೇದುವಾರ)
5. ________________ ( ________________ ಉಮೇದುವಾರ)
6. ________________ ( ________________ ಉಮೇದುವಾರ)
7. ________________ ( ________________ ಉಮೇದುವಾರ)
8. ________________ ( ________________ ಉಮೇದುವಾರ)
9. ________________ ( ________________ ಉಮೇದುವಾರ)

ಮತದಾನದ ಕೊನೆಯಲ್ಲಿ ಈ ಮುಂದಿನ ಪೋಲಿಂಗ್ ಏಜೆಂಟರುಗಳು ಮತಪತ್ರ ಲೆಕ್ಕಗಳ ನಮೂದಿನ ದೃಢೀಕೃತ ಪ್ರತಿಯನ್ನು ಸ್ವೀಕರಿಸಲು ಮತ್ತು ಆ ಬಗ್ಗೆ ರಸೀದಿಯನ್ನು ನೀಡಲು ನಿರಾಕರಿಸಿದ್ದಾರೆ. ಆದ ಕಾರಣ ಮತಪತ್ರದ ಲೆಕ್ಕದ ದೃಢೀಕೃತ ನಕಲು ಪ್ರತಿಯನ್ನು ಅವರಿಗೆ ಸರಬರಾಜು ಮಾಡಿಲ್ಲ.

1. ________________ ( ________________ ಉಮೇದುವಾರ)
2. ________________ ( ________________ ಉಮೇದುವಾರ)
3. ________________ ( ________________ ಉಮೇದುವಾರ)
4. ________________ ( ________________ ಉಮೇದುವಾರ)
5. ________________ ( ________________ ಉಮೇದುವಾರ)
6. ________________ ( ________________ ಉಮೇದುವಾರ)
7. ________________ ( ________________ ಉಮೇದುವಾರ)
8. ________________ ( ________________ ಉಮೇದುವಾರ)
9. ________________ ( ________________ ಉಮೇದುವಾರ)

ದಿನಾಂಕ: ಸಹಿ/–
ಸಮಯ: ಪ್ರಿಸೈಡಿಂಗ್ ಅಧಿಕಾರಿ

## ನಮೂನೆ 16

## ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

**(ಉಪಯೋಗಿಸದೆ ಇರುವ ಪೇಪರ್‌ಸೀಲುಗಳೊಂದಿಗೆ ಲಕೋಟೆಯಲ್ಲಿರಿಸತಕ್ಕದ್ದು)**

**ಉಪಯೋಗಿಸಿರುವ ಪೇಪರ್ ಸೀಲುಗಳ ದಾಖಲೆ**

---------------------- ಗ್ರಾಮ/ತಾಲ್ಲೂಕು/ ಜಿಲ್ಲಾ ಪಂಚಾಯತಿಗೆ ಚುನಾವಣೆ ------

---------------------------- ಚುನಾವಣಾ ಕ್ಷೇತ್ರ

ಮತದಾನ ಕೇಂದ್ರದ ಹೆಸರು -------------------------

**ಭಾಗ– 1**

| ಉಪಯೋಗಿಸಿದ ಮತಪೆಟ್ಟಿಗೆಯ ಕ್ರಮ ಸಂಖ್ಯೆ | ಉಪಯೋಗಿಸಿದ ಪೇಪರ್ ಸೀಲಿನ ಕ್ರಮ ಸಂಖ್ಯೆ | ಷರಾ |
|---|---|---|
| 1.<br>2.<br>3. | | |

**ಭಾಗ– 11**

**ಪೇಪರ್ ಸೀಲುಗಳ ಲೆಕ್ಕ**

| | |
|---|---|
| 1. ಸರಬರಾಜು ಮಾಡಲಾದ ಪೇಪರ್ ಸೀಲುಗಳ ಕ್ರಮ ಸಂಖ್ಯೆ | ಮತದಾನ ಏಜೆಂಟರುಗಳ ಸಹಿ |
| --------- ಇಂದ --------- ವರೆಗೆ | 1. |
| 2. ಸರಬರಾಜು ಮಾಡಲಾದ ಒಟ್ಟು ಸಂಖ್ಯೆ -------------------------- | 2. |
| 3. ಉಪಯೋಗಿಸಲಾದ ಪೇಪರ್ ಸೀಲುಗಳ ಸಂಖ್ಯೆ --------------- | 3. |
| 4. ಚುನಾವಣಾಧಿಕಾರಿಯವರಿಗೆ ಹಿಂದಿರುಗಿಸಲಾದ ಉಪಯೋಗಿಸದೆ ಇರುವ ಪೇಪರ್ ಸೀಲುಗಳ ಸಂಖ್ಯೆ | 4. |
| (ಬಾಬು 3ನ್ನು ಬಾಬು 2ರಿಂದ ಕಳೆಯಿರಿ) ------------------------- | 5. |
| 5. ಹಾನಿಯಾಗಿರುವ ಪೇಪರ್ ಸೀಲುಗಳಿದ್ದರೆ ಅವುಗಳ ಕ್ರಮ ಸಂಖ್ಯೆ -------------------------- | 6. |

ಸ್ಥಳ :----------------

ದಿನಾಂಕ: -------------- ಪ್ರಿಸೈಡಿಂಗ್ ಅಧಿಕಾರಿಯ ಸಹಿ

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**ನಮೂನೆ – 20**

**ವಯಸ್ಸಿನ ಬಗ್ಗೆ ಮತದಾರನಿಂದ ಘೋಷಣೆಯ ನಮೂನೆ**

ಕ್ಷೇತ್ರದ ಪ್ರಸಕ್ತ ಮತದಾರರ ಪಟ್ಟಿಯನ್ನು ಸಿದ್ದಪಡಿಸಿರುವ ಪರಿಷ್ಕರಿಸಿರುವ 20___ ರ ಜನವರಿ ಒಂದನೇ ದಿನಾಂಕ ಎಂದರೆ ಅರ್ಹತಾದಾಯಕ ದಿನಾಂಕದಂದು ನನ್ನ ವಯಸ್ಸು 18 ವರ್ಷಗಳಿಗಿಂತ ಹೆಚ್ಚಾಗಿದೆಯೆಂದು ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ಘೋಷಿಸಿದ್ದೇನೆ ಮತ್ತು ದೃಢೀಕರಿಸಿದ್ದೇನೆ. ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವಿಕೆಗೆ ಅಥವಾ ಮತದಾರರ ಪಟ್ಟಿಯ ಸಿದ್ದಪಡಿಸುವಿಕೆ, ಪರಿಷ್ಕರಣೆ ಅಥವಾ ತಿದ್ದುಪಡಿಗೆ ಸಂಬಂಧಿಸಿದಂತೆ ಯಾವುದೇ ಸುಳ್ಳು ಘೋಷಣೆ ಮಾಡುವುದಕ್ಕೆ 1950 ರ ಪ್ರಜಾಪ್ರಾತಿನಿಧ್ಯ ಆಧಿನಿಯಮದ ಪ್ರಕರಣ 31 ರ ದಂಡರೂಪದ ಉಪಬಂಧಗಳ ಬಗ್ಗೆ ನಾನು ಅರಿತಿದ್ದೇನೆ.

ಮತದಾರನ ಸಹಿ/ ಹೆಬ್ಬೆಟ್ಟಿನ ಗುರುತು

_______________________

ತಂದೆ/ ತಾಯಿ/ ಗಂಡ

ಹೆಸರು _______________________

ಮತದಾರರ ಪಟ್ಟಿಯ ಭಾಗದ ಸಂಖ್ಯೆ _________

ದಿನಾಂಕ: _____________ ಮತದಾರನ ಕ್ರ.ಸಂ._____________

ಮೇಲಿನ ಹೆಸರಿನ ಮತದಾರನು ಮೇಲಿನ ಘೋಷಣೆಯನ್ನು ನನ್ನ ಮುಂದೆ ಮಾಡಿರುವನೆಂದು ಪ್ರಮಾಣೀಕರಿಸಿದ್ದೇನೆ.

ಪ್ರಿಸೈಡಿಂಗ್ ಅಧಿಕಾರಿಯ ಸಹಿ_________

ಮತಗಟ್ಟೆಯ ಸಂಖ್ಯೆ _________

ದಿನಾಂಕ: _____________ ಮತಗಟ್ಟೆಯ ಹೆಸರು __________________

## ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

## ನಮೂನೆ–21

**ಅವರ ವಯಸ್ಸಿನ ಬಗ್ಗೆ ಘೋಷಣೆ ನೀಡಿದ/ ಘೋಷಣೆ ನೀಡಲು ನಿರಾಕರಿಸಿದ ನಂತರ ಮತದಾನ ಮಾಡಿದ ಮತದಾರರ ಪಟ್ಟಿ**

------------------------ ಇಂದ (ಚುನಾವಣಾ ಕ್ಷೇತ್ರದ ಹೆಸರು) ---------------

--------- ಗ್ರಾಮ / ತಾಲ್ಲೂಕು / ಜಿಲ್ಲಾ ಪಂಚಾಯತಿಗೆ ಚುನಾವಣೆ

ಮತಗಟ್ಟೆಯ ಸಂಖ್ಯೆ ------------------- ಹೆಸರು -------------------------

ಭಾಗ–1

ವಯಸ್ಸಿನ ಬಗ್ಗೆ ಘೋಷಣೆ ನೀಡಿರುವ ಮತದಾರರ ಪಟ್ಟಿ

| ಕ್ರಮ ಸಂಖ್ಯೆ | ಮತದಾರರ ಹೆಸರು | ಮತದಾರರ ಪಟ್ಟಿಯ ಭಾಗದ ಸಂಖ್ಯೆ ಮತ್ತು ಕ್ರಮ ಸಂಖ್ಯೆ | ಮತದಾರರ ಪಟ್ಟಿಯಲ್ಲಿ ನಮೂದಿಸಿರುವ ವಯಸ್ಸು | ಪ್ರಿಸೈಡಿಂಗ್ ಅಧಿಕಾರಿಯಿಂದ ನಿರ್ಧರಿಸಿರುವ ವಯಸ್ಸು |
|---|---|---|---|---|
| **1** | **2** | **3** | **4** | **5** |
| 1 | | | | |
| 2 | | | | |
| 3 | | | | |
| 4 | | | | |
| ಇತ್ಯಾದಿ | | | | |

**ಭಾಗ–2**

**ವಯಸ್ಸಿನ ಬಗ್ಗೆ ಘೋಷಣೆ ಮಾಡಲು ನಿರಾಕರಿಸಿದ ಮತದಾರರ ಪಟ್ಟಿ**

| ಕ್ರಮ ಸಂಖ್ಯೆ | ಮತದಾರರ ಹೆಸರು | ಮತದಾರರ ಪಟ್ಟಿಯ ಭಾಗದ ಸಂಖ್ಯೆ ಮತ್ತು ಕ್ರಮ ಸಂಖ್ಯೆ | ಮತದಾರರ ಪಟ್ಟಿಯಲ್ಲಿ ನಮೂದಿಸಿರುವ ವಯಸ್ಸು | ಪ್ರಿಸೈಡಿಂಗ್ ಅಧಿಕಾರಿಯಿಂದ ನಿರ್ಧರಿಸಿರುವ ವಯಸ್ಸು |
|---|---|---|---|---|
| **1** | **2** | **3** | **4** | **5** |
| 1 | | | | |
| 2 | | | | |
| 3 | | | | |
| ಇತ್ಯಾದಿ | | | | |

ದಿನಾಂಕ: ____________ ಪ್ರಿಸೈಡಿಂಗ್ ಅಧಿಕಾರಿ ಸಹಿ __________________

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

## ಪ್ರಪತ್ರ–13

**[14(1) ನೇ ನಿಯಮವನ್ನು ನೋಡಿ]**

**ಮತದಾನದ ಏಜೆಂಟನ ನೇಮಕಾತಿ**

* ______________________ ಚುನಾವಣಾ ಕ್ಷೇತ್ರದಿಂದ ________________ ** ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಗೆ ನಡೆಯುವ ಚುನಾವಣೆ

ಮೇಲ್ಕಂಡ ಚುನಾವಣೆಯಲ್ಲಿ ಅಭ್ಯರ್ಥಿಯಾಗಿರುವ ______________________ ಎಂಬುವರ ಚುನಾವಣಾ ಏಜೆಂಟನಾದ ______________________ ಎಂಬ ನಾನು (ಹೆಸರು ಮತ್ತು ವಿಳಾಸ) ______________________ ಇವರನ್ನು __________ ಗಂಟೆಗೆ ಮತದಾನಕ್ಕಾಗಿ ಗೊತ್ತುಪಡಿಸಲಾದ ______________________ (ಸ್ಥಳ) ದಲ್ಲಿ __________ ಸಂಖ್ಯೆಯ ಮತದಾನ ಕೇಂದ್ರದಲ್ಲಿ ಹಾಜರಿರಲು ಮತದಾನ ಏಜೆಂಟನಾಗಿ ಈ ಮೂಲಕ ನೇಮಕ ಮಾಡುತ್ತೇನೆ.

ಸ್ಥಳ : __________

ದಿನಾಂಕ: __________ ಅಭ್ಯರ್ಥಿ** /ಚುನಾವಣಾ ಏಜೆಂಟನ ಸಹಿ

ಮತದಾನ ಏಜೆಂಟನಾಗಿ ಕಾರ್ಯ ನಿರ್ವಹಿಸಲು ನಾನು ಒಪ್ಪಿದ್ದೇನೆ.

ಸ್ಥಳ : __________

ದಿನಾಂಕ: __________ ಮತದಾನ ಏಜೆಂಟನ ಸಹಿ

ಪ್ರಿಸೈಡಿಂಗ್ ಅಧಿಕಾರಿಯ ಮುಂದೆ ರುಜು ಮಾಡಬೇಕಾದ ಮತದಾನ ಏಜೆಂಟನ ಘೋಷಣೆ

ಮೇಲ್ಕಂಡ ಚುನಾವಣೆಯಲ್ಲಿ 1993 ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 29 ನೇ ಪ್ರಕರಣದ ಮೂಲಕ ನಿಷೇಧಿತವಾದ ಯಾವುದೇ ಕೆಲಸವನ್ನು ಮಾಡುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ. ಇದನ್ನು ಓದಿದ್ದೇನೆ/ ಇದನ್ನು ನನಗೆ ಓದಿ ಹೇಳಲಾಗಿದೆ.

ದಿನಾಂಕ: __________ ಮತದಾನ ಏಜೆಂಟನ ಸಹಿ

ನನ್ನ ಮುಂದೆ ಸಹಿ ಮಾಡಲಾಗಿದೆ

ದಿನಾಂಕ: __________ ಪ್ರಿಸೈಡಿಂಗ್ ಅಧಿಕಾರಿ

---

* ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿ ಮಾಡಿದ ಸ್ಥಳದಲ್ಲಿ ಹಾಜರು ಪಡಿಸುವುದಕ್ಕಾಗಿ ಮತದನ ಏಜೆಂಟನಿಗೆ ನೀಡಬೇಕಾದುದು.

* ಚುನಾವಣೆಯ ಸಮುಚಿತ ವಿವರಗಳನ್ನು ಇಲ್ಲಿ ಸೇರಿಸಿ.

** ಸಮುಚಿತವಲ್ಲದ ಪರ್ಯಾಯಗಳನ್ನು ಹೊಡೆದುಹಾಕಿ.

**1993 ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 29ನೇ ಪ್ರಕರಣ:**

ಮತದಾನದ ರಹಸ್ಯವನ್ನು ಕಾಪಾಡುವುದು: (1) ಅಧಿನಿಯಮದ ಮೇರೆಗೆ ಯಾವುದೇ ಚುನಾವಣೆಯ ಮತಗಳನ್ನು ದಾಖಲು ಮಾಡುವುದು ಮತ್ತು ಎಣಿಸುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು, ಮತದಾನ ರಹಸ್ಯವನ್ನು ಕಾಪಾಡತಕ್ಕುದ್ದು ಮತ್ತು ಕಾಪಾಡಲು ಸಹಾಯ ಮಾಡತಕ್ಕುದ್ದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಅಧಿಕೃತಗೊಳಿಸಿದ ಯಾವುದೇ ಉದ್ದೇಶಕ್ಕಾಗಿ ಅಲ್ಲದೆ) ಅಂಥ ರಹಸ್ಯವನ್ನು ಉಲ್ಲಂಘಿಸುವುದೆಂದು ಪರಿಗಣಿಸುವಂಥ ಯಾವುದೇ ಮಾಹಿತಿಯನ್ನು ಯಾವನೇ ವ್ಯಕ್ತಿಗೆ ತಿಳಿಸತಕ್ಕುದಲ್ಲ.

(2) (1) ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದ್ದು.

ಬೆಲೆ : ಒಂದು ರೂಪಾಯಿ

# ಪ್ರಪತ್ರ–14

**[25(4) ನೇ ನಿಯಮವನ್ನು ನೋಡಿ]**

## ಮತದಾನ ಏಜೆಂಟನ ನೇಮಕಾತಿಯನ್ನು ರದ್ದುಗೊಳಿಸುವುದು

*________________ ಚುನಾವಣಾ ಕ್ಷೇತ್ರದಿಂದ ________________ **ಗ್ರಾಮ / ತಾಲ್ಲೂಕು / ಜಿಲ್ಲಾ ಪಂಚಾಯಿತಿಗೆ ನಡೆಸುವ ಚುನಾವಣೆ

**ರಿಟರ್ನಿಂಗ್ ಅಧಿಕಾರಿಯವರಿಗೆ**

ಮೇಲ್ಕಂಡ ಚುನಾವಣೆಯಲ್ಲಿ ಅಭ್ಯರ್ಥಿಯಾಗಿರುವ ________ ಚುನಾವಣಾ ಏಜೆಂಟನಾಗಿರುವ ____________ ಎಂಬ ನಾನು ____________ ದಲ್ಲಿ ______ ಸಂಖ್ಯೆಯ ಮತದಾನ ಏಜೆಂಟನಾದ ______________ ಇವರ ನೇಮಕಾತಿಯನ್ನು ಈ ಮೂಲಕ ರದ್ದುಗೊಳಿಸಿದ್ದೇನೆ.

ಸ್ಥಳ :
ದಿನಾಂಕ:

ಅಭ್ಯರ್ಥಿಯ / ಚುನಾವಣಾ ಏಜೆಂಟನ ಸಹಿ

---

* ಚುನಾವಣೆಯ ಸಮುಚಿತವಾದ ವಿವರಗಳನ್ನು ಇಲ್ಲಿ ಸೂಚಿಸಿ

** ಸಮುಚಿತವಲ್ಲದ ಪರ್ಯಾಯಗಳನ್ನು ಹೊಡೆದು ಹಾಕಿ.

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

## ಪ್ರಪತ್ರ–25

[51(2)(ಸಿ) ನಿಯಮವನ್ನು ನೋಡಿ]

## ಆಕ್ಷೇಪಿತ ಮತಗಳ ಪಟ್ಟಿ (ಛಾಲೆಂಜ್ಡ್)

*_______________ಚುನಾವಣಾ ಕ್ಷೇತ್ರದಿಂದ _______________ **ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಗೆ ಚುನಾವಣೆ.

ಮತದಾನ ಕೇಂದ್ರ ಸಂಖ್ಯೆ ಮತ್ತು ಮತದಾನದ ಕೇಂದ್ರದ ಹೆಸರು : _______________

| ನಮೂದಿತ ಕ್ರಮ ಸಂಖ್ಯೆ | ಮತದಾರನ ಹೆಸರು | ಕ್ರಮ ಸಂಖ್ಯೆ ಮತಪಟ್ಟಿಯ ಭಾಗ | ಆ ಭಾಗದಲ್ಲಿ ಮತದಾರರ ಹೆಸರು | ಆಕ್ಷೇಪಿಸಿರುವ ವ್ಯಕ್ತಿಯ ಸಹಿ ಅಥವಾ ಹೆಬ್ಬೆಟ್ಟಿನ ಗುರುತು | ಆಕ್ಷೇಪಿಸಿರುವ ವ್ಯಕ್ತಿಯ ವಿಳಾಸ | ಗುರುತಿಸುವವರು ಯಾರಾದರು ಇದ್ದರೆ ಅವರ ವಿಳಾಸ ಹೆಸರು | ಆಕ್ಷೇಪಿಸುವವರ ಹೆಸರು | ಪ್ರಿಸೈಡಿಂಗ್ ಅಧಿಕಾರಿಯ ಆದೇಶ | ಆಕ್ಷೇಪಣೆ ಮಾಡುವ ವ್ಯಕ್ತಿಯ ಠೇವಣಿ ಮರು ಸಂದಾಯ ಸ್ವೀಕರಿಸಿದ ಮೇಲೆ ಅವನ ಸಹಿ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

ಸ್ಥಳ :

ದಿನಾಂಕ: ಪ್ರಿಸೈಡಿಂಗ್ ಅಧಿಕಾರಿಯ ಸಹಿ:

* ಚುನಾವಣೆಯ ಸಮುಚಿತ ವಿವರಗಳನ್ನು ಇಲ್ಲಿ ಸೇರಿಸಿ,

** ಸಮುಚಿತವಲ್ಲದ ಪರ್ಯಾಯಗಳನ್ನು ಹೊಡೆದುಹಾಕಿ.

## ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

## ಪ್ರಪತ್ರ–26

[55(2) ನೇ ನಿಯಮವನ್ನು ನೋಡಿ]

## ಅಂಧ ಮತ್ತು ದುರ್ಬಲ ಮತದಾರರ ಪಟ್ಟಿ

*________________________ಚುನಾವಣಾ ಕ್ಷೇತ್ರದಿಂದ ___________________________________ **ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಗೆ ಚುನಾವಣೆ.

ಮತದಾನ ಕೇಂದ್ರ ಸಂಖ್ಯೆ ಮತ್ತು ಮತದಾನದ ಕೇಂದ್ರದ ಹೆಸರು : __________________________________

| ಮತದಾರನ ಭಾಗದ ಸಂಖ್ಯೆ ಮತ್ತು ಕ್ರಮ ಸಂಖ್ಯೆ | ಮತದಾರನ ಪೂರ್ಣ ಹೆಸರು | ಜೊತೆಗಾರನ ಪೂರ್ಣ ಹೆಸರು | ಜೊತೆಗಾರನ ಪೂರ್ಣ ವಿಳಾಸ | ಜೊತೆಗಾರನ ಸಹಿ |
|---|---|---|---|---|
| 1 | 2 | 3 | 4 | 5 |

ಸ್ಥಳ :

ದಿನಾಂಕ: ಪ್ರಿಸೈಡಿಂಗ್ ಅಧಿಕಾರಿಯ ಸಹಿ:

* ಚುನಾವಣೆಯ ಸಮುಚಿತ ವಿವರಗಳನ್ನು ಇಲ್ಲಿ ಸೇರಿಸಿ,

** ಸಮುಚಿತವಲ್ಲದ ಪರ್ಯಾಯಗಳನ್ನು ಹೊಡೆದುಹಾಕಿ.

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

## ಪ್ರಪತ್ರ–27

**[56(2) ನೇ ನಿಯಮವನ್ನು ನೋಡಿ]**

## ನೀಡಿದ ಮತಗಳ ಪಟ್ಟಿ (ಟೆಂಡರ್ಡ್)

*____________________ಚುನಾವಣಾ ಕ್ಷೇತ್ರದಿಂದ ____________________

**ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಗೆ ಚುನಾವಣೆ.

ಮತದಾನ ಕೇಂದ್ರದ ಸಂಖ್ಯೆ ಮತ್ತು ಮತದಾನ ಕೇಂದ್ರದ ಹೆಸರು ____________________

| ಭಾಗದ ಸಂಖ್ಯೆ ಮತ್ತು ಕ್ರಮ ಸಂಖ್ಯೆ ಮತ್ತು ಮತದಾರನ ಹೆಸರು | ಮತದಾರನ ವಿಳಾಸ | ನೀಡಲಾದ ಮತಪತ್ರದ ಕ್ರಮ ಸಂಖ್ಯೆ | ಈಗಾಗಲೇ ಮತ ಚಲಾಯಿಸಿರುವ ವ್ಯಕ್ತಿಗೆ ಕೊಟ್ಟ ಮತಪತ್ರದ ಕ್ರಮ ಸಂಖ್ಯೆ | ಮತ ನೀಡುವ ವ್ಯಕ್ತಿಯ ಸಹಿ ಅಥವಾ ಹೆಬ್ಬೆಟ್ಟಿನ ಗುರುತು |
|---|---|---|---|---|
| 1 | 2 | 3 | 4 | 5 |
| | | | | |

ಸ್ಥಳ :

ದಿನಾಂಕ: ಪ್ರಿಸೈಡಿಂಗ್ ಅಧಿಕಾರಿಯ ಸಹಿ

* ಇಲ್ಲಿ ಚುನಾವಣೆಯ ಸಮುಚಿತವಾದ ವಿವರಗಳನ್ನು ಸೇರಿಸಿ,

** ಸಮುಚಿತವಲ್ಲದ ಪರ್ಯಾಯವನ್ನು ಹೊಡೆದು ಹಾಕಿ.

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

## ಪ್ರಪತ್ರ–28

**[59(1) ನೇ ನಿಯಮವನ್ನು ನೋಡಿ]**

## ಭಾಗ–1 ಮತಪತ್ರಗಳ ಲೆಕ್ಕ

*____________________ಚುನಾವಣಾ ಕ್ಷೇತ್ರದಿಂದ __________________________

**ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಗೆ ಚುನಾವಣೆ.

ಮತದಾನ ಕೇಂದ್ರದ ಸಂಖ್ಯೆ ಮತ್ತು ಹೆಸರು ________________________

| | ಕ್ರಮ ಸಂಖ್ಯೆ | ಒಟ್ಟು |
|---|---|---|

1. ಸ್ವೀಕರಿಸಲಾದ ಮತಪತ್ರಗಳು__________ ರಿಂದ __________ ವರೆಗೆ
2. ಮತಪತ್ರಗಳು (ಮತದಾರರಿಗೆ ನೀಡದವು)
   (ಎ) ಪ್ರಿಸೈಡಿಂಗ್ ಅಧಿಕಾರಿಯು ಸಹಿ ಮಾಡಿರುವ
   ಮತಪತ್ರಗಳು
   (ಬಿ) ಪ್ರಿಸೈಡಿಂಗ್ ಅಧಿಕಾರಿಯು ಸಹಿ ಮಾಡದಿರುವ
   ಮತಪತ್ರಗಳು ____________________________
   ಒಟ್ಟೂ (ಎ + ಬಿ) ____________________________
3. ಮತದಾನ ಕೇಂದ್ರದಲ್ಲಿ ಮತದಾರರಿಗೆ ಕೊಟ್ಟ
   ಮತಪತ್ರಗಳು (1–2=3)____________________________
4. ಮತದಾನ ಕೇಂದ್ರದಲ್ಲಿ ಉಪಯೋಗಿಸಿದ ಆದರೆ
   ಮತಪೆಟ್ಟಿಗೆಯಲ್ಲಿ ಹಾಕಿರದ ಮತಪತ್ರಗಳು
   (ಎ) 51ನೇ ನಿಯಮದ ಮೇರೆಗೆ ಮತದಾನದ
   ಪ್ರಕ್ರಿಯೆಯನ್ನು ಉಲ್ಲಂಘಿಸಿದ್ದಕ್ಕಾಗಿ ರದ್ದು
   ಮಾಡಿದ ಮತಪತ್ರಗಳು
   (ಬಿ) ಇತರ ಕಾರಣಗಳಿಗಾಗಿ ರದ್ದು ಮಾಡಿದ
   ಮತಪತ್ರಗಳು
   (ಸಿ) ಟೆಂಡರ್ಡ್ ಮತಪತ್ರಗಳೆಂದು ಬಳಸಲಾದ
   ಮತಪತ್ರಗಳು____________________________
   ಒಟ್ಟು (ಎ+ಬಿ+ಸಿ) ____________________________
5. ಮತಪೆಟ್ಟಿಗೆಯಲ್ಲಿರುವ ಮತಪತ್ರಗಳು (3–4=5)
   (ಕ್ರಮ ಸಂಖ್ಯೆ ನೀಡಬೇಕಾದ ಅಗತ್ಯವಿಲ್ಲ)

ದಿನಾಂಕ: ಪ್ರಿಸೈಡಿಂಗ್ ಅಧಿಕಾರಿಯ ಸಹಿ

## ಭಾಗ–II ಎಣಿಕೆ ಫಲಿತಾಂಶ

| ಅಭ್ಯರ್ಥಿಯ ಹೆಸರು | ಚಲಾಯಿಸಲಾದ ಕ್ರಮಬದ್ಧ ಮತಗಳ ಸಂಖ್ಯೆ |
|---|---|
| **1.** | |
| **2.** | |
| **3.** | |
| **4.** | |
| **5.** | |

**II ತಿರಸ್ಕೃತ ಮತ ಪತ್ರಗಳು**

**III ಒಟ್ಟು**

III ನೇ ಬಾಬಿನಲ್ಲಿ ತೋರಿಸಿದ ಒಟ್ಟು ಮತಪತ್ರಗಳ ಸಂಖ್ಯೆಯು ಭಾಗ1ರ 3ನೇ ಬಾಬಿನ ಎದುರಿನಲ್ಲಿ ತೋರಿಸಿದ ಒಟ್ಟು ಸಂಖ್ಯೆಗೆ ಸಮನಾಗಿದೆಯೇ ಅಥವಾ ಈ ಎರಡು ಒಟ್ಟು ಸಂಖ್ಯೆಯ ನಡುವೆ ಯಾವುದೇ ವೆತ್ಯಾಸ ಕಂಡು ಬಂದಿದೆಯೇ?

**ಸ್ಥಳ:**

**ದಿನಾಂಕ:** **ಎಣಿಕೆ ಮೇಲ್ವಿಚಾರಕರ ಸಹಿ**

**ಸ್ಥಳ:**

**ದಿನಾಂಕ:** **ರಿಟರ್ನಿಂಗ್ ಅಧಿಕಾರಿಯ ಸಹಿ**

* ಇಲ್ಲಿ ಚುನಾವಣೆಯ ಸಮುಚಿತವಾದ ವಿವರಗಳನ್ನು ಸೇರಿಸಿ,

** ಸಮುಚಿತವಲ್ಲದ ಪರ್ಯಾಯವನ್ನು ಹೊಡೆದು ಹಾಕಿ.

ಸರ್ಕಾರಿ ಮುದ್ರಣಾಲಯ, ಬೆಂಗಳೂರು